# ಪ್ರಸಾದ

ದ್ವೈಮಾಸಿಕ

ಸಂಪುಟ ೩೫   ಸಂಚಿಕೆ ೬

ನವೆಂಬರ್–ಡಿಸೆಂಬರ್ ೨೦೨೦




ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಶ್ರೀ ಮಲೆ ಮಹದೇಶ್ವರಸ್ವಾಮಿ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಸಮಾರಂಭವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೆರವೇರಿಸುತ್ತಿರುವುದು. ಉಪಮುಖ್ಯಮಂತ್ರಿಗಳು, ಸಾಲೂರು ಮಠದ ಶ್ರೀಗಳು, ಸಚಿವರುಗಳು, ಶಾಸಕರುಗಳು ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳಿದ್ದಾರೆ (26.11.2020)



ಮುಡುಕುತೊರೆಯ ಶ್ರೀ ಭ್ರಮರಾಂಬಾ ಸಮೇತ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಸಂಕೀರ್ಣದ ಪುನರ್ ನಿರ್ಮಾಣದ ಶಂಕುಸ್ಥಾಪನೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೆರವೇರಿಸಿದರು. ಉಪಮುಖ್ಯಮಂತ್ರಿಗಳು, ಸಚಿವರುಗಳು, ಶಾಸಕರುಗಳು ಹಾಗೂ ಇತರರನ್ನು ಕಾಣಬಹುದು (25.11.2020)

# ಪ್ರಸಾದ

**ಸಂಪುಟ 35 : ಸಂಚಿಕೆ 6** **ನವೆಂಬರ್–ಡಿಸೆಂಬರ್ 2020**

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)

---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ

ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

ಮುಖಪುಟ ಚಿತ್ರ

ಮುಡುಕುತೊರೆಯ ಶ್ರೀ ಭ್ರಮರಾಂಬಾ ಸಮೇತ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಸಂಕೀರ್ಣದ ಪುನರ್ ನಿರ್ಮಾಣದ ಶಂಕುಸ್ಥಾಪನೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ನೆರವೇರಿಸಿದರು. ಶ್ರೀಮತಿ ರೋಹಿಣಿ ಸಿಂಧೂರಿ, ಶ್ರೀ ಎಸ್.ಟಿ. ಸೋಮಶೇಖರ್, ಶ್ರೀ ಗೋವಿಂದ ಕಾರಜೋಳ, ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಶ್ರೀ ಎಂ. ಅಶ್ವಿನ್ ಕುಮಾರ್, ಶ್ರೀ ಎಸ್.ಎ. ರಾಮದಾಸ್ ಮೊದಲಾದವರಿದ್ದಾರೆ (25.11.2020)

**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಅಕ್ಕಮಹಾದೇವಿಯ ಕಾಲ, ಜೀವನ ಕುರಿತ "ಪುರಾವೃತ್ತ" 11
**ಡಾ. ಡಿ.ಎ. ಶಂಕರ್**

ಕನ್ನಡ ಸಾಹಿತ್ಯ ಸಮ್ಮೇಳನಗಳ
ಅಧ್ಯಕ್ಷರ ಭಾಷಣಗಳು: ಆಶಯ ಮತ್ತು ಸವಾಲುಗಳು 18
**ಡಾ. ಕಾ.ವೆಂ. ಶ್ರೀನಿವಾಸಮೂರ್ತಿ**

ಚಿಂತನತ್ರಯ 31
**ಡಾ. ಎಸ್.ಪಿ. ಉಮಾದೇವಿ**

'ಅಯಂ ಮೇ ಹಸ್ತೋ ಭಗವಾನ್' ಎಂಬ ಋಗ್ವೇದ ಮಂತ್ರ
ಮತ್ತು ಇಷ್ಟಲಿಂಗ 38
**ಡಾ. ಸಿ. ಶಿವಕುಮಾರಸ್ವಾಮಿ**

ಗ್ರಾಮದೇವತೆಗಳು (ಸಪ್ತಮಾತೃಕೆಯರು) 44
**ಡಾ. ಪಿ.ಕೆ. ರಾಜಶೇಖರ**

ವಾರ್ತಾವಿಹಾರ 55
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 67

## ಮನವಿ

ಜೆಎಸ್ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

**'ಕಾ**ಲ' ಎನ್ನುವುದು ಅಖಂಡವಾದುದಾದರೂ, ಸ್ಥಗಿತಗೊಂಡ ನಂಬಿಕೆ, ನಡಾವಳಿಗಳು ಸ್ಥಿತ್ಯಂತರಗೊಂಡಾಗ ಅದರ ಅಖಂಡತೆಗೆ ಒಂದು ಕಾಲ್ಪನಿಕ ಗಡಿರೇಖೆಯನ್ನು ಹಾಕಿ ಅದನ್ನು 'ಕಾಲಘಟ್ಟ' ಎಂದು ಪರಿಕಲ್ಪಿಸಲಾಗುತ್ತದೆ. ಮನುಕುಲದ ಸಾಂಸ್ಕೃತಿಕ, ನಾಗರಿಕತೆಯ ಚಲನೆಯ ಸ್ವರೂಪ ಆಯಾ ಕಾಲಘಟ್ಟದಲ್ಲಿ ಒಂದೊಂದು ರೀತಿಯ ಒಪ್ಪಿತ ಕ್ರಮವಾಗಿ ಸರ್ವಮಾನ್ಯವಾಗಿರುತ್ತದೆ. ಭರತಖಂಡದ ವ್ಯಾಪ್ತಿಯಲ್ಲಿಯೇ ಇದನ್ನು ಪರಿಭಾವಿಸುವುದಾದರೆ, ಚರಿತ್ರಪೂರ್ವದ ಕಾಲಮಾನದಲ್ಲಿ 'ಕಾಡಿನ ನ್ಯಾಯ'ವನ್ನು ಒಪ್ಪಿತ ಮೌಲ್ಯವಾಗಿ ಸ್ವೀಕರಿಸಿ ಬದುಕುತ್ತಿದ್ದ ಮನುಷ್ಯ ಸಹಸ್ರಾರು ವರ್ಷಗಳ ನಂತರ, ಚಿಂತನೆಯ ಪಾತಳಿಗೆ ತನ್ನ ಬದುಕಿನ ನಡಾವಳಿಗಳನ್ನು ಬದಲಾಯಿಸಿಕೊಂಡ. ಮುಂದೆ 'ಕಾಡಿನ ನ್ಯಾಯ'ದ ಬದುಕು, 'ಜ್ಞಾನಪ್ರೇರಿತ' ಪಾತಳಿಯಲ್ಲಿ ಹರಿಯತೊಡಗಿತು. ಕಾಡು, ನಾಡಿನ ಸ್ವರೂಪವನ್ನು ಪಡೆಯತೊಡಗಿದಂತೆ ಹಿಂದೆ ಇದ್ದ ನಡವಳಿಕೆಯ ಬರ್ಬರತೆ ಈ ಕಾಲಘಟ್ಟದಲ್ಲಿ 'ಸಾತ್ವಿಕ ಸ್ವರೂಪ'ಕ್ಕೆ ತಿರುಗಿ, ಜ್ಞಾನಕ್ಕೆ ಮಾತ್ರ ಪ್ರಾಧಾನ್ಯ ದೊರಕಿತು. ಜಾತಿ, ಮತ, ಪಂಥ ಮುಂತಾದ ಸಾಮಾನ್ಯ ಸ್ತರದ ಪರಿಕಲ್ಪನೆಗಳು ಯಾವುದೂ ಇರದೆ ಶುದ್ಧ ಜ್ಞಾನವೇ ಸಮಾಜಕ್ಕೆ ಪ್ರಖರ ಬೆಳಕಾಯಿತು. ಋಷಿಮುನಿಗಳು, ದಾರ್ಶನಿಕರು ತಮ್ಮ ತಪೋಭೂಮಿಕೆಯಲ್ಲಿ ನಡೆಸಿದ ಚಿಂತನೆಗಳು ವ್ಯಷ್ಟಿ ಮತ್ತು ಸಮಷ್ಟಿಯ ಬದುಕಿನ ಮಾರ್ಗದರ್ಶಕ ಸೂತ್ರಗಳಾದುವು. ಇಂತಹ ದಾರ್ಶನಿಕರ ಚಿಂತನೆಗಳಲ್ಲಿ ಯಾವುದೇ ವೈಯಕ್ತಿಕ ಹಿತಾಸಕ್ತಿ ಇಲ್ಲದೇ ಅವೆಲ್ಲವೂ ದೂರದೃಷ್ಟಿಯ ಫಲಿತಗಳಾಗಿದ್ದುದರಿಂದ ರಾಜನಿಂದ ಪ್ರಜೆಗಳ ತನಕ ಅವುಗಳನ್ನು 'ದೇವವಾಣಿ'ಯೆಂದೇ ಪರಿಗಣಿಸಿ ಅನುಸರಿಸುತ್ತಿದ್ದರು. ವೇದೋಪನಿಷತ್ತುಗಳ ಕಾಲಮಾನ ಅದು. ಅವೆಲ್ಲವೂ ಶುದ್ಧ ಜ್ಞಾನದ ದರ್ಶನದೀಪ್ತವಾದ ಮಂತ್ರಗಳೇ ಆಗಿದ್ದು, ಇಂದಿಗೂ ಭಾರತೀಯರ ಬದುಕಿನಲ್ಲಿ ವ್ಯಾಪಕವಾಗಿರುವುದನ್ನು ಕಾಣಬಹುದಾಗಿದೆ.

ಮುಂದಿನ ಕಾಲಘಟ್ಟದಲ್ಲಿ ಜ್ಞಾನದ ಸ್ಥಾನವನ್ನು ದೈಹಿಕ ಶಕ್ತಿ (ತೋಳ್ಬಲ) ಆಕ್ರಮಿಸತೊಡಗಿತು. ಮಹಾಭಾರತದ ಕಾಲ ಇದಕ್ಕೆ ಉದಾಹರಣೆಯಾಗಿದೆ. ಒಂದು ಕುಟುಂಬದ ದ್ವೇಷ, ಅಸೂಯೆ ಮುಂತಾದ ಆಂತರಿಕ ಸಮಸ್ಯೆಯ ಕಾರಣಕ್ಕೆ

ಅಕ್ಷೋಹಿಣಿಗಳಷ್ಟು ಸೈನಿಕರ ಮಾರಣಹೋಮ ನಡೆಯಿತು. ಸಂಜಯ, ಭೀಷ್ಮ, ದ್ರೋಣರಂತಹವರೂ ಅಸಹಾಯಕರಾಗಿ ಅದಕ್ಕೆ ಸಾಕ್ಷಿಯಾಗಬೇಕಾಯಿತು. ಯುದ್ಧದ ನಂತರದ ಭೀಕರ ಸನ್ನಿವೇಶದಲ್ಲಿ ರಾಜಾಧಿರಾಜರಾಗಿ ಮೆರೆದವರು ಹಸಿವಿನಿಂದ ನರಳಿದರು. ಇಡೀ ಯಾದವ ಕುಲ ಪರಸ್ಪರ ತಾವೇ ಹೊಡೆದಾಡಿಕೊಳ್ಳುವ ಸ್ಥಿತಿ ನಿರ್ಮಾಣವಾಯಿತು.

ಮುಂದಿನ ಕಾಲಘಟ್ಟದಲ್ಲಿ ಇಂತಹ ಯುದ್ಧಗಳು ತಮ್ಮ ಮೂಲಸ್ವರೂಪವನ್ನು ಕಳೆದುಕೊಂಡು, ಆರ್ಥಿಕ ಆಕ್ರಮಣದ ಹೊಸ ಮಾದರಿಯನ್ನು ರೂಪಿಸಿಕೊಂಡವು. ಈ ನವೀನ ಮಾದರಿಯ ಯುದ್ಧ ಮುಂದುವರಿದ ಹಾಗೂ ಹಿಂದುಳಿದ ರಾಷ್ಟ್ರಗಳ ಸಂಘರ್ಷವಾಗಿ ಮಾರ್ಪಟ್ಟು, ಇಡೀ ಮನುಕುಲ, ಇದರಿಂದ ಇಂದು ತತ್ತರಿಸಿಹೋಗಿದೆ. ರೋಗವನ್ನು ಹರಡುವ, ಹಾಗೆಯೇ ಅದನ್ನು ಪರಿಹರಿಸುವ ಎರಡೂ ಅಸ್ತ್ರಗಳನ್ನು ಪ್ರಬಲರೇ ಹೊಂದಿದ್ದು, ಉಳಿದವರು ಅಸಹಾಯಕರಾಗಿದ್ದಾರೆ. ಯುವ ಸಮುದಾಯವಂತೂ ಪರಂಪರಾಗತ ಬದುಕು ಹಾಗೂ ಆಧುನಿಕತೆಯ ಮಾರುಕಟ್ಟೆ ಸಂಸ್ಕೃತಿಗಳ ನಡುವೆ ಸಿಲುಕಿ, ಬದುಕಿನ ಸ್ಪಷ್ಟ ದಾರಿಯ ಹುಡುಕಾಟದಲ್ಲಿದ್ದಾರೆ. ಇದು ಕುಟುಂಬ ಜೀವನದ ಮೇಲೂ ಪ್ರಭಾವ ಬೀರಿ ಕೂಡು ಕುಟುಂಬಗಳು ಮರೆಯಾಗಿ, ಕಿರು ಕುಟುಂಬಗಳು ತಲೆ ಎತ್ತುತ್ತಿದ್ದು, ಒಂದು ರೀತಿಯ ವಿಭಜನೆ ಪ್ರಾರಂಭವಾಗಿದೆ. ಸಂಪತ್ತಿನ ಸಂಗ್ರಹವನ್ನೇ ಪ್ರಮುಖ ಗುರಿಯಾಗಿಸಿಕೊಂಡು ಮೌಲ್ಯಯುತ ರಾಜಮಾರ್ಗಗಳನ್ನು ತೊರೆದು ಧಾವಂತದಲ್ಲಿ ಓಡುತ್ತಿರುವ ಯುವಸಮುದಾಯ ಸಹಜೀವನ, ಸಂಘಟನೆ, ಸಮುದಾಯ ಪ್ರಜ್ಞೆ, ಕೌಟುಂಬಿಕ ನೆಮ್ಮದಿಗಳನ್ನು ಮರೆತು ವಿಘಟನೆಯ ಹಾದಿಯನ್ನು ಹಿಡಿದಿದೆ.

ವ್ಯಕ್ತಿಗತವಾದ ಸಾಧನೆ ಎನ್ನುವುದು ಶ್ಲಾಘನೀಯವಾದುದು. ಆದರೆ ಅದರ ಫಲ ಸಮಾಜಕ್ಕೆ ಸಂದಾಯವಾಗಬೇಕು. ಯಾವುದೇ ವ್ಯಕ್ತಿಯ ಬೆಳವಣಿಗೆಯಲ್ಲಿ ನಿಸರ್ಗದ ಪಾತ್ರ, ಸಮಾಜದ ಪಾತ್ರ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಇದ್ದೇ ಇರುತ್ತದೆ. ಅವುಗಳೊಳಗೆ ಒಂದಾಗಿ ಬದುಕುವುದು, ಅವುಗಳ ಉನ್ನತೀಕರಣಕ್ಕೆ ಶ್ರಮಿಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ. ಇಂತಹ ಪ್ರಜ್ಞೆ ಇದ್ದಾಗ ಮಾತ್ರ ಕೌಟುಂಬಿಕ ಜೀವನದಿಂದ ಹಿಡಿದು ಸಾಮಾಜಿಕ ಸಹಜೀವನ ಸಾಧ್ಯವಾಗುತ್ತದೆ. 'ಎಲ್ಲರೊಳಗೊಂದಾಗಿ' 'ಎಲ್ಲರಿಗಾಗಿ ಬದುಕುವ' ಭಾವಸ್ಥಿತಿ ಇಂದಿನ ಅನಿವಾರ್ಯತೆಯಾಗಿದೆ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

ಏಳು ವರ್ಷದ ಬಾಲಕ – ವಿಜಯದಶಮಿಯ ಸಂದರ್ಭದಲ್ಲಿ ತಂದೆತಾಯಿಯರ ಜೊತೆ ಚಾಮುಂಡಿ ಬೆಟ್ಟಕ್ಕೆ ಹೋಗುತ್ತಿದ್ದ. ಚಾಮುಂಡಿ ಬೆಟ್ಟ ಒತ್ತಾದ ಕಾಡಿನಿಂದ ಕೂಡಿದೆ. ಹುಲಿ ಚಿರತೆಗಳೂ ಅಲ್ಲಿ ಇವೆ ಎಂದು ಅವರಿವರ ಬಾಯಲ್ಲಿ ಕೇಳಿದ್ದ ಬಾಲಕನಿಗೆ ಅಲ್ಲಿ ದೊಡ್ಡ ಕಾಡೇನೂ ಕಾಣಿಸಲಿಲ್ಲ. ಸಹಜವಾಗಿಯೇ ತಂದೆಯನ್ನು ಕೇಳಿದ.

ದೇವರ ದರ್ಶನದ ಧಾವಂತದಲ್ಲಿದ್ದ ಅವರಿಗೆ, ಹುಡುಗನ ಪ್ರಶ್ನೆ ಅಷ್ಟು ದೊಡ್ಡದೆಂದು ಅನಿಸಲಿಲ್ಲ. ಆದರೂ, ಒಂದು ಕಾಲದಲ್ಲಿ ಅಂತಹ ಕಾಡು ಇತ್ತು. ಈಗ ಮರಗಳ್ಳರ ಕಾರಣದಿಂದ ಕುರುಚಲು ಕಾಡಾಗಿದೆ ಎಂದು ಉತ್ತರಿಸಿದರು. ಚಲಿಸುತ್ತಿದ್ದ ಕಾರಿನಲ್ಲಿ ಸ್ವಲ್ಪ ಹೊತ್ತು ಹಾಗೆಯೇ ಕುಳಿತು ತದೇಕ ದೃಷ್ಟಿಯಿಂದ ಸುತ್ತಮುತ್ತ ನೋಡುತ್ತಾ, ಅಂತಹ ಕಳ್ಳರನ್ನು ಹಿಡಿಯುವುದು ಕಷ್ಟವೇನೂ ಆಗುವುದಿಲ್ಲ. ಒಂದು 'Device' ಮೂಲಕ ಮರಗಳ್ಳರನ್ನು ಸುಲಭವಾಗಿ ಹಿಡಿಯಬಹುದು. ಅವರು ಮರ ಕಡಿಯುವಾಗಲೇ ಅದು ಸಂಬಂಧಪಟ್ಟವರಿಗೆ 'Message' ಕಳುಹಿಸುತ್ತದೆ. ಅದನ್ನೇಕೆ ಮಾಡಬಾರದು ಎಂದ. ತಂದೆ ತಾಯಿಗಳು ಮರುದಿನ ಅರಣ್ಯಾಧಿಕಾರಿಯೊಬ್ಬರಿಗೆ ತಮ್ಮ ಪುತ್ರನ ಆಲೋಚನೆಯನ್ನು ತಿಳಿಸಿದರು. ಇದರಿಂದ ಅಚ್ಚರಿಗೊಂಡ ಅಧಿಕಾರಿಗಳು, ಅದಕ್ಕೆ ಕೇಂದ್ರ ಸರ್ಕಾರದ ಮಟ್ಟದಲ್ಲಿ ಒಪ್ಪಿಗೆ ಸಿಕ್ಕಬೇಕು, ಆದರೆ ಅದು ಅಷ್ಟು ಸುಲಭವಲ್ಲ ಎಂದು ತಿಳಿಸಿದರು. ಅದಕ್ಕೆ ಸಂಬಂಧಪಟ್ಟಂತೆ ಈಗ ಪತ್ರವ್ಯವಹಾರದ ಪ್ರಕ್ರಿಯೆ ಪ್ರಾರಂಭವಾಗಿದೆ, ಇರಲಿ.

ಅವನ ಸ್ವವಿವರಗಳು ಭಾವಚಿತ್ರಗಳ ಸಮೇತ ಸುಮಾರು ಮೂವತ್ತು ಪುಟಗಳಷ್ಟಿದೆ. ಐದನೆಯ ವರ್ಷಕ್ಕೆ ಈತನ ಬುದ್ಧಿಮತ್ತೆ (IQ) 180 ಇತ್ತು. ಆ ಕಾರಣಕ್ಕೆ ಈತನ ಭಾವಚಿತ್ರ Mensa World Journal'ನ ಮುಖಪುಟದಲ್ಲಿ ಪ್ರಕಟಗೊಂಡಿದೆ. ಬೆಂಗಳೂರಿನ Orchids International Schoolನಲ್ಲಿ ವ್ಯಾಸಂಗ ಮಾಡುತ್ತಿರುವ ಈ ಬಾಲಕನ ಹೆಸರು ರಿಷಿಶಿವ್ ಪಿ., ತಂದೆ ಪ್ರಸನ್ನಕುಮಾರ್, ಬೆಂಗಳೂರಿನ ಜೈನ್ ವಿ.ವಿ.ಯಲ್ಲಿ ಪ್ರಾಧ್ಯಾಪಕರು. ತಾಯಿ ರೇಚೇಶ್ವರಿ, ಬೆಂಗಳೂರಿನ ಐಬಿಎಂನಲ್ಲಿ ನೌಕರರು. ಇವನ ಸ್ವವಿವರ ಹೀಗಿದೆ.

Rishi Shiv P – Youngest Indian Mensan with 180 IQ

DOB – 28th Dec 2013

Rishi Shiv P, 6 yrs precocious child who is youngest Indian "Mensan" (Mensa International)

Rishi is highly inquisitive and has inclinations towards Science & Technology, Mathematics, Space Science and coding, which is one of his intriguing traits. He is one of the youngest "Youtuber" who owns a channel, every episode he dives into paramount science related topics and elucidates them comprehensively. He has bagged many certifications from various competitions with respect to coding, academics, chess, speakathon etc. Rishi was introduced to coding when he was 5 years old, He is a passionate coder and has developed many Android Applications such as "IQ Test App for kids", "Know Countries and Continents" etc.. Astonishing part of his achievements is that Rishi was hosted in one of the Tech Giants "IBM". IBM India Software Labs . As a token of appreciation to this little champ for all the great endeavours procured at such young age, India Book of Records certified him, and he is now in the book of records. For details please visit his facebook page https://www.facebook.com/Rishi-Shiv-P-761351900948819

Youtube channel - https://www.youtube.com/channel/UCGvnM6et2_97LGxsklwiUtA

Rishi's accomplishments are as follows:

- Youngest Indian Mensan with 180 IQ
- Youngest Mensan to be part of British Mensa Annual Gathering, which was conducted in Sep 2019, UK
- Invited by Dr Sudha Murthy (Chairman of Infosys Foundation) and he was fortunate to receive her blessings in her residence

- Certified Youngest Android application developer (IQ Quiz App for kids and Know countries and Continents) and has been identified as one among the top 6 Indian kids in coding by WhitehatJr team
- His App's are listed in Google Play Store
- Hosted by IBM Bangalore ISL (India Software Lab) India 2019
- Guest Speaker in IBM Software Lab in "Trailblazers…. stories that inspire"
- India Book Of Records for his high IQ
- Won medal and certificates in Coding, Chess and Speakathon
- Honoured with Former Association of Karnataka with Puttanayya Award

ಸುತ್ತೂರು ಶ್ರೀಮಠದ ಭಕ್ತರಾದ ಈತನ ಪೋಷಕರಿಗೆ ತಮ್ಮ ಪುತ್ರನಿಗೆ ಪರಮಪೂಜ್ಯರಿಂದ ಆಶೀರ್ವಾದ ಮಾಡಿಸಬೇಕು ಎನ್ನುವ ಹೆಬ್ಬಯಕೆ ಉಂಟಾಯಿತು. ಹುಡುಗನ ಸ್ವವಿವರಗಳನ್ನು ಕಳುಹಿಸಿ ಭೇಟಿಗೆ ಅವಕಾಶ ಕೋರಿದರು. ಮೈಸೂರಿನ ಸುತ್ತೂರು ಶ್ರೀಮಠದಿಂದ ಇಂತಹ ದಿನ ಬರಬಹುದು ಎನ್ನುವ ಸಂದೇಶ ರವಾನೆಯಾಯಿತು. ಕೋವಿಡ್ ಭಯ, ಶ್ರೀಮಠದ ಕಾರ್ಯಭಾರಗಳು, ರಾಜಕೀಯ ಮುಖಂಡರು, ಭಕ್ತ ಸಮುದಾಯದ ಸಂದರ್ಶನದ ಒತ್ತಡ! ಆದರೂ ಪೂಜ್ಯರಿಗೆ ಈ ಪ್ರತಿಭಾವಂತ ಬಾಲಕನನ್ನು ನೋಡುವ ಕುತೂಹಲ.

ಶ್ರೀಮಠಕ್ಕೆ ಬಂದ ಉದ್ದನೆಯ ಆಕರ್ಷಕ ತಲೆಕೂದಲಿನ ಪುಟ್ಟ ದೇಹದ ಬಾಲಕನನ್ನು ನೋಡಿ, ಪೂಜ್ಯರಿಗೆ ಅತೀವ ಸಂತೋಷವಾಯಿತು. ಅಂದು ಪೂಜ್ಯರ ದೃಷ್ಟಿಗೆ ಆ ಬಾಲಕನೇ ಕೇಂದ್ರ ಬಿಂದುವಾಗಿದ್ದ. ಅಂದು ಶ್ರೀಮಠಕ್ಕೆ ಉನ್ನತ ಅಧಿಕಾರಿಗಳು, ಸಮಾಜದ ಧುರೀಣರು – ಹೀಗೆ ಅನೇಕರು ಬಂದು ಶ್ರೀಗಳ ದರ್ಶನಕ್ಕೆ ಕಾತುರರಾಗಿದ್ದರು. ಅವರ ಸಮಕ್ಷಮದಲ್ಲಿ ಪೂಜ್ಯರು, ಆ ಬಾಲಕನಿಗೆ ಅನೇಕ ಪ್ರಶ್ನೆಗಳನ್ನು ಕೇಳುತ್ತಾ ಹೋದರು. ಅನಂತರ ಎಲ್ಲರ ಮುಂದೆ ಏನಾದರೂ ಮಾತನಾಡುವಂತೆ ಹೇಳಿದರು. ಆ ಮುಗ್ಧ ಬಾಲಕ, ಮಾತನಾಡತೊಡಗಿದ. ಆ 'ಬಾಲಭಾಷೆ'ಯಲ್ಲಿಯೂ ಪ್ರಬುದ್ಧತೆಯ ಮಿಂಚುಗಳು ಗೋಚರಿಸಿದ್ದು ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿತು. ಗುರುಗಳು ಆತನನ್ನು ಕೂರಿಸಿ,

ರುದ್ರಾಕ್ಷಿ ಮಾಲೆಯನ್ನು ಹಾಕಿ, ಶಾಲುಹೊದಿಸಿ, ಫಲಪುಷ್ಪಗಳನ್ನು ನೀಡಿ ಆಶೀರ್ವದಿಸಿದ್ದನ್ನು ನೋಡಿ ಅಲ್ಲಿ ನೆರೆದಿದ್ದವರ ಮನಸ್ಸು ತುಂಬಿಬಂತು. ತುಂಬಾ ಅಳುಕಿನಿಂದಲೇ ಜಗದ್ಗುರುಗಳ ಸನ್ನಿಧಿಗೆ ಬಂದ ತಂದೆತಾಯಿಗಳಲ್ಲಿ ಈಗ ಧನ್ಯತಾ ಭಾವ ಹೆಪ್ಪುಗಟ್ಟಿತ್ತು.

ಜಗದ್ಗುರುಗಳವರು ತಮ್ಮ ಕಾರ್ಯಭಾರಗಳ ಒತ್ತಡದಲ್ಲಿಯೂ, ದರ್ಶನಕ್ಕೆ ಬಂದಿದ್ದ ಅನೇಕರ ಬದಲು ಈ ಬಾಲಕನಿಗೆ ಕೊಟ್ಟ ಪ್ರಾಶಸ್ತ್ಯ ಮತ್ತೆ ಮತ್ತೆ ಮನನ ಮಾಡುವಂತಹದ್ದಾಗಿದೆ. ಏಕೆಂದರೆ ಯಾವುದೇ ಸಮಾಜದಲ್ಲಿ ಇಂತಹ ಪ್ರತಿಭಾವಂತರ ಸಂಖ್ಯೆ ಕೆಲವೊಮ್ಮೆ ಬೆರಳೆಣಿಕೆಗೂ ಸಿಕ್ಕದಷ್ಟು ಇರುತ್ತದೆ. ಇಂತಹವರನ್ನು ಸಮಾಜ ಗೌರವಿಸಬೇಕು ಮತ್ತು ಪೋಷಿಸಬೇಕು. ಅಂದಂದಿನ ದಂದುಗಗಳಲ್ಲಿ ತೊಳಲಾಡುತ್ತಾ, ಗಾಳಿಬಂದಾಗ ಹೇಗೋ ತೂರಿಕೊಂಡು ಭೋಗದ ಬದುಕಿಗೆ ಹಂಬಲಿಸುವವರ ಸಂಖ್ಯೆಯೇ ಎಲ್ಲ ಕಡೆ ಕರೋನಾದಂತೆ ಹಬ್ಬುತ್ತಿರುವ ಇಂದಿನ ಕಾಲಮಾನದಲ್ಲಿ, ಕಿರಿಯ ವಯಸ್ಸಿಗೇ ದೊಡ್ಡ ದೊಡ್ಡ ಕನಸು ಕಂಡು, ಆ ದಿಸೆಯಲ್ಲಿ ದಿಟ್ಟ ಹೆಜ್ಜೆಗಳನ್ನು ಇಡುವ ಇಂತಹವರ ಅನಿವಾರ್ಯತೆ ಇಂದು ತುಂಬಾ ಇದೆ. ಒಂದು ಸಮಾಜ 'Harizontal ಆಗಿ ಬೆಳೆಯುವುದಕ್ಕೆ ಅನೇಕ ಮಾರ್ಗಗಳಿವೆ. ಅದು ಕೆಲವೊಮ್ಮೆ ಟೊಳ್ಳಾಗಿರುತ್ತದೆ ಮತ್ತು ಅದಕ್ಕೆ ಇರುವುದು ಕೇವಲ ಮುಖಬೆಲೆ ಮಾತ್ರ. ಆದರೆ ಒಂದು ಸಮಾಜದ ಗಟ್ಟಿತನಕ್ಕೆ ಮುಖ್ಯವಾಗುವುದು ಅದರ Vertical ಆದ ಆಂತರಿಕ ಬೆಳವಣಿಗೆ. ಇಂತಹ ಬೆಳವಣಿಗೆ ಸಮಾಜದ ಅಂತರಂಗವನ್ನು ಆ ಮೂಲಕ ಬಹಿರಂಗವನ್ನು ಶಾಶ್ವತವಾಗಿ ಗಟ್ಟಿಗೊಳಿಸುವ ಪ್ರಬುದ್ಧ ಚಿಂತಕರು, ಸಾಧಕರಿಂದ ಮಾತ್ರ ಸಾಧ್ಯವಾಗುವಂತಹುದು. ಇಂತಹ ಶಕ್ತಿಗಳನ್ನು ಗುರ್ತಿಸಿ ಬೆಳೆಸಬೇಕಾದುದು ಸಮಾಜದ ಶಕ್ತಿಕೇಂದ್ರಗಳ ಕರ್ತವ್ಯ.

ಸುತ್ತೂರು ಶ್ರೀಮಠದ ಗುರುಪರಂಪರೆಯಲ್ಲಿಯೇ ಇಂತಹ ಒಂದು ಪ್ರಜ್ಞೆ ಸುಪ್ತವಾಗಿ ಹರಿದು ಬಂದಿದ್ದು, ಅದು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಲ್ಲಿ ಪೂರ್ಣರೂಪದಲ್ಲಿ ಅನಾವರಣಗೊಂಡಿದೆ ಎನ್ನುವುದು ಅತಿಶಯೋಕ್ತಿಯಲ್ಲ. ಬೇರೆ ಬೇರೆ ಕ್ಷೇತ್ರಗಳ ದಿಗ್ಗಜರನ್ನು ಅಭಿನಂದಿಸಿ ಆಶೀರ್ವದಿಸುತ್ತಲೇ ಬಂದಿರುವ ಪೂಜ್ಯರು, ಇಂತಹ Prodigy ಗಳ ಬಗ್ಗೆಯಂತೂ ಅಪಾರ ಒಲವನ್ನು ತೋರುತ್ತಲೇ ಬಂದಿದ್ದಾರೆ. ಈ ಒಂದು ಆಶೀರ್ವಾದದ ಪ್ರೋತ್ಸಾಹ ಅನುಭವ ಕಿರಿಯರಿಗೆ ಜೀವನ ಪರ್ಯಂತ ಒಂದು ಸಂಜೀವಿನಿ ಸದೃಶ ನೆನಪಾಗಿ ಉಳಿಯುತ್ತದೆ. ಪರಮಪೂಜ್ಯರು ನಮ್ಮ ಅಪಾರ ಗೌರವಕ್ಕೆ ಪಾತ್ರರಾಗುವುದು ಅವರ ಮಹಾಪ್ರಜ್ಞೆಯಿಂದ ಪ್ರೇರಿತವಾದ ಇಂತಹ ರಚನಾತ್ಮಕ ಕಾರಣಗಳಿಗಾಗಿ – ಪೂಜ್ಯರಿಗೆ ಶರಣು ಶರಣಾರ್ಥಿಗಳು.

**ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ಅಕ್ಕಮಹಾದೇವಿಯ ಕಾಲ, ಜೀವನ ಕುರಿತ "ಪುರಾವೃತ್ತ"

ಡಾ. ಡಿ.ಎ. ಶಂಕರ್

**ನಾ**ನು ಬೇಕೆಂದೇ ಈ ಶೀರ್ಷಿಕೆಯಲ್ಲಿ 'ಚರಿತ್ರೆ' ಎನ್ನುವ ಶಬ್ದವನ್ನು ದೂರ ಇರಿಸಿದ್ದೇನೆ. ಕಾರಣ, ನಮಗೀಗ ತಕ್ಷಣಕ್ಕೆ ಎರಡು ಬಗೆಯ ಚರಿತ್ರೆಗಳು ಲಭ್ಯವಿವೆ. ಒಂದು, ಪಾಶ್ಚಿಮಾತ್ಯ ದೃಷ್ಟಿಯಲ್ಲಿ 'ಚರಿತ್ರೆ'ಯೇ ಅಲ್ಲದ ಚರಿತ್ರೆ; ಇನ್ನೊಂದು, ಪಾಶ್ಚಿಮಾತ್ಯ ದೃಷ್ಟಿಯಲ್ಲಿ ಕಾಲ, ಆಕರ, ಕವಿಯ ಜೀವನ, ಕೃತಿ, ಇದರ ಸಮಕಾಲೀನ ಕೃತಿ, ಕೃತಿಕಾರ ಇತ್ಯಾದಿಗಳ ಖಚಿತ ವಿವರಗಳನ್ನು ಒಳಗೊಂಡ 'ನೈಜ' ಚರಿತ್ರೆ. ಈ ಎರಡನ್ನೂ ಬಿಟ್ಟು ಬೇರೆ ರೀತಿಯ, ಬೇರೆ ಬಗೆಯ 'ಚರಿತ್ರೆ'ಗಳೂ ಲಭ್ಯ. ಆದರೆ ಸದ್ಯಕ್ಕೆ ಅವುಗಳ ಗೊಡವೆಗೆ ಹೋಗುವುದು ಅನಗತ್ಯ.

ಪಶ್ಚಿಮದ ಕಣ್ಣಿನಿಂದ ನೋಡುವುದಾದರೆ ಅಕ್ಕನ ಜೀವನ ಪುರಾವೃತ್ತವನ್ನು ಕುರಿತು ನಾಲ್ಕು ಮುಖ್ಯ ಆಕರಗಳು ಹೀಗಿವೆ ಎನ್ನಬಹುದು. (1) ಹನ್ನೆರಡನೇ ಶತಮಾನದ, ಹರಿಹರನ ಮಹದೇವಿಯಕ್ಕನ ರಗಳೆ, (2) ಸುಮಾರು ಹದಿನಾಲ್ಕು, ಹದಿನೈದನೆ ಶತಮಾನಕ್ಕೆ ಸೇರಿದ ಶೂನ್ಯಸಂಪಾದನೆಯ ನಾಲ್ಕು ಆವೃತ್ತಿಗಳು, (3) ಹದಿನಾರನೆಯ ಶತಮಾನದ ಮಹದೇವಿಯಕ್ಕನ ಪುರಾಣ ಮತ್ತು (4) ಸರಿಸುಮಾರು ಇದೇ ಕಾಲದ ಚಾಮರಸನ ಪ್ರಭುಲಿಂಗಲೀಲೆ, ಇವುಗಳಲ್ಲಿ ಅಕ್ಕನ ಕಾಲಮಾನಕ್ಕೆ ಅತ್ಯಂತ ಹತ್ತಿರವಾದದ್ದು ಹರಿಹರನ ಮಹಾದೇವಿಯಕ್ಕನ ರಗಳೆ.

ಸುಲಭವಾಗಿ ಊಹಿಸಬಲ್ಲಂತೆ ಹರಿಹರನ ರಗಳೆ ನಮ್ಮ ಕಲ್ಪನೆಯ ಇತಿಹಾಸದಿಂದ ದೂರ ಇರುವಂಥದ್ದು. ಹರಿಹರ ನಮ್ಮ ಅನೇಕ ಪುರಾತನ ಕವಿಗಳಂತೆ, ಜೀವನ ಚರಿತ್ರೆಯನ್ನು ಸಾದರಪಡಿಸುವುದು ಪೌರಾಣಿಕ ಕ್ರಮದಲ್ಲಿ. ಇಲ್ಲಿ ಇತಿಹಾಸ, ಪುರಾಣ, ಕಲ್ಪಿತ ಕಾವ್ಯ, ಮೌಖಿಕ ಮಾತು, ಎಲ್ಲವೂ ಒಮ್ಮೆಯಾಗಿ ಬಂದು ಆಧುನಿಕ ಚರಿತ್ರಕಾರರನ್ನು 'ಇದನ್ನು ಇಟ್ಟುಕೊಂಡು ಯಾವ ಬಗೆಯ ಸಾಹಿತ್ಯ ಚರಿತ್ರೆಯನ್ನು ನಿರ್ಮಿಸುವುದು ಸಾಧ್ಯ?' ಎಂದು ಕೇಳುವಂತೆ ಮಾಡುತ್ತದೆ. ಪುರಾತನರ ಕಾಲದ ಬಗೆಗಿನ ಯೋಚನೆಯ ಕ್ರಮವೇ ಇಂಥದ್ದು.

ಇಲ್ಲಿ ವಾಸ್ತವ, ಊಹೆ, ಘಟಿತ ಅಘಟಿತ ಈ ಎಲ್ಲವೂ ಒಂದೇ ಪಕ್ಕದ ಹಲವು ಪಾರ್ಶ್ವಿಕ ಮುಖಗಳು ಎಂದು ಪರಿಗಣಿಸಿ, ನಮ್ಮ ಸ್ವೀಕೃತ ಆಧುನಿಕ ವೈಚಾರಿಕತೆಯನ್ನು

ಲೆಕ್ಕಕ್ಕೆ ಹಿಡಿಯದೇ ತನ್ನ ವಿಶಿಷ್ಟ ಸ್ವತಂತ್ರ ರೀತಿಯಲ್ಲಿ ನಿರೂಪಣೆಯನ್ನು ನಡೆಸಿಕೊಂಡು ಹೋಗುತ್ತದೆ. ಹರಿಹರನೂ ಅಷ್ಟೆ. ಕಾಲವನ್ನು ಕುರಿತಾದ ಯೋಚನೆ ದಿನ, ತಿಂಗಳು, ವರ್ಷಗಳ ಲೆಕ್ಕದಲ್ಲಿ ಅಲ್ಲ. ಅದು ಯುಗ, ಮನ್ವಂತರ, ಕಲ್ಪಾಂತರಗಳ ಎಣಿಕೆಯಲ್ಲಿ. ಹಾಗಾಗಿ ಲೌಕಿಕ, ಅಲೌಕಿಕ, ಭೂಲೋಕ ಸ್ವರ್ಗಲೋಕ ಎಲ್ಲವೂ ಒಂದೇ, ಹೋಗಿ ಬರಲು ಇರಲು ಗಮ್ಯಸ್ಥಾನಗಳೇ! ಈ ಮನೋಭಾವಕ್ಕೆ ಅನುಗುಣವಾಗಿ ಮಹಾದೇವಿಯಕ್ಕನ ಇಡೀ ವೃತ್ತಾಂತ ಪ್ರಾರಂಭವಾಗುವುದು ನಮ್ಮ ನೆಲದಲ್ಲಿ, ಅಲ್ಲ ಕೈಲಾಸದಲ್ಲಿ.

ಒಡ್ಡೋಲಗದಲ್ಲಿರುವ ಪರಶಿವ ತನ್ನ ಆಪ್ತ ಶರಣನಾದ ಗುಪ್ತಗಣನಾಥನನ್ನು ಕರೆದು, "ದೇವಿಯವರ ಸಮಯವನ್ನು ನೋಡಿ ಬಾರೆಲೇ ಮಗನೆ" ಎಂದು ಕಳಿಸಿದಾಗ ಆತ ರುದ್ರಾಣಿಯ ಓಲಗಕ್ಕೆ ಬಂದು, ನಮಸ್ಕರಿಸುವ ಸಮಯದಲ್ಲಿ ಅವನ ಕಾಲು ಅವನಿಗೆ ಅರಿವಿಲ್ಲದಂತೆ ಹಿಂದಿನ ಸಾಲಿನಲ್ಲಿದ್ದ ಮಹಾದೇವಿ ಎನ್ನುವ ರುದ್ರಕನ್ನಿಕೆಯ ಕಾಲನ್ನು ಸೋಕಿದಾಕ್ಷಣ ಆಕೆ ಅತಿಗರ್ವದಿಂದ, "ಎಲೆ, ಭವಿಯೇ ನೋಡಿ ಪೊಡಮಡು" ಎಂದು ಗದರುತ್ತಾಳೆ. ಈ ಗದರಿಕೆಗಿಂತ ಹೆಚ್ಚಾಗಿ 'ಭವಿ' ಎನ್ನುವ ಮಾತಿನಿಂದ ನೊಂದು ಪಾರ್ವತಿಯ ಮುಖ ನೋಡುತ್ತ ನಿಂತಾಗ ಆಕೆ, "ಜ್ಞಾನನಿಧಿ ಗುಪ್ತಗಣನಾಥನನ್ನು ಭವಿ ಎನ್ನಬಹುದೆ? ಹಾಗೆಂದುದಕ್ಕೆ ನೀನು ಭೂಮಿಯಲ್ಲಿ ಹುಟ್ಟಿ, ಭವಿ ಎಂದ ತಪ್ಪಿಗೆ ಭವಿಯ ಹೆಂಡತಿಯಾಗಿ ಹುಟ್ಟಿ, ಈ ಅಹಂಕಾರ ಕಳೆದ ನಂತರ ಮತ್ತೆ ನಮ್ಮ ಬಳಿ ಬಾ" ಎಂದು ಅಪ್ಪಣೆ ಮಾಡುತ್ತಾಳೆ.

ಶಾಪಗ್ರಸ್ಥಳಾದ ಮಹಾದೇವಿ ಕೌಶಿಕರಾಜನ ಊರಿನಲ್ಲಿದ್ದ ಶಿವಭಕ್ತ ಶಿವಭಕ್ತೆ ಎಂಬ ದಂಪತಿಗಳಿಗೆ ಮಗಳಾಗಿ ಜನಿಸುತ್ತಾಳೆ. ಜಾತಕರ್ಮಾನಂತರ ಮಗಳಿಗೆ ಮಹಾದೇವಿ ಎಂದು ನಾಮಕರಣವಾಗುತ್ತದೆ. ನಂತರ ಶೈವಾಚಾರ್ಯರಿಂದ ಗುರುದೀಕ್ಷೆ. ಹಾಗೆ ಕಾಲ ಜರುಗಿ ಆಕೆಗೆ ಹದಿನಾರು ವರ್ಷ ತುಂಬುತ್ತದೆ. "ಯೌವನ ಮದೋನ್ಮತ್ತ ವಿಲಾಸ ವಿಭ್ರಮ ಕಳಾಪರಿಪೂರ್ಣ ಶರೀರೆಯಾಗಿದ್ದ" ಈಕೆ ಒಂದು ದಿನ ತನ್ನ ಮನೆಯ ಮಾಳಿಗೆಯ ಮೇಲೆ ಸಖಿಯರೊಡನೆ ಕೂಡಿ ಆಡುತ್ತಿದ್ದಾಗ ಸೇನಾಸಮೇತವಾಗಿ ವೈಹಾಳಿಯಿಂದ ಹಿಂತಿರುಗುತ್ತಿದ್ದ ಕೌಶಿಕ ಮಹಾರಾಜ ಈಕೆಯನ್ನು ಎವೆಯಿಕ್ಕದೆ ನೋಡುತ್ತಾನೆ. ಇದನ್ನು ಅರಿತ ಮಹಾದೇವಿ "ಕೌಶಿಕನ ಮನಮಂ ಕೊಂಡು ಪೋಪಂತೆ" ತನ್ನ ಮನೆಯ ಒಳಗೆ ಹೋಗಿಬಿಡುತ್ತಾಳೆ.

ಆದರೆ ಕೌಶಿಕ, "ಮನದೊಳು ಮಹಾದೇವಿ ಕಣ್ಣೊಳು ಮಹಾದೇವಿಯಾಗಿ ವಿರಹಾಗ್ನಿಯಲ್ಲಿ ಬೆಂದು," ಮಂತ್ರಿಗಳ ಮುಂದೆ ನಿಂತು "ಮಹಾದೇವಿಯಂ ಕೊಂಡುಳಿವೆನಲ್ಲದೊಡಳಿವೆ" ಎಂದು ತನ್ನ ಹಂಬಲ ತೋಡಿಕೊಳ್ಳುತ್ತಾನೆ. ದಾರಿಗಾಣದೆ ಸಚಿವರು ವಸಂತಕನೆಂಬ ಚಾರನನ್ನು ಕಳಿಸಿದಾಗ ಆತ, 'ಮಹಾದೇವಿಯನ್ನು ಅರಸ

ಬೇಡುತ್ತಿದ್ದಾನೆ, ಆತ ಕೋಪಿಷ್ಟ, ನಿಷ್ಠೂರಿ' ಎಂದದ್ದು ಕೇಳಿ ಮಹಾದೇವಿಯ ತಾಯಿತಂದೆಯವರು ಹೆದರಿ, 'ಮಗಳೇ, ಅಂಥ ಕೌಶಿಕನೊಡನೆ ಸಮ ಸುಖಗೊಳ್ಳು' ಎನ್ನುತ್ತಾರೆ. ಮಹಾದೇವಿ 'ನಾನು ಭವಿಯೊಡನೆ ಇರಲಾರೆ' ಎಂದಾಗ ಸಚಿವರು 'ನೀನು ಒಪ್ಪದಿದ್ದರೆ ನಿನ್ನ ತಾಯಿ ತಂದೆಯರನ್ನು ಕೊಲ್ಲಲು ಆಜ್ಞಾಪಿಸಿದ್ದಾನೆ' ಎಂದು ಹೆದರಿಸಿದಾಗ, ತಾಯಿತಂದೆಯರಿಗೆ ದುರ್ಮರಣದ ಸಂಕಟ ಬೇಡ ಎಂದು ಮಹಾದೇವಿ ಮೂರು ಷರತ್ತುಗಳೊಂದಿಗೆ ಕೌಶಿಕನನ್ನು ಮದುವೆಯಾಗಲು ಒಪ್ಪುತ್ತಾಳೆ; ನನ್ನಿಚ್ಛೆಯಂತೆ ಶಿವನ ಪೂಜೆ, ನನ್ನಿಚ್ಛೆಯಂತೆ ಮಹೇಶ್ವರರ ಗೋಷ್ಠಿ, ನನ್ನಿಚ್ಛೆಯಂತೆ ಗುರುಸೇವೆ, ನಂತರ ನನ್ನಿಚ್ಛೆಯಂತೆ 'ನಿಮ್ಮ ನೃಪನ ಸಂಗದೊಳಿಪ್ಪೆ' ಎನ್ನುತ್ತಾಳೆ.

ದೊರೆ ಎಲ್ಲದಕ್ಕು ಒಪ್ಪುತ್ತಾನೆ. ಮಹಾದೇವಿ ಕೌಶಿಕನ ಅರಮನೆ ಸೇರುತ್ತಾಳೆ. ಅಲ್ಲಿ "ಮಹಾದೇವಿಯು ಕೌಶಿಕ ರಾಜನುಂ ವಿಷಯಸುಖ ಸಂಪತ್ ಸಂಯೋಗ ಸನ್ನಿಧಿಯೊಳಾಡು'ತ್ತಿರುತ್ತಾಳೆ.

ಆದರೆ ಮಹಾದೇವಿ ಯಾವಾಗಲೂ ಶಿವಪೂಜಾನಿರತೆ. ಚೆನ್ನಮಲ್ಲಿನಾಥನಿಗೆ ನೇಮತಪ್ಪದ ನಿಷ್ಠಾವಂತೆ. ಒಂದು ದಿನ ಮಹಾಮಹೇಶ್ವರರ ಗುಂಪೊಂದು ರಾಜಾಂಗಣವನ್ನು ಪ್ರವೇಶಿಸುತ್ತಿರುವುದನ್ನು ಕಂಡು, ಅವರ ಜೊತೆಯಲ್ಲಿ ಶಿವಜ್ಞಾನ ಪಡೆದು, ಪರಮಸಂತುಷ್ಟ ಭಕ್ತೆಯಾಗಿರುವಾಗ ಕೌಶಿಕನ ಬರವನ್ನು ಕಂಡು, ಮಹೇಶ್ವರರನ್ನು ಮಹಾಮನೆಗೆ ಕಳುಹಿಸಿಕೊಡುತ್ತಾಳೆ. ಆಕೆ ಉದಾಸೀನದಿಂದ ಸೆಜ್ಜೆಮನೆ ಸೇರಿದರೆ ಕೌಶಿಕನಿಗೆ ಅದು ಕಾಮಸಾಮ್ರಾಜ್ಯ. ಆಕೆ ಬೇಗ ಬೆಳಗಾಗಲಿ ಎಂದು ಬಯಸಿದರೆ ಕೌಶಿಕನದು ವಿರುದ್ಧವಾದ ಆಸೆ.

ಇನ್ನೊಂದು ದಿನ ರಾತ್ರಿ "ಸುರತ ಶ್ರಾಂತಿಯಿಂ ಮಹಾದೇವಿ ಬಳಲ್ದು ಮರೆದೊರಗಿದರೆ" ದೂರ ದೇಶದಿಂದ ಮಾಹೇಶ್ವರರು ಬಂದಿದ್ದಾರೆನ್ನುವ ಸುದ್ದಿ ಬರುತ್ತದೆ. ಆದರೆ ದೊರೆ "ಆಕೆಗೀಗ ಸಮಯವಿಲ್ಲ. ಸುಖನಿದ್ರೆಯಲ್ಲಿದ್ದಾಳೆ, ಹೋಗಿ" ಎಂದು ಗದರಿಸುತ್ತಾನೆ. ಮಹಾದೇವಿಗೆ ಎಚ್ಚರವಾಗಿ, ಕೆಟ್ಟ ಭವಿಯ ಸಂಗದಿಂದಾಗಿ ಶಿವಭಕ್ತರಿಗೆ ಅಪಚಾರವಾಯಿತು ಎಂದು ದುಃಖಿಸತೊಡಗಿದಾಗ, ಕೌಶಿಕ ಅವಳ ಕಾಲಿಗೆ ಬಿದ್ದು ಒಂದು ಅಪರಾಧವನ್ನು ಕ್ಷಮಿಸು ಎಂದು ಬೇಡುತ್ತಾನೆ. ಆಕೆ 'ಆಯಿತು' ಎಂದು ಕ್ಷಮಿಸುತ್ತಾಳೆ.

ಇನ್ನೊಂದು ಬಾರಿ ಮಹಾದೇವಿ ದೇವಾಲಯಕ್ಕೆ ಬಂದು ಮಲ್ಲಿಕಾರ್ಜುನನ ಪೂಜೆಯಲ್ಲಿ ಮಗ್ನಳಾಗಿರುವಾಗ ಕೌಶಿಕ ಬಂದು ಅವಳನ್ನು ಕಂಡು "ತನ್ನ ಪುಣ್ಯದ ಫಲವನಪ್ಪುವಂತೆ ಆಲಂಗಿಸಲು" ಆಕೆ 'ಶಿವಾರ್ಚನೆಯ ಸಮಯದಲ್ಲಿ ಮುಟ್ಟಿದೆ, ಇದು ಎರಡನೆಯ ತಪ್ಪು' ಎಂದು ಝಂಕಿಸಿ ಹೋಗುತ್ತಾಳೆ.

ಮತ್ತೊಂದು ರಾತ್ರಿ, "ಕಾಮಾನುರಾಗ ರಸದೊಳಾಳ್ದು ಸುರತಾಂತ ಸಮಯ ಶ್ರಾಂತಿಯಲ್ಲಿ" ಮಲಗಿರುವಾಗ ಮಹಾದೇವಿಯ ಆರಾಧ್ಯ ದೇವರು ಮನೆಗೆ ಆಗಮಿಸುತ್ತಾರೆ. ಇದನ್ನು ಕೇಳಿದ ಮಹಾದೇವಿ ತಾನುಟ್ಟಿದ್ದ ದುಕೂಲವನ್ನು ಮರೆತು ಹೊರಗೆ ಬಂದು, ಗುರು ಪಾದಕ್ಕೆ ಎರಗಿದಾಗ, ಗುರುಗಳು, ಕಣ್ಮುಚ್ಚಿಕೊಂಡು 'ಮಗಳೆ, ದುಕೂಲಮಂ ಬಾಸಣಿಸಿಕೋ' ಎಂದಾಗ, ಆಕೆ ನಾಚಿ ಬಟ್ಟೆಗಾಗಿ ಕೈ ನೀಡುತ್ತಾಳೆ. ಕೌಶಿಕನು ಇದೆಲ್ಲವನ್ನು ನೋಡಿ, ನಿನ್ನಂಥ "ವಿರಕ್ತೆಗೆ ಸೀರೆಯೇಕೆ" ಎಂದು ಅವಳುಟ್ಟ ವಸ್ತ್ರವನ್ನು ಸೆಳೆಯುತ್ತಾನೆ. 'ಮೂರು ತಪ್ಪಾಯಿತು" ಎಂದು ಮಹಾದೇವಿ, ಕೇಶಾಂಬರಿಯಾಗಿ, ಮಲ್ಲಿಕಾರ್ಜುನನನ್ನು ಕರಸ್ಥಳಕ್ಕೆ ಇರಿಸಿಕೊಂಡು, ಗುರುವಿನ ಅಪ್ಪಣೆ ಪಡೆದು, "ಪುರದ ಪುಣ್ಯಂ ಹೆಣ್ಣುರೂಪವಾಗಿ" ಹೊರಟಂತೆ ಶ್ರೀಶೈಲಾಭಿಮುಖವಾಗಿ ಹೊರಡುತ್ತಾಳೆ.

ಈ ಕಡೆ ತಾಯಿ ತಂದೆಯರು ಮಗಳ ಮನಸ್ಸನ್ನು ಪರಿವರ್ತಿಸಲು ಶ್ರೀಶೈಲಕ್ಕೆ ಬಂದಾಗ ಮಹಾದೇವಿ "ಶಿವಭಕ್ತನಾಗಿಯೂ ನೀವಿಂತು ನುಡಿವರೆ" ಎಂದು ಅವರನ್ನು ಕಳಿಸುತ್ತಾಳೆ. ಕಾಮುಕ ಕೌಶಿಕ ಶಿವಭಕ್ತನ ವೇಷ ಧರಿಸಿ, 'ಭಕ್ತನಾದೆಂ ಮಹಾದೇವಿ ಕರುಣಿಪುದೆನೆಗೆ" ಎಂದು ಬೇಡಿದಾಗ ಆಕೆ 'ಕಾಮುಕನನತಿ ದೋಷದಿಂದ ನೋಡಿ, "ಎಲೆಲೆ ಕೌಶಿಕ ಹೋಗು ನೀನೇಕೆ ನಾನೇಕೆ" ಎಂದು ಜರಿದು ತಿರಸ್ಕರಿಸುತ್ತಾಳೆ. ಆದರೂ ಕೌಶಿಕ ಇನ್ನೊಂದು ಸಂಚು ಹೂಡಿ ಶ್ರೀಶೈಲದ ಶರಣರ ಗೋಷ್ಠಿಗೆ ಬಂದು, 'ನಾನೀಗ ಶಿವಭಕ್ತ. ಶಿವಭಕ್ತೆಯಂ ಕೂಡಿ ಕೊಡಿ; ಎಂದು ನಾಟಕ ಮಾಡಿದಾಗ ಅವರು ಒಬ್ಬ ಭಕ್ತನನ್ನು ಕಂಡು ಮಹಾದೇವಿಯನ್ನು ಬರಹೇಳು ಎಂದು ಕಳಿಸುತ್ತಾರೆ. ಆತ 'ಶಿವಾರ್ಚನೆಗೆ ನಿಂತ ಪರಮಧ್ಯಾನಿಯನ್ನು" ಕಂಡು ಅವಳನ್ನು ಕರೆಯುವ ಧೈರ್ಯವನ್ನು ಮಾಡಲಾರದೆ ವಾಪಸ್ಸು ಬಂದು, ಮಹಾದೇವಿಯ ಇರುವನ್ನು ವಿವರಿಸುತ್ತಾನೆ. ಶರಣರು, "ಹೋಗು. ಕೌಶಿಕ ರಾಜ ಹೋಗು ನಿನಗವಳಲ್ಲ" ಎಂದು ಮಹಾದೇವಿಯನ್ನು ಶರಣರ ಬಳಿ ಕಳಿಸಿಕೊಡುತ್ತಾರೆ.

ಮಹಾದೇವಿ ಶ್ರೀಶೈಲದಲ್ಲಿ ಗೀತೆಗಳನ್ನು ಹಾಡುತ್ತ, "ನರಲೋಕದೊಳಗಿರವು ಬೇಡ ಸಾಲ್ಗಿನ್ನೆಂದು" ಬೇಡಿದಾಗ ಗಣಾಧ್ಯಕ್ಷರು ಮಹಾದೇವಿಯನ್ನು ಪುಷ್ಪಕದಲ್ಲಿ ಕೂಡಿಸಿ ಕೈಲಾಸಕ್ಕೆ ಕೊಂಡೊಯ್ಯುತ್ತಾರೆ.

2) ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆಯಲ್ಲಿ, ಪರಮೇಶ್ವರನ ನಿವಾಸದಿಂದ ಒಬ್ಬ ರುದ್ರ ಕನ್ನಿಕೆ ಮತ್ಸ್ಯಲೋಕದೊಳಗೆ "ಉಡುತಡಿಯು ಮಹಾದೇವಿಯಕ್ಕಗಳೆಂಬ ನಾಮಮಂ ಧರಿಸಿ, ಭವಿಯ ಸಂಗಮಂ ತೊರೆದು, ಲಿಂಗದೊಳು ನಿರಾಳಸಂಗಿಯಾಗಿ, ಷೋಡಶ ಪ್ರಾಯದ ನವ ಯೌವನವನ್ನು ಶಿವನೊಳ್ ಪರವಶನೆಯ್ದು, ದಿಗಂಬರುಡಿಗೆಯನ್ನುಟ್ಟು, ಲಜ್ಜಾಭಿಮಾನಂ ತೊರೆದು, ಕಲ್ಯಾಣದತ್ತ ಬರ್ಪಾಗಳು, ಕಿನ್ನರಿ ಬೊಮ್ಮಯ್ಯ ತಂದೆಗಳು ಕಂಡು ಪರೀಕ್ಷಿಸಿ ನೋಡಲು,

ಅಂತರಂಗದ ಜ್ಞಾನಾಗ್ನಿಯೊಳು ಕಾಮವಂ ಸುಟ್ಟು ಭಸ್ಮಮಂ ತೂರಿ, ಅವರನ್ನು ಬೀಳ್ಕೊಂಡು ಕಲ್ಯಾಣ ತಲುಪಿ, ಅಲ್ಲಿ ಮಹಾನುಭವ ಗೋಷ್ಠಿಯಲ್ಲಿ ಅಲ್ಲಮ ಮತ್ತಿತರರ ಜೊತೆ ಸಂವಾದ ನಡೆಸಿ, ತನ್ನ ಕುಂದಿಲ್ಲದ ಶರಣ ಸ್ಥಿತಿಯನ್ನು ನಿರೂಪಿಸುತ್ತಾಳೆ.

ಚಾರಿತ್ರಿಕವಾಗಿ ನೋಡುವುದಾದರೆ ಶಿವಗಣಪ್ರಸಾದಿ ಶೂನ್ಯಸಂಪಾದನೆಯಿಂದ ಖಚಿತವಾಗಿ ತಿಳಿಯುವ ಒಂದು ಅಂಶವೆಂದರೆ ಅಕ್ಕ ಕಲ್ಯಾಣಕ್ಕೆ ಹೋಗಿ, ಅಲ್ಲಿ ಶರಣರ ಜೊತೆ ಸಂವಾದ ನಡೆಸಿ ತನ್ನನ್ನು ತಾನೇ ನಿರೂಪಿಸಿಕೊಂಡ ಪ್ರಸಂಗ. ಇದು ಅಂದಿನ ಐತಿಹ್ಯದ 'ಘಟ್ಟದ' ಘಟನೆ.

ಅಕ್ಕನ ಬಗ್ಗೆ, ಹಾಗೇ ನಮ್ಮ ಪುರುಷ ಪ್ರಪಂಚದ ಸಂಕುಚಿತ ದೃಷ್ಟಿಯ ಬಗ್ಗೆ ಸ್ಪಷ್ಟವಾಗಿ ತಿಳಿಯುವುದು. ಹಲಗೆಯಾರ್ಯನ ಶೂನ್ಯಸಂಪಾದನೆ ನೀಡುವ ಹಲವು ವಿವರಗಳಿಂದ!

ಕಲ್ಯಾಣದ ಹೊರವಳಯದಲ್ಲಿ ಶರಣ ಕಿನ್ನರಿ ಬೊಮ್ಮಯ್ಯ ಮಹಾದೇವಿಯಕ್ಕನ ದಿಗಂಬರ ವೇಷ ಕಂಡು "ಈಕೆ ಲಿಂಗಾನುಭವಸಂಪನ್ನೆಯಾದರೆ ಗುರು ತಾಯೆಂದು ಶರಣೆಂಬೆನು; ಅಲ್ಲದೆ ಲಜ್ಜಾಭಿಮಾನವುಳ್ಳೆಡೆ ಸ್ತ್ರೀಯಾ ಕೈಪಿಡಿವೆನು" ಎಂದು ಅವಳ ಪರೀಕ್ಷೆಗೆ ತೊಡಗುತ್ತಾನೆ. ಅಕ್ಕ 'ಚೆನ್ನಮಲ್ಲಿಕಾರ್ಜುನನನ್ನು ಬಿಟ್ಟು ಉಳಿದ ಬೇರೆಲ್ಲ ಪುರುಷರು ಸಹೋದರರು" ಎಂದರೂ ಬಿಡದೆ, "ಬರಿಯ ಮಾತಿನ ಬನ್ನಣೆಯ ಪಸರಿಸಿ ನಾನು ಬಿಡುವೆನೆ" ಎಂದು ಅವಳನ್ನು ತುಡುಕಿ ಹಿಡಿದು, ತನ್ನತ್ತ ಸೆಳೆದು, ಅವಳನ್ನು ಮುಟ್ಟಿ, ಅವಳ ಯೋನಿಯಲ್ಲಿ ಬೆರಳು ಇಟ್ಟು, ಅಲ್ಲಿ ಕೇವಲ ವಿಭೂತಿ ಇರುವುದು ಕಂಡು, ಭಯಭೀತನಾಗಿ ಅವಳ ಕಾಲಿಗೆ ಬಿದ್ದು ಕ್ಷಮಾಯಾಚನೆ ಮಾಡಿ, "ನಿಮ್ಮ ದಯದಿಂದ ನಾನು ಹುಲಿನೆಕ್ಕಿ ಬದುಕಿದೆನು ಶರಣಾರ್ತಿ ತಾಯೇ" ಎಂದು ನಮಸ್ಕರಿಸಿ ಹೋಗುತ್ತಾನೆ.

ಚಾಮರಸನ ನಿರೂಪಣೆಯಲ್ಲಿ ಅಂಥ ವಿಶೇಷ ವಿವರವೇನೂ ಇಲ್ಲ. ಮಹಾದೇವಿಯ ತಾಯಿ ತಂದೆಯರು ವ್ಯಕ್ತಿಗಳಲ್ಲ; ಅವರು ಕೆಲವು ಗುಣಗಳ ಪ್ರತಿರೂಪ. ಮಹಾದೇವಿಯ ತಂದೆ ನಿರ್ಮಲ, ತಾಯಿ ಸುಮತಿ ಮಗಳ ಜನನ ಉಡುತಡಿಯಲ್ಲಿ. ಕಾಲಕ್ರಮೇಣ ಮಹಾದೇವಿ ಅತ್ಯಂತ ಲಾವಣ್ಯಯುತೆಯಾಗಿ ಬೆಳೆಯುತ್ತಾಳೆ. ಒಂದು ದಿನ ದೊರೆ, ಕೌಶಿಕ, ಬೇಟೆ ಮುಗಿಸಿ ಬರುವಾಗ ಈಕೆ ಅವನ ದೃಷ್ಟಿಗೆ ಬೀಳುತ್ತಾಳೆ. ದೊರೆ ಇವಳನ್ನು ಮೋಹಿಸಿ ಮಹಾದೇವಿಯ ತಾಯಿ–ತಂದೆಯರಿಗೆ ತನ್ನ ಮನೋಭಿಲಾಷೆ ತಿಳಿಸುತ್ತಾನೆ. ಅವರು, "ಮದುವೆಯಾಗುವವಳು ಅವಳು, ಅವಳನ್ನೇ ಕೇಳಿ" ಎನ್ನುತ್ತಾರೆ. ಚಾರರು ಬಂದು ಅವಳನ್ನು ಕೇಳಿದಾಗ, "ನಿಮ್ಮ ದೊರೆ ನನ್ನನ್ನು ಅಪೇಕ್ಷಿಸಿದರೆ, ಅವರೇ ಬಂದು ಕೇಳಲಿ, ನನ್ನ ನಿಬಂಧನೆಗಳಿಗೆ ಒಪ್ಪಿದರೆ ನಾನು ಅವನನ್ನು ಮದುವೆಯಾಗುತ್ತೇನೆ" ಎನ್ನುತ್ತಾಳೆ. ದೊರೆ ಬಂದು ಷರತ್ತುಗಳ ಬಗ್ಗೆ ವಿಚಾರಿಸುತ್ತಾನೆ.

ಅವು ಹಿಂದಿನ ನಿರೂಪಣೆಗಳಲ್ಲಿ ಇರುವಂಥವೇ; ಮೂರು ಷರತ್ತುಗಳು.

ಒಂದು ದಿನ ಮಹಾದೇವಿಯನ್ನು ಬಲಾತ್ಕರಿಸಲು ಹೊರಟಾಗ ಆಕೆ, "ನೀನು ಶಿವಭಕ್ತನಾದರೆ ನಾನು ನಿನ್ನೊಡನೆ ಒಂದಾಗುತ್ತೇನೆ, ಹಾಗಿಲ್ಲದೇ ನೀನು ಭವಿಯಾಗಿಯೇ ಉಳಿಯುವುದಾದರೆ ನಾನು ನಿನ್ನನ್ನು ಒಲ್ಲೆ" ಎನ್ನುತ್ತಾಳೆ. ದೊರೆ ಇದು ಅಸಾಧ್ಯ ಎಂದಾಗ ಆಕೆ ಕೇಶಾಂಬರೆಯಾಗಿ ಅರಮನೆ ತೊರೆದು ಹೊರಟು ಬರುತ್ತಾಳೆ.

ಚನ್ನಬಸವಣ್ಣನ ನಿರೂಪಣೆಯಲ್ಲಿ ಕೌಶಿಕನಿಗೂ ಮಹಾದೇವಿಗೂ ವಿವಾಹವಾಗಿತ್ತು ಎನ್ನುವುದು ಒಂದು ಗಮನಾರ್ಹ ಸಂಗತಿ; ಕೆಂಚವೀರಣ್ಣರೊಡೆಯನ ಶೂನ್ಯ ಸಂಪಾದನೆಯೂ ಇದನ್ನು ಒಪ್ಪುತ್ತದೆ.

ಈ ನಾಲ್ಕು ಇತಿವೃತ್ತಗಳಲ್ಲಿ ಕಾಣುವ ವ್ಯತ್ಯಾಸಗಳು, ಮಾರ್ಪಾಟುಗಳು, ಮುಖ್ಯವಾಗಿ ಆಯಾ ವೀರಶೈವ ಕವಿಗಳ ಮನೋಧರ್ಮ ಹಾಗೂ ಧಾರ್ಮಿಕ ಕಲ್ಪನೆಗಳಿಂದ ಆಗಿರುವಂಥವು ಎನ್ನಬಹುದು. ಈ ಎಲ್ಲವನ್ನೂ ಕುರಿತ ವಿಷಯಗಳ ಬಗ್ಗೆ ಎಸ್. ವಿನೋದಾಬಾಯಿ ತಮ್ಮ *ಆಂಡಾಳ್ ಮಹದೇವಿ ಮೀರಾ* ಗ್ರಂಥದಲ್ಲಿ ಪಠ್ಯಾಧಾರಿತ ವಿವರಣೆಯನ್ನು ಅತ್ಯಂತ ಸಮರ್ಥ ರೀತಿಯಲ್ಲಿ ನೀಡಿದ್ದಾರೆ. ಇದು ಅಚ್ಚಾದದ್ದು 1969ರಲ್ಲಿ. ಹಬ್ಬು ಅವರ ಉಷಾ ಸಾಹಿತ್ಯ ಮಾಲೆಯಲ್ಲಿ, ನನ್ನ ಈ ಲೇಖನಕ್ಕಂತೂ ಇದು ಅತ್ಯುಪಯುಕ್ತವಾಗಿದೆ, ಹಾಗಿದ್ದೂ ಇದಕ್ಕೆ ಇನ್ನೆರಡು ಮಾತು ಸೇರಿಸುವ ಅವಶ್ಯಕತೆ ಇದೆ.

ಅಕ್ಕಮಹಾದೇವಿಯನ್ನು ಕುರಿತು ಬಂದಿರುವ ಎಲ್ಲ ಬರಹಗಳಲ್ಲಿ ಇರುವ, ಚರ್ಚಿತವಾಗುವ ಏಕೈಕ ವಿಷಯ ಎಂದರೆ ಅಕ್ಕನ ವಿವಾಹ ಹಾಗೂ ಕೌಶಿಕನ ಜೊತೆಗಿನ ಆಕೆಯ ಸಂಬಂಧ.

ಹರಿಹರ ತನ್ನ ಉಡುತಡಿಯ ಮಹಾದೇವಿಯಕ್ಕನ ರಗಳೆಯಲ್ಲಿ, ಚನ್ನಬಸವಣ್ಣ ತನ್ನ ಮಹಾದೇವಿಯಕ್ಕನ ಪುರಾಣ ಹಾಗೂ ಕೆಂಚವೀರಣ್ಣೊಡೆಯನ ಶೂನ್ಯ ಸಂಪಾದನೆಯಲ್ಲಿ ಮಹಾದೇವಿಗೆ ವಿವಾಹವಾಗಿತ್ತು ಎಂದರೆ ಚಾಮರಸ ತನ್ನ ಪ್ರಭುಲಿಂಗಲೀಲೆಯಲ್ಲಿ, ವಿರೂಪಾಕ್ಷಪಂಡಿತ ತನ್ನ ಚನ್ನಬಸವ ಪುರಾಣದಲ್ಲಿ, ಹಲಗೆಯ ದೇವರು ತನ್ನ ಶೂನ್ಯಸಂಪಾದನೆಯಲ್ಲಿ ಮಹಾದೇವಿ ವಿವಾಹವಾಗಿರಲಿಲ್ಲ, ಅಷ್ಟೇ ಅಲ್ಲ, ವೈವಾಹಿಕ ಜೀವನವನ್ನು ನಡೆಸಿರಲಿಲ್ಲ ಎನ್ನುತ್ತಾರೆ.

ಅಕ್ಕಮಹಾದೇವಿಯ ಕಾಲಕ್ಕೆ ತೀರಾ ಸಮೀಪದಲ್ಲಿದ್ದ ಹರಿಹರನ ಪ್ರಕಾರ ಮಹಾದೇವಿಗೆ ಕೌಶಿಕನೊಡನೆ ವಿವಾಹವಾಗಿತ್ತು; ಆಕೆ ಅವನ ಅಂತಃಪುರದಲ್ಲಿದ್ದಳು ಎನ್ನುವುದರ ಜೊತೆಗೆ ಅವನೊಡನೆ ಸುರತ ಸುಖದಲ್ಲಿ ಮೈಮರೆತಿದ್ದಳು ಎನ್ನುವ ದಾಖಲೆಯಿದೆ. ಆದರೆ ಇದನ್ನು ಅನೇಕ ವೀರಶೈವ ಕವಿಗಳು ಒಪ್ಪುವುದಿಲ್ಲ. ಇಲ್ಲ,

ಅವರು ಈ ಸಂಗತಿಯನ್ನು ನಿರಾಕರಿಸುತ್ತಾರೆ. ಅಥವಾ ಜಾಣತನದಲ್ಲಿ ತೇಲಿಸಿ ಬಿಡುತ್ತಾರೆ.

ಇಲ್ಲಿ ಮತೀಯ ಕಾರಣಗಳನ್ನು ಬಿಟ್ಟರೆ, ಇಂಥ ನಿರಾಕರಣೆಯ ಸಂಕೋಚದ ಅಗತ್ಯ ಕಾಣಿಸುವುದಿಲ್ಲ. ಬಹಳ ಹಿಂದೆ ತೀನಂಶ್ರೀ ಯುವರು ಹೇಳಿರುವ ಮಾತುಗಳು ಇವತ್ತೂ ಸಕಾಲಿಕ ಹಾಗೂ ಅಗತ್ಯ:

"Taking into consideration all the facts, many scholars feel that the version found in Harihara's poem deserves credence since it is both early and natural. And it must not be forgotten that the mere fact of Mahadevi's forced marriage with Kaushika to which she submitted solely for saving her parents, does not in the least take away from her spiritual greatness…"

ಮಹಾದೇವಿಯ ವೈವಾಹಿಕ ಸಂಬಂಧ ಆಕೆಯ ಆಧ್ಯಾತ್ಮಿಕ, ಸಾಹಿತ್ಯಶ್ರೇಷ್ಠತೆಯನ್ನು ಯಾವ ರೀತಿಯಲ್ಲೂ ಊನಗೊಳಿಸುವುದಿಲ್ಲ. ಬದಲಾಗಿ ಆಕೆ ಪುರುಷ ಸಮಾಜ ನಿರ್ಮಿತ ವ್ಯವಸ್ಥೆಯನ್ನು ಅಪರೂಪ ಆತ್ಮಸ್ಥೈರ್ಯದಿಂದ ಎದುರುಹಾಕಿಕೊಂಡು, ಆಕೆ ಮಾಡಿರುವ ಅಪರೂಪದ ಸಾಧನೆ ಸ್ತ್ರೀ ಶಕ್ತಿಗೆ, ಸ್ತ್ರೀ ಸಂವೇದನೆಯ ಅಭಿವ್ಯಕ್ತಿಗೆ ಯಾರೂ ಮೆಚ್ಚಬೇಕಾದ ಮಾದರಿ. ಈ ಮಾದರಿ ಪುರುಷ ರೂಪವನ್ನಾಗಲೀ ಪುರುಷ ವ್ಯಕ್ತಿತ್ವವನ್ನಾಗಲಿ ನಿರಾಕರಿಸುವುದಿಲ್ಲ, ತಿರಸ್ಕರಿಸುವುದಂತೂ ದೂರ ಉಳಿಯಿತು. ಆದರೆ ಈ ಭಾಗ ಪುರುಷ ಪ್ರಪಂಚವನ್ನು ಒಂದು ದೃಷ್ಟಿಯಿಂದ ವೈಭವೀಕರಿಸುತ್ತದೆ ಎಂದು ಯಾರಾದರೂ ಹೇಳಿದರೆ ಅದರ ನಿರಾಕರಣೆ ಸುಲಭಸಾಧ್ಯ ಅನ್ನಿಸುವುದಿಲ್ಲ. ಇದೂ ನಿಜ.

ಅಕ್ಕ ಎಂದರೆ ಎಲ್ಲವನ್ನೂ ಪ್ರಶ್ನಿಸುವವಳು. ಆಕೆ ತನ್ನ ತಾಯಿ ತಂದೆಯರನ್ನು, ಹಿರಿಯರನ್ನು, ಗಂಡ ಹೆಂಡತಿ ಸಂಬಂಧವನ್ನು ಪ್ರಶ್ನಿಸುವ ಹಾಗೆ ಬಸವ, ಅಲ್ಲಮರನ್ನೂ ಅವರ ಪುರುಷಕೇಂದ್ರಿತ ವಿಚಾರಧಾರೆಯನ್ನೂ ಪ್ರಶ್ನಿಸುತ್ತಾಳೆ. ಜೊತೆಗೆ ತನ್ನ ಆರಾಧ್ಯದೈವ ಚೆನ್ನಮಲ್ಲಿಕಾರ್ಜುನನನ್ನು ಪ್ರಶ್ನಿಸಿ, ಅವನನ್ನೂ ತನ್ನ ವೈಚಾರಿಕ ಚರ್ಚೆಯ ವಸ್ತುವನ್ನಾಗಿಸುತ್ತಾಳೆ.

ಹೇಗೆ, ಯಾವ ದೃಷ್ಟಿಯಿಂದ ನೋಡಿದರೆ, ಅಕ್ಕನ ಪುರಾವೃತ್ತ ನಮ್ಮ ಕಾಲಕ್ಕೆ ಒಂದು ಮಾದರಿ ಅಥವಾ ಮಾತೃಕೆಯನ್ನು ಒದಗಿಸುತ್ತದೆ ಎನ್ನಬಹುದು.

□

# ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು: ಆಶಯ ಮತ್ತು ಸವಾಲುಗಳು

ಡಾ. ಕಾ.ವೆಂ. ಶ್ರೀನಿವಾಸಮೂರ್ತಿ

**ಕ**ನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಕನ್ನಡ ನಾಡು, ನುಡಿಗಳ ಅಭ್ಯುದಯಕ್ಕಾಗಿ ಆಗಿದೆ. ಈ ಘಟನೆ 1915 ಮೇ 5ನೇ ತಾರೀಖು ಸಂಭವಿಸಿದರೂ ಇದರ ಹಿನ್ನೆಲೆ ಹಿರಿದಾಗಿದೆ. ಇಲ್ಲಿ ಕನ್ನಡದ ವಿದ್ವಾಂಸರು, ಅಧಿಕಾರಿಗಳು, ರಾಜಕಾರಣಿಗಳು, ರಾಜರು ಮುಂತಾದವರ ಪರಿಶ್ರಮ ಮಿಗಿಲಾಗಿದೆ. ಇವರೆಲ್ಲರ ಸಾಮೂಹಿಕ ಪರಿಶ್ರಮದ ಹಿನ್ನೆಲೆಯಲ್ಲಿ ಮೇಲ್ಕಾಣಿಸಿದ ದಿನದಿಂದ ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಪ್ರಸ್ತುತ ಸಂಸ್ಥೆ ಸ್ಥಾಪನೆಯಾಯಿತು. ಇಲ್ಲಿ ನಡೆದ ಗೋಷ್ಠಿಗಳು, ಅವುಗಳಲ್ಲಿ ಮಂಡನೆಯಾದ ಪ್ರಬಂಧಗಳು, ತೆಗೆದುಕೊಂಡ ನಿರ್ಣಯಗಳು ಕನ್ನಡದ ಒಳಿತಿಗಾಗಿ ಇದ್ದವು. ಈ ಹಿನ್ನೆಲೆಯಲ್ಲಿ ಸಮ್ಮೇಳನದ ಅಧ್ಯಕ್ಷರು ಆದಿಯಾಗಿ ಎಲ್ಲಾ ನುಡಿಜಾಣರು ಕನ್ನಡದ ಅಂದಿನ ಸಮಸ್ಯೆಗಳನ್ನು ಗುರುತಿಸಿ, ಅವುಗಳ ನಿವಾರಣೋಪಾಯಗಳು ಮತ್ತು ಆ ಮೂಲಕ ಕನ್ನಡ ನುಡಿಯ ಏಳ್ಗೆಗೆ ಕೂಲಂಕುಷವಾದ ಚರ್ಚೆಯನ್ನು ನಡೆಸಿದ್ದಾರೆ. ಈ ಹಿನ್ನೆಲೆಯಲ್ಲಿ ಸಮ್ಮೇಳನಾಧ್ಯಕ್ಷರ ಪ್ರಥಮ ಭಾಷಣ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಮೊದಲ ಸಮ್ಮೇಳನದ ಹಿನ್ನೆಲೆಯಲ್ಲಿ ಅಂದಿನ ಕನ್ನಡ ಭಾಷೆಯ, ಕನ್ನಡ ನಾಡಿನ ಸ್ಥಿತಿಗತಿಗಳನ್ನು ಕೊಂಚವಾದರೂ ಇಲ್ಲಿ ಅರಿಯಬೇಕು.

ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಹಿನ್ನೆಲೆಯಾಗಿದ್ದ ಕಾಲಘಟ್ಟ ಇಪ್ಪತ್ತನೆಯ ಶತಮಾನದ ಆದಿಭಾಗ. ಆಗ ಕನ್ನಡದ ಪ್ರದೇಶಗಳು ಇಪ್ಪತ್ತೆರಡು ವಿವಿಧ ಪ್ರಭುತ್ವಗಳಲ್ಲಿ ಹಂಚಿಕೊಂಡಿದ್ದವು. ಮೈಸೂರು ಸಂಸ್ಥಾನ, ಹೈದರಾಬಾದ್ ಸಂಸ್ಥಾನ, ಮುಂಬಯಿ ಪ್ರೆಸಿಡೆನ್ಸಿ, ಮದ್ರಾಸ್ ಪ್ರೆಸಿಡೆನ್ಸಿ, ಕೊಡಗು–ಹೀಗೆ ಗುರುತಿಸಿದರೂ ಇವುಗಳ ಒಳಗೇ ಸವಣೂರು, ಮುಧೋಳ, ಜಮಖಂಡಿ, ಸಂಡೂರು ಮುಂತಾದ ಕಿರುಸಂಸ್ಥಾನಗಳು ಪ್ರಸ್ತಾಪಿತ ಪ್ರೆಸಿಡೆನ್ಸಿಗಳ ಸಾರ್ವಭೌಮತೆಯ ಅಡಿಯಲ್ಲಿ ಇದ್ದವು. ಹೀಗೆ ರಾಜಕೀಯವಾಗಿ ಹರಿದು ಹಂಚಿಹೋಗಿದ್ದ ಕನ್ನಡಿಗರು ಭಾಷಿಕವಾಗಿ ಸಹ ವಿವಿಧ ಅವಸ್ಥೆಗಳನ್ನು ಹೊಂದಿದ್ದರು. ಮೈಸೂರು ಸಂಸ್ಥಾನಕ್ಕೆ ಹೊರತುಪಡಿಸಿದ ರಾಜಕೀಯ ವಿಭಾಗಗಳಲ್ಲಿ ಕನ್ನಡೇತರ ವಾತಾವರಣ ಪ್ರಮುಖವಾಗಿತ್ತು. ಆಡಳಿತ, ಶಿಕ್ಷಣಗಳಲ್ಲಿ

ಪ್ರಮುಖವಾಗಿ ಕನ್ನಡೇತರ ಭಾಷೆಗಳಿಗೆ ಅಗ್ರಸ್ಥಾನವಿತ್ತು. ಹಾಗಾಗಿ ಕನ್ನಡದ ಬೆಳವಣಿಗೆಗಾಗಿ ಈ ವಾತಾವರಣವು ಪೂರಕವಾಗಿರಲಿಲ್ಲ. ಈ ಹಿಂದೆ ರಾಜಕೀಯವಾಗಿ ಕಾಣಿಸಿಕೊಂಡ ಬೆಳವಣಿಗೆಗಳು, ಅದರ ಭಾಗವಾದ ಮರಾಠಾ ಪೇಶ್ವೆಗಳ ಆಡಳಿತ, ಉರ್ದು ನಿಜಾಮರ ಆಳ್ವಿಕೆ, ಇಂಗ್ಲಿಷ್ ಭಾಷಿಕರ ಆಳ್ವಿಕೆ ಕನ್ನಡದ ಇಂತಹ ಅವಸ್ಥೆಗೆ ಕಾರಣವಾಗಿತ್ತು. ಹಾಗಾಗಿ ಕನ್ನಡ ಭಾಷೆ, ಅದರ ಸಾಹಿತ್ಯ ಸೊರಗುತ್ತಿತ್ತು. ಅದರ ಬೆಳವಣಿಗೆ ಆಗದೇ ನಾಡಿನ ಆತ್ಯಂತಿಕ ಪ್ರಗತಿ ಸಾಧ್ಯವಿಲ್ಲ. ಇಂತಹ ನಂಬುಗೆಯ ಆಧಾರದ ಮೇಲೆ ಕನ್ನಡ ನಾಡನ್ನು ಕುರಿತು ಯೋಚಿಸಿದವರು ಅದರ ಆತ್ಮವಾದ ಕನ್ನಡ ಭಾಷೆಯನ್ನು ಕುರಿತು ಮೊದಲು ಯೋಚಿಸುವಂತಾಯಿತು. ಇಂತಹ ಚಿಂತನೆ ಇಪ್ಪತ್ತನೆಯ ಶತಮಾನದ ಉದಯದ ಹೊತ್ತಿಗೆ ತೀವ್ರವಾಗಿ ನಡೆದಿತ್ತು. ಈ ಹಿನ್ನೆಲೆಯಲ್ಲಿ ನಾಡಿನ ಸರ್ವಾಂಗೀಣ ಪ್ರಗತಿಯಲ್ಲಿ ಭಾಷೆ ಮತ್ತು ಅದರ ಸಾಹಿತ್ಯದ ಪರಿಜ್ಞಾನ ಮಿಂಚಿದ್ದರ ಫಲವಾಗಿ ಇಪ್ಪತ್ತನೆಯ ಶತಮಾನದ ಎರಡನೆಯ ದಶಕದಲ್ಲಿ ಸಂಘಟನಾತ್ಮಕ ಬಲವೊಂದು ಕಾಣಿಸಿತು.

1914 ಅಕ್ಟೋಬರ್ 3ರಂದು 'ದಿ ಮೈಸೂರು ಎಕನಾಮಿಕ್ ಕಾನ್ಫರೆನ್ಸ್' ಎಂಬ ಹೆಸರಿನಲ್ಲಿ ನಾಡನ್ನು ಆರ್ಥಿಕವಾಗಿ ಗಟ್ಟಿಗೊಳಿಸಬೇಕು ಎಂಬ ನೆಲೆಯಲ್ಲಿ ಸಮ್ಮೇಳನವೊಂದು ನಡೆಯಿತು. ಅದನ್ನು ಕನ್ನಡದಲ್ಲಿ 'ಮೈಸೂರು ಸಂಪದಭ್ಯುದಯ ಸಮಾಜ' ಎಂದು ಕರೆಯಲಾಗಿದೆ. ಇದರಲ್ಲಿ ಮೂರು ಸಮಿತಿಗಳು ಏರ್ಪಟ್ಟವು. ಅವು–

1. ಕಾರ್ಖಾನೆಗಳ ಕೈಗಾರಿಕಾ ಸಮಿತಿ
2. ವಿದ್ಯಾ ಸಮಿತಿ
3. ಭೂ ವ್ಯವಸಾಯ ಸಮಿತಿ

ಈ ಸಮ್ಮೇಳನಕ್ಕೆ ಅಂದಿನ ಮೈಸೂರು ರಾಜ್ಯದ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯ ಅವರ ಒತ್ತಾಸೆ ಸಹ ಇರುತ್ತದೆ. ಈ ಹಿನ್ನೆಲೆಯಲ್ಲಿ ಮೇಲ್ಕಾಣಿಸಿದ ಮೂರು ಸಮಿತಿಗಳಲ್ಲಿ ಎರಡನೆಯ ದಾದ ವಿದ್ಯಾ ಸಮಿತಿ ಮಾಡಿದ ನಿರ್ಣಯಗಳಲ್ಲಿ ಒಂದು ಚಾರಿತ್ರಿಕ ಮಹತ್ವದ್ದಾಗಿ ಇಂದು ಕಾಣುತ್ತದೆ. ಅದು ಕಸಾಪದ ಸ್ಥಾಪನೆಗೆ ಹಿನ್ನೆಲೆಯಾದ ನಿರ್ಣಯ. ಅದು ಹೀಗಿದೆ "ಕರ್ನಾಟಕ ಭಾಷೆಯಲ್ಲಿ ವಿವಿಧ ಗ್ರಂಥಗಳನ್ನು ರಚಿಸಿದವರ ಪ್ರೋತ್ಸಾಹಕ್ಕಾಗಿ ಸ್ವತಂತ್ರಾಧಿಕಾರವುಳ್ಳ ಪರಿಷತ್ತೊಂದಿರಬೇಕು. ಸರ್ಕಾರವು ಆ ಪರಿಷತ್ತನ್ನು ಅಂಗೀಕರಿಸಿ ಅದಕ್ಕೆ ವಿಶೇಷ ಸಹಾಯ ಮಾಡುವುದು ಉಚಿತವೆಂದು ಸಂಪದಭ್ಯುದಯ ಸಮಾಜವು ಸರ್ಕಾರಕ್ಕೆ ಶಿಫಾರಸು ಮಾಡಬೇಕು." ಈ ಹಿನ್ನೆಲೆಯಲ್ಲಿ ವಿದ್ಯಾ ಸಮಿತಿಯ ಅಧ್ಯಕ್ಷರಾಗಿದ್ದ

ಎಚ್.ವಿ. ನಂಜುಂಡಯ್ಯ ಅವರ ಅಧ್ಯಕ್ಷತೆಯಲ್ಲಿಯೇ ಮೊದಲ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯಿತು. ಇದಕ್ಕಾಗಿ ಬಹಳಷ್ಟು ಪೂರ್ವಭಾವಿ ಸಿದ್ಧತೆಗಳು ನಡೆದವು. ಅವುಗಳಲ್ಲಿ ಮುಖ್ಯವಾದುದು ಎಂ.ವಿ. ಕೃಷ್ಣಪ್ಪ ಅವರ ಮುಂದಾಳತ್ವದಲ್ಲಿ ಸಮ್ಮೇಳನದಲ್ಲಿ ಮಂಡನೆಯಾಗುವ ಪ್ರಬಂಧಗಳನ್ನು ವಿವಿಧ ಗ್ರಂಥಕರ್ತೃಗಳಿಂದ ಮೊದಲೇ ಆಹ್ವಾನಿಸಿ, ತರಿಸಿಕೊಂಡದ್ದು. ಅವು ವಿಷಯಾನುಸಾರಿಯಾಗಿ ವಿವಿಧ ಗೋಷ್ಠಿಗಳಲ್ಲಿ ಮಂಡನೆ ಯಾದವು.

ಹೀಗೆ ಇಪ್ಪತ್ತನೆಯ ಶತಮಾನದ ಕನ್ನಡ ಭಾಷೆಯ ಅವಸ್ಥೆಯನ್ನು ಗಂಭೀರವಾಗಿ ಚಿಂತಿಸಿ, ಅದರ ಅಭ್ಯುದಯಕ್ಕಾಗಿ, ಸಾಹಿತ್ಯದ ಸರ್ವಾಂಗೀಣ ಬೆಳವಣಿಗೆಗಾಗಿ ಗ್ರಂಥಕರ್ತರ ಪಾಲ್ಗೊಳ್ಳುವಿಕೆ, ಅದಕ್ಕಾಗಿ ಸಂಸ್ಥೆಯೊಂದರ ಆವಶ್ಯಕತೆ, ಸ್ಥಾಪನೆ, ಅವೆಲ್ಲವುಗಳಿಗೆ ಪೋಷಕ ಪ್ರಭುತ್ವ ಇರಬೇಕು ಎಂಬ ನೆಲೆಯಲ್ಲಿ ಸಮ್ಮೇಳನವು ಯಶಸ್ವಿಯಾಗಿ ಜರುಗಿತು. ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದ, ಅನೇಕ ಪದವಿಗಳನ್ನು ಪಡೆದಿದ್ದ, ಕನ್ನಡ, ಸಂಸ್ಕೃತ, ಇಂಗ್ಲಿಷ್, ಫ್ರೆಂಚ್ ಭಾಷೆಗಳನ್ನು ಗುರುತರವಾಗಿ ಬಲ್ಲವರಾಗಿದ್ದ ಎಚ್.ವಿ. ನಂಜುಂಡಯ್ಯ ಅವರೇ ಸುಬ್ರಹ್ಮಣ್ಯ ಅಯ್ಯರ್, ಡಿ.ವಿ.ಜಿ. ಮುಂತಾದ ನೂರಾರು ಕನ್ನಡ ನುಡಿ ಸೇವಕರ ಸಹಕಾರದಲ್ಲಿ, ಸರ್ಕಾರದ ಪ್ರೋತ್ಸಾಹದಲ್ಲಿ ಮೊದಲಿಗೆ ಕಾರ್ಯ ನಿರ್ವಹಿಸಿದರು. ಅದರ ಪರಿಣಾಮವೇ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆ ಮತ್ತು ಆ ಮೂಲಕ ಅವರ ಅಧ್ಯಕ್ಷತೆಯಲ್ಲಿಯೇ ಮೊದಲ ಎರಡು ಸಮ್ಮೇಳನಗಳು ಬೆಂಗಳೂರಿನಲ್ಲಿ, ಅನಂತರದ ಸಮ್ಮೇಳನವು ಮೈಸೂರಿನಲ್ಲಿ ನಡೆದದ್ದು.

ಹೀಗೆ ವಿವಿಧ ರಾಜಕೀಯ ಘಟಕಗಳಲ್ಲಿ ಹರಿದು ಹಂಚಿಹೋಗಿದ್ದ ಕನ್ನಡಿಗರ ಭಾಷಿಕ ಸಮಸ್ಯೆಗಳನ್ನು ಅರಿತು, ಈ ವ್ಯಾಪಕ ನೆಲೆಯಲ್ಲಿ ಒಂದು ಪ್ರಮಾಣೀಕೃತ ಕನ್ನಡ ಭಾಷೆಯನ್ನು ರೂಪುಗೊಳಿಸುವುದು, ಇಲ್ಲಿಯ ಪ್ರಮುಖ ಆದ್ಯತೆಯಾಗಿ ಕಂಡುಬರುತ್ತದೆ. ಇಂತಹ ಪ್ರಮಾಣೀಕೃತ ಭಾಷೆಯನ್ನು ಬಳಸಿ ಸಾಹಿತ್ಯವೇ ಅಲ್ಲದೆ ನಾಡಿನ ವಿದ್ಯಾರ್ಥಿಗಳಿಗೆ, ವಿದ್ವಜ್ಜನರಿಗೆ ಬೇಕಾದ ಎಲ್ಲಾ ಜ್ಞಾನ ಶಾಖೆಗಳ ಪುಸ್ತಕಗಳ ರಚನೆ ಮತ್ತು ಪ್ರಕಟಣೆಗೆ ಇಂಬು ಕೊಡುವುದು ಇದರ ವಿಸ್ತರಿತ ಆದ್ಯತೆಯಾಗಿದೆ. ಹಲವು ಭಾಷೆಗಳ ಸಂಸರ್ಗದಲ್ಲಿ ಕನ್ನಡಿಗರು ಚಾರಿತ್ರಿಕವಾಗಿ ರಾಜಕೀಯವಾಗಿ ಉಳಿದು ಬಂದಿದ್ದರೂ ಪ್ರಸ್ತುತ ಸನ್ನಿವೇಶದಲ್ಲಿ ತಮ್ಮ ದೇಶಭಾಷೆಯ ನೆರವಿನಿಂದ ಮಾತ್ರ ತಮ್ಮ ಅಭ್ಯುದಯವನ್ನು ಪರಿಣಾಮಕಾರಿಯಾಗಿ ಕಾಣುವುದು ಸಾಧ್ಯವಿದೆ ಎಂಬುದು ಈ ಸಂದರ್ಭದ ಎಲ್ಲಾ ಚರ್ಚೆಗಳ, ನಿರ್ಣಯಗಳ ಒಟ್ಟು ಸಾರವಾಗಿ ಕಂಡುಬರುತ್ತದೆ.

ಹೀಗೆ ಕನ್ನಡ ನುಡಿಯನ್ನು ಎಲ್ಲಾ ಜ್ಞಾನ ಶಿಸ್ತುಗಳ ಸಂದರ್ಭಗಳಲ್ಲಿ ಬಳಸುವುದು, ಅದಕ್ಕಾಗಿ ಇರುವ ಪಾರಿಭಾಷಿಕಗಳನ್ನು ಬಳಸುವುದು, ಇಲ್ಲದಿದ್ದಲ್ಲಿ ಅನ್ಯ ಭಾಷೆಗಳ

ನೆರವಿನಿಂದ ಎರವಲು ಪಡೆಯುವುದು ಅಥವಾ ತನ್ನೊಳಗೇ ಇರುವ ಕೆಲವು ಪರಿಭಾಷೆಗಳನ್ನು ಪಾರಿಭಾಷಿಕಗಳನ್ನಾಗಿ ಬಳಸಲು ಆರಂಭಿಸುವುದು, ಈ ಮೂಲಕ ಕನ್ನಡದ ಕೊರತೆಗಳನ್ನು ನೀಗುವುದು ಮುಂತಾದ ಹಲವು ನೆಲೆಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ, ಅದರ ಸಮ್ಮೇಳನಗಳ, ಅಧ್ಯಕ್ಷರ ಭಾಷಣಗಳ ಕಟ್ಟಡವು ಕಟ್ಟಲ್ಪಟ್ಟಿದೆ. ಅಥವಾ ಈ ಚರ್ಚಿತ ಅಂಶಗಳೇ ಈ ಎಲ್ಲಾ ದಿಸೆಗಳಲ್ಲಿ ಎದ್ದ ಕಟ್ಟಡದ ತಳಪಾಯವಾಗಿದೆ. ಇಂತಹ ಮಹತ್ತರವಾದ ಆಶಯದ ನೆಲೆಯಲ್ಲಿ ಎದ್ದು ಬಂದ ಕನ್ನಡ ಸಾಹಿತ್ಯ ಪರಿಷತ್ತು, ಅದರ ಅಧ್ಯಕ್ಷರುಗಳು ಆ ದಿಕ್ಕಿನಲ್ಲಿಯೇ ಕೆಲಸ ಮಾಡುತ್ತಾ ಬಂದಿದ್ದಾರೆ. ಅಲ್ಲದೆ ಅದರ ವಿವಿಧ ವಾರ್ಷಿಕ ಸಮ್ಮೇಳನಗಳ ಅಧ್ಯಕ್ಷರುಗಳ ಭಾಷಣಗಳೂ ಸಹ ಆ ದಿಕ್ಕಿನಲ್ಲಿಯೇ ಹರಿದಿವೆ. ಅವು ಕಾಲಾನುಸಾರವಾದ ಕನ್ನಡದ ಅವಸ್ಥೆಗಳನ್ನು, ಸಮಸ್ಯೆಗಳನ್ನು ಗುರುತಿಸಿ ಅವುಗಳ ನಿವಾರಣೋಪಾಯಗಳನ್ನು ತೋರುವ ಕೆಲಸವನ್ನು ಮಾಡುತ್ತಾ ಬಂದಿವೆ. ಇಂತಹ ಕೆಲಸ 1940ರ ದಶಕದವರೆಗೂ ವಿಶೇಷವಾಗಿ ನುಡಿಕೇಂದ್ರಿತವಾಗಿತ್ತು ಎಂಬುದನ್ನು ಗಮನಿಸಬೇಕು. ಅಂದರೆ ವಿವಿಧ ರಾಜಕೀಯ ಘಟಕಗಳ ಕನ್ನಡದ ಉಪಭಾಷೆಗಳಲ್ಲಿ ಇರುವ ಅವಸ್ಥಾಭೇದಗಳ ಹಿನ್ನೆಲೆಯಲ್ಲಿ ಪ್ರಮಾಣಬದ್ಧ ಕನ್ನಡ ಭಾಷೆಯನ್ನು ರೂಪಿಸುವುದು, ಅದನ್ನು ಎಲ್ಲಾ ಜ್ಞಾನಶಾಖೆಗಳ ಪುಸ್ತಕ ರಚನೆಗೆ ಬಳಸುವುದು, ಅದರ ಭಾಗವಾಗಿ ಸಾಹಿತ್ಯವನ್ನು ತನ್ನ ಪೂರ್ವ ಪರಂಪರೆ ಮತ್ತು ಅನ್ಯಭಾಷೆಯ ಸಾಹಿತ್ಯದ ಸಂಸರ್ಗದಲ್ಲಿ ನವೀನವಾಗಿ ಕೃಷಿ ಮಾಡುವುದು ಮುಂತಾದ ವಿಷಯಗಳತ್ತ ಕೇಂದ್ರೀಕೃತವಾಗಿತ್ತು. ಆದರೆ ಕಳೆದ ನಲವತ್ತರ ದಶಕದಿಂದ ಈಚೆಗೆ ಇಲ್ಲಿಯ ಸಮ್ಮೇಳನಾಧ್ಯಕ್ಷರ ಮಾತುಗಳಲ್ಲಿ, ಸಮ್ಮೇಳನಗಳ ನಿರ್ಣಯಗಳಲ್ಲಿ ಕನ್ನಡ ನಾಡನ್ನು ಸಾಂಸ್ಕೃತಿಕವಾಗಿ ಒಂದುಗೂಡಿಸಿದರೆ ಮಾತ್ರ ಸಾಲದು; ಇದನ್ನು ರಾಜಕೀಯವಾಗಿ ಸಹ ಒಂದುಗೂಡಿಸಬೇಕು ಎಂಬ ಕೂಗು ಎದ್ದಿತು. ಆ ಕೂಗು ಕನ್ನಡ ಪ್ರದೇಶಗಳು ರಾಜಕೀಯವಾಗಿ ಒಂದುಗೂಡಿ ಅಂದರೆ ಕರ್ನಾಟಕ ಏಕೀಕರಣ ಆಗುವವರೆಗೂ ಪ್ರತೀ ಸಮ್ಮೇಳನದಲ್ಲಿಯೂ ಅವ್ಯಾಹತವಾಗಿ ಹರಿಯಿತು. ಅದಕ್ಕೆ ಪ್ರತಿಯಾಗಿ ಅದು ರಾಜಕೀಯ ಮಾತು. ಅದು ಇಲ್ಲಿಗೆ ಸಲ್ಲದು ಎಂಬ ಕೆಲವು ಧ್ವನಿಗಳು ಸಹ ಇಲ್ಲಿ ಏಳದೇ ಇಲ್ಲ. ಆದರೂ ನಾಡು ರಾಜಕೀಯವಾಗಿ ಒಂದಾಗದೇ ಭಾಷಿಕವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ತನ್ನ ಅಭ್ಯುದಯವನ್ನು ಸಂಪೂರ್ಣವಾಗಿ ಕಾಣಲಾಗದು ಎಂಬ ವೈಜ್ಞಾನಿಕ ಧೋರಣೆ ಇಲ್ಲಿ ನಿಚ್ಚಳವಾಯಿತು. ಅಷ್ಟೊತ್ತಿಗಾಗಲೇ ಅಖಿಲ ಭಾರತ ಮಟ್ಟದಲ್ಲಿ ಭಾಷಾವಾರು ಪ್ರಾಂತ್ಯಗಳ ನಿರ್ಮಾಣದ ವಿಚಾರದಲ್ಲಿ ಎದ್ದಿದ್ದ ಕೂಗು, ಸಂಘರ್ಷ, ಘಟನೆಗಳು ಸಹ ಇದರ ಹಿನ್ನೆಲೆಗಿದ್ದವು.

ಒಟ್ಟಾರೆ ಕನ್ನಡ ಭಾಷೆಯನ್ನು ಸಾಹಿತ್ಯವನ್ನು ಸಹ ಒಳಗೊಂಡಂತೆ ಎಲ್ಲಾ ಜ್ಞಾನಶಾಖೆಗಳಲ್ಲಿ ಸಶಕ್ತವಾಗಿ ಬಳಕೆಯಾಗುವಂತೆ ಮಾಡುವುದು, ಆ ಮೂಲಕ ಭಾಷೆಯ

ಮೂಲಕ ಅಭಿವೃದ್ಧಿ ಎಂಬ ತಾತ್ವಿಕ ನೆಲೆಯಲ್ಲಿ ಕನ್ನಡ ಭಾಷೆಯ ಮೂಲಕ ಕನ್ನಡಿಗರ ಅಭಿವೃದ್ಧಿಯನ್ನು ಚುರುಕುಗೊಳಿಸುವುದು ಇಲ್ಲಿಯ ಎಲ್ಲಾ ಬೆಳವಣಿಗೆಗಳ ಒಳಗೂ ಹರಿದ ನಿರಂತರ ಅಮೃತವಾಹಿನಿಯಾಗಿದೆ. ಈ ನೆಲೆಯಲ್ಲಿ ಎಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು ಸಹ ಇವೆ. ಇವು ವಿವಿಧ ಕಾಲಘಟ್ಟ, ಅವುಗಳ ಆದ್ಯತೆಗಳು ಮತ್ತು ಸಮ್ಮೇಳನಾಧ್ಯಕ್ಷರ ವಿಭಿನ್ನ ಕಾಣ್ಕೆಗಳ ಹಿನ್ನೆಲೆಯಲ್ಲಿ ಮುಖ್ಯ ವ್ಯತ್ಯಾಸವಿರದಂತೆ ವೈವಿಧ್ಯಮಯವಾಗಿ ಹರಿದಿದೆ. ಈ ನೆಲೆಯಲ್ಲಿ 1915ರಲ್ಲಿ ಮಂಡನೆಯಾದ ಎಚ್.ವಿ. ನಂಜುಂಡಯ್ಯ ಅವರ ಸಮ್ಮೇಳನಾಧ್ಯಕ್ಷ ಭಾಷಣದಿಂದ ಈವರೆಗಿನ ಎಂಬತ್ತಕ್ಕೂ ಮೀರಿದ ಎಲ್ಲಾ ಭಾಷಣಗಳನ್ನು ಗಮನಿಸಬಹುದು. ಅವುಗಳ ಮುಖ್ಯ ನೆಲೆಗಳನ್ನು ಇಲ್ಲಿಂದ ಮುಂದೆ ಎಲ್ಲಾ ಸಮ್ಮೇಳನಾಧ್ಯಕ್ಷರ ಭಾಷಣಗಳ ಪರಿಶೀಲನೆಯ ಮೂಲಕ ನೋಡಲು ಯತ್ನಿಸಬಹುದು. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರುಗಳ ಭಾಷಣಗಳ ಸಂದರ್ಭದಲ್ಲಿ ಮೊದಲ ಸಮ್ಮೇಳನಾಧ್ಯಕ್ಷರಾದ ಎಚ್.ವಿ. ನಂಜುಂಡಯ್ಯ ಅವರ ಭಾಷಣ ಹಲವು ಕಾರಣಗಳಿಗಾಗಿ ಮಹತ್ವವೆನ್ನಿಸುತ್ತದೆ. ಕಾರಣ, ಇದು ಮೊದಲ ಭಾಷಣ. ಇದರಲ್ಲಿ ಸಮಕಾಲೀನ ಸಂದರ್ಭದ ಕನ್ನಡದ ಅವಸ್ಥೆ ಮತ್ತು ಮುಂದಿನ ಅಭಿವೃದ್ಧಿಯ ನೆಲೆಗಳು ಇತ್ಯಾದಿ ಮಾತ್ರ ಪ್ರಸ್ತಾಪವಾಗದೇ ಕನ್ನಡ ಸಾಹಿತ್ಯ ಪರಿಷತ್ತಿನ ಮೂಲ ಆಶಯ ಸಹ ಬಿಂಬಿತವಾಗುತ್ತದೆ. ಈ ನೆಲೆಯಲ್ಲಿ ಇವರ ಭಾಷಣವನ್ನು ಗಮನಿಸಬಹುದಾಗಿದೆ.

1860ರಲ್ಲಿ ಜನಿಸಿ, ಬಿ.ಎ., ಬಿ.ಎಲ್, ಎಂ.ಎ. ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ನ್ಯಾಯಾಂಗ, ಕಾರ್ಯಾಂಗದ ವಿವಿಧ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಲೇ, ಕನ್ನಡ, ಇಂಗ್ಲಿಷ್, ಸಂಸ್ಕೃತ ಮುಂತಾದ ಭಾಷೆಗಳ ಮೇಲೆ ಹಿಡಿತ ಸಾಧಿಸಿ, ಸಾಹಿತ್ಯದತ್ತ ಸಹ ಒಲವನ್ನು ಇರಿಸಿಕೊಂಡು ಕನ್ನಡದ ವಿಚಾರದಲ್ಲಿ ಮುಂದಾಳಾಗಿ ಗುರುತಿಸಿಕೊಂಡ ಎಚ್.ವಿ. ನಂಜುಂಡಯ್ಯ ಅವರು ಮೊದಲನೆ ಕನ್ನಡಪರವಾದ ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಿ ಟೀಕೆಗೆ ಸಹ ಒಳಗಾಗುತ್ತಾರೆ. ಅದಕ್ಕೆ ತಮ್ಮ ಸಮರ್ಥನೆಯೆಂದರೆ ತಮ್ಮ ವಿಚಾರ ಸರಣಿ ಅಂದು ತಲುಪಬೇಕಾಗಿದ್ದುದು ಕನ್ನಡವನ್ನು ಆಡುವ ಜನಸಾಮಾನ್ಯರಿಗಲ್ಲ; ಬದಲಿಗೆ ಇಂಗ್ಲಿಷಿನಲ್ಲಿ ಪ್ರಧಾನವಾಗಿ ವ್ಯವಹರಿಸುವ ಆಳುವ ವರ್ಗಕ್ಕೆ ಎಂಬುದು. ಇದರಾಚೆಗೆ ಕನ್ನಡದ ಕೆಲಸ ಕೇವಲ ಸರ್ಕಾರದಿಂದ ಮಾತ್ರ ಆಗುವಂಥದ್ದಲ್ಲ. ಬದಲಿಗೆ ಜನರಿಂದ, ವಿದ್ವಾಂಸರಿಂದ ಅದು ವಿಶೇಷವಾಗಿ ಆಗಬೇಕು. ಆ ದಿಸೆಯಲ್ಲಿ ಸರ್ಕಾರದ ಪ್ರೋತ್ಸಾಹವೂ ಇರಬೇಕು. ಈ ನೆಲೆಯಲ್ಲಿ ಕನ್ನಡದ ಸ್ಥಿತಿ ಒಂದಷ್ಟು ಮೈಸೂರು ರಾಜ್ಯದಲ್ಲಿ ಉತ್ತಮವಾಗಿದ್ದರೂ ಅದರಾಚೆಗೆ ಸಿಂಹಪಾಲಿನಷ್ಟು ಕನ್ನಡಿಗರು ಇರುವ ರಾಜಕೀಯ ಘಟಕಗಳಲ್ಲಿ ಇರುವ ಕನ್ನಡಿಗರು ಒಂದುಗೂಡಿ ಕೆಲಸ ಮಾಡಬೇಕು. ಅದಕ್ಕಾಗಿ ಹಿಂದಿನ ಕನ್ನಡವನ್ನು ಸಂಸ್ಕೃತವು ಮೂಲೆಗೆ ಒತ್ತರಿಸಿದಂತೆ

ಇಂದಿನ ಕನ್ನಡವನ್ನು ಇಂಗ್ಲಿಷ್ ಮೂಲೆಗೆ ಒತ್ತರಿಸುತ್ತಿದೆ. ಇದನ್ನು ಗಮನಿಸಿ ಈ ಭಾಷೆಗಳ ಅರಿವನ್ನು ಸಹ ಪಡೆದು, ಕನ್ನಡವನ್ನು ಸಂಗೋಪನೆ ಮಾಡಬೇಕು. ಈ ದಿಸೆಯಲ್ಲಿ ಪುಸ್ತಕ ರಚನೆ ಎಲ್ಲಾ ಜ್ಞಾನಶಾಖೆಗಳ ಸಂದರ್ಭದಲ್ಲಿಯೂ ಆಗಬೇಕು. ಅಗತ್ಯಬಿದ್ದಾಗ ಅನುವಾದ ಬೇಕು. ಅದು ಸಹ ಈ ನೆಲದ ಜಾಯಮಾನಕ್ಕೆ ಅನುಗುಣವಾಗಿ ಇರಬೇಕು. ಅದಕ್ಕಾಗಿ ಯೋಗ್ಯ ಶೈಲಿ, ವಾಕ್ಯರಚನಾ ಕ್ರಮವನ್ನು ಇರಿಸಿಕೊಳ್ಳಬೇಕು. ಇಂತಹ ಭಾಷೆಯ ನಿರ್ಮಿತಿಯಲ್ಲಿ ಕನ್ನಡದ ಹಲವು ಪ್ರಾದೇಶಿಕ ಉಪಭಾಷೆಗಳ ಪೈಕಿ ಮೈಸೂರು ಪ್ರದೇಶದ ಕನ್ನಡವನ್ನು ವಿಶೇಷವಾಗಿ ಪ್ರಮಾಣಬದ್ಧ ಭಾಷೆಯ ನಿರ್ಮಾಣಕ್ಕೆ ಬಳಸುವುದು ಒಳಿತು. ಕಾರಣ ಮೈಸೂರೇತರ ಹಲವು ರಾಜ್ಯಗಳಲ್ಲಿ ಮರಾಠಿಯ ಪ್ರಾಬಲ್ಯವಿರುವುದರಿಂದ ಸ್ವೋಪಜ್ಞ ಕನ್ನಡದ ಸಂದರ್ಭದಲ್ಲಿ ಮೈಸೂರು ಕನ್ನಡದ ಆಯ್ಕೆ ಹೆಚ್ಚು ಉಚಿತ. ಆ ನಿಟ್ಟಿನಲ್ಲಿ ಅಗತ್ಯವಾಗಿ ಸಂಸ್ಥೆಯೊಂದು ಬೇಕಿದೆ. ಅದು ಕಾಲಕಾಲಕ್ಕೆ ಯೋಜನೆಗಳನ್ನು ಹಾಕಿಕೊಂಡು ಸಮ್ಮೇಳನ, ಗ್ರಂಥ ರಚನೆ, ಪ್ರಕಟಣೆ ಇತ್ಯಾದಿ ಕಾರ್ಯಗಳನ್ನು ಜನತೆ ಮತ್ತು ಸರ್ಕಾರದ ನೆರವಿನಲ್ಲಿ ಕಾರ್ಯರೂಪಕ್ಕೆ ತರಬೇಕಿದೆ. ಅಲ್ಲದೇ ವಿದ್ವಜ್ಜನ ನಮ್ಮ ಪೂರ್ವ ಸಾಹಿತ್ಯ ಪರಂಪರೆ ಮತ್ತು ಪಾಶ್ಚಾತ್ಯ ಸಾಹಿತ್ಯ ಪರಂಪರೆಯ ಅರಿವಿನಲ್ಲಿ ಸಮಕಾಲೀನ ನವೀನ ಕೃತಿಗಳನ್ನು ಬರೆಯುವುದು ಅಗತ್ಯವಿದೆ. ಅದಕ್ಕೆ ಬೇಕಾದ ಭಾಷೆಯ, ಸಾಹಿತ್ಯದ ಸಂಸ್ಕೃತಿಯ ಭೂಮಿಕೆಗೆ ಪರಿಷತ್ತಿನ ಈ ಸ್ಥಾಪನೆ ಮತ್ತು ಯೋಜನೆಗಳು ಪೋಷಕವಾಗಿ ನಿಲ್ಲುವುವು. ಇದಕ್ಕೆ ಪ್ರಭುತ್ವದ ನೆರವೂ ಸಹ ಅತ್ಯವಶ್ಯವಾಗಿ ಇರಬೇಕು ಎಂಬ ಹಲವು ನೆಲೆಗಳಲ್ಲಿ ಇವರು ಭಾಷಣವನ್ನು ಮಾಡುತ್ತಾರೆ. ಬಹುಶಃ ಇದು ಮುಂದಿನ ಪರಿಷತ್ತು, ಅದರ ಧ್ಯೇಯ, ಸಮ್ಮೇಳನಾಧ್ಯಕ್ಷರ ಭಾಷಣಗಳ ಮುಂದಿನ ದಿಕ್ಕುದೆಸೆಯನ್ನು ಸಾರಿದಂತಹ ನಾಂದೀ ಭಾಷಣ ಅಥವಾ ಮುಂದಿನ ಆಶಯದ ಭಾಷಣವೆಂದರೂ ತಪ್ಪಾಗಲಾರದು ಎನ್ನಿಸುತ್ತದೆ.

ಎಚ್.ವಿ. ನಂಜುಂಡಯ್ಯ ಅವರು ಹೀಗೆ 1915ರಲ್ಲಿ ಮಾಡಿದ ಪ್ರಥಮ ಸಮ್ಮೇಳನಾಧ್ಯಕ್ಷ ಭಾಷಣದ ತರುವಾಯ 1916 ಮತ್ತು 1917ರಲ್ಲಿ ಸಹ ಕ್ರಮವಾಗಿ ಬೆಂಗಳೂರು, ಮೈಸೂರುಗಳಲ್ಲಿ ಸಮ್ಮೇಳನಾಧ್ಯಕ್ಷರ ಭಾಷಣಗಳನ್ನು ಮಾಡುತ್ತಾರೆ.

ಎಚ್.ವಿ. ನಂಜುಂಡಯ್ಯ ಅವರು ಮಾಡಿದ ಎರಡನೆಯ ಸಮ್ಮೇಳನಾಧ್ಯಕ್ಷರ ಭಾಷಣದಲ್ಲಿ ಮುಖ್ಯವಾಗಿ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿ ಮಾತನಾಡುತ್ತಾರೆ. ಅಷ್ಟೊತ್ತಿಗಾಗಲೇ ಕೇಂದ್ರ ಸರ್ಕಾರದವರು ಮೈಸೂರು ರಾಜ್ಯಕ್ಕೆ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಅನುಮತಿಯನ್ನು ನೀಡಿರುತ್ತಾರೆ. ಹಾಗಾಗಿ ರಾಜ್ಯದ ಶಿಕ್ಷಣದಲ್ಲಿ ಮುಖ್ಯ ಪಾತ್ರವನ್ನು ವಹಿಸುವ ಮೈಸೂರು ವಿಶ್ವವಿದ್ಯಾಲಯದಲ್ಲಿ ಬೋಧನಾ ಮಾಧ್ಯಮ ಯಾವುದಿರಬೇಕೆಂದು ಇಲ್ಲಿ ಕೂಲಂಕಷವಾಗಿ ಚರ್ಚಿಸುತ್ತಾರೆ. ಇಲ್ಲಿ ಕನ್ನಡ, ಇಂಗ್ಲಿಷ್,

ಸಂಸ್ಕೃತ, ತೆಲುಗು, ತಮಿಳು ಭಾಷೆಗಳು ಪ್ರಚಲಿತದಲ್ಲಿವೆ. ಆದರೂ ಇಲ್ಲಿಯ ಜನರ ಭಾಷೆ ಕನ್ನಡವಾದುದರಿಂದ, ಕನ್ನಡವನ್ನೇ ಬೋಧನಾ ಮಾಧ್ಯಮವನ್ನಾಗಿ ಕಡ್ಡಾಯವಾಗಿ ಅಳವಡಿಸಬೇಕು. ಅದು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೂ ಸಾಧ್ಯವಾಗಬೇಕು. ಈಗಾಗಲೇ ಅನ್ಯ ಭಾಷೆಯಾದ ಇಂಗ್ಲಿಷ್ ಕಲಿಕೆಗೆ ಇಲ್ಲಿಯ ಜನರ ಶಕ್ತಿ ದುರ್ವ್ಯಯವಾಗುತ್ತಿದೆ. ಇದು ತಪ್ಪಬೇಕು. ಇದರ ಜೊತೆಗೆ ಇಲ್ಲಿ ಅಳವಡಿಸುವ ಕನ್ನಡವು ಮೈಸೂರು ಮೂಲದ ಕನ್ನಡ ಉಪಭಾಷಾ ಪ್ರಭೇದವನ್ನು ತನ್ನ ಪ್ರಮಾಣೀಕರಣಕ್ಕಾಗಿ ಅವಲಂಬಿಸಬೇಕು. ಕಾರಣ, ಸಂಸ್ಥಾನ, ರಾಜ್ಯಗಳಿಗೆ ಹೋಲಿಸಿದರೆ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಜನರು ಕನ್ನಡವನ್ನು ಬಳಸುವ ಪರಿಸ್ಥಿತಿ ಇದೆ. ಇದು ಒಂದು ಬಗೆಯಲ್ಲಿ ಆಗಿನ ತಿರುಳ್ಗನ್ನಡದಂತೆ! ಹಾಗಾಗಿ ಶಿಕ್ಷಣದಲ್ಲಿ ಹಲವು ಕನ್ನಡಗಳ ನಡುವೆ ಏಕರೂಪತೆಯನ್ನು ತರಲು ಮೈಸೂರು ಸಂಸ್ಥಾನದ ಕನ್ನಡ ಭಾಷೆಯನ್ನು ಆಧರಿಸಬೇಕು. ಇದನ್ನು ವಿಶೇಷವಾಗಿ ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕು. ಇದನ್ನು ಆಧರಿಸಿ ಬೋಧನೆ ನಡೆಯಬೇಕು. ಈ ನಿರ್ಣಯವನ್ನು ಮೈಸೂರು ಸರ್ಕಾರದ ಮೂಲಕ ಹೈದರಾಬಾದ್, ಮುಂಬಯಿ, ಮದ್ರಾಸ್ ರಾಜ್ಯಗಳ ಸರ್ಕಾರಗಳಿಗೂ ಕಳುಹಿಸಬೇಕು. ಆಗ ಅಲ್ಲಿನ ಕನ್ನಡದ ಕರಡು ಪುಸ್ತಕಗಳನ್ನು ಕರ್ನಾಟಕ ಸಾಹಿತ್ಯ ಪರಿಷತ್ತಿಗೆ ಅವರು ಕಳುಹಿಸಿಕೊಟ್ಟರೆ, ಪರಿಷತ್ತು ಆ ಕರಡು ಪುಸ್ತಕಗಳಿಗೆ ಅಗತ್ಯ ತಿದ್ದುಪಡಿಗಳನ್ನು ಸೂಚಿಸುತ್ತದೆ. ಇದು ಸಾಧ್ಯವಾಗುವಂತಹ ದಿಸೆಯಲ್ಲಿ ಸರ್ಕಾರ ಮತ್ತು ಪರಿಷತ್ತು ಯೋಚಿಸಿ, ಕಾರ್ಯೋನ್ಮುಖವಾಗಬೇಕು. ಇದು ಕ್ರಮೇಣ ಇಂದು ಕನ್ನಡದ ವಿವಿಧ ಪ್ರದೇಶಗಳು ಹೊಂದಿರುವ ಕನ್ನಡದ ಭಾಷಿಕ ಸಮಸ್ಯೆಯನ್ನು ನಿರ್ಮೂಲನಗೊಳಿಸುತ್ತದೆ.

ಹೀಗೆ ಎಚ್.ವಿ. ನಂಜುಂಡಯ್ಯ ಅವರು ತಮ್ಮ ಎರಡನೆಯ ಸಮ್ಮೇಳನಾಧ್ಯಕ್ಷ ಭಾಷಣವನ್ನು ಶಿಕ್ಷಣದಲ್ಲಿ ಕನ್ನಡ ಮಾಧ್ಯಮದ ಕಡ್ಡಾಯ ಅಳವಡಿಕೆ ಮತ್ತು ಪ್ರಮಾಣಬದ್ಧ ಕನ್ನಡ ಭಾಷೆಯನ್ನು ಪಠ್ಯಪುಸ್ತಕಗಳ ರಚನೆಯಲ್ಲಿ ಅಳವಡಿಸಿ, ಅದು ಮೈಸೂರೇತರ ಕನ್ನಡದ ಪ್ರದೇಶಗಳಲ್ಲಿ ಸಹ ಆಯಾ ಸರ್ಕಾರಗಳ ಮೂಲಕ ಕನ್ನಡ ಸಾಹಿತ್ಯ ಪರಿಷತ್ತಿನ ಬೌದ್ಧಿಕ ನೆರವಿನಲ್ಲಿ ಕಾರ್ಯಗತವಾಗಬೇಕು ಎಂಬ ಆಶಯದ ನೆಲೆಯಲ್ಲಿ ಮಂಡಿಸುತ್ತಾರೆ.

ಮೈಸೂರಿನಲ್ಲಿ 1917ರಲ್ಲಿ ನಡೆದ ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅದರ ನೇತೃತ್ವವನ್ನು ವಹಿಸಿದ್ದ ಎಚ್.ವಿ. ನಂಜುಂಡಯ್ಯ ಅವರು ಪರಿಷತ್ತಿನ ಸ್ಥಾಪನೆಯ ಉದ್ದೇಶಗಳನ್ನು ಪುನರಾವರ್ತಿಸ ಹೋಗುವುದಿಲ್ಲ. ಅದನ್ನು ಅವರೇ ಸ್ವತಃ ಪ್ರಸ್ತಾಪಿಸುತ್ತಾರೆ. ಮುಂದುವರಿದು, ಸದ್ಯ ಕನ್ನಡದ ವಿವಿಧ ರಾಜಕೀಯ ಪ್ರದೇಶಗಳ ನಡುವೆ ಐಕ್ಯಮತ ಮೂಡಬೇಕು. ಅಲ್ಲಿ ಸೌಹಾರ್ದತೆ ಏರ್ಪಡಬೇಕು ಎಂದು ಭಾಷಣದ ಆರಂಭಕ್ಕೆ ಪ್ರಸ್ತಾಪಿಸುತ್ತಾರೆ. ಕನ್ನಡಿಗರು ರಾಜಕೀಯವಾಗಿದ್ದರೂ ಸಾಂಸ್ಕೃತಿಕವಾಗಿ ಒಂದುಗೂಡಿ

ತೀವ್ರ ಐಕ್ಯಮತ ಮತ್ತು ಸೌಹಾರ್ದತೆಯನ್ನು ಮೆರೆಯಬೇಕು ಎಂದು ನೀಡಿದ ಈ ಕರೆ ಕರ್ನಾಟಕ ಏಕೀಕರಣ ಚರಿತ್ರೆಯಲ್ಲಿ ಅರುಣೋದಯದ ರಶ್ಮಿ ಎಂದೇ ಭಾವಿಸಬೇಕಾಗಿದೆ. ಉಳಿದಂತೆ ಇಂತಹ ಕೈಂಕರ್ಯಕ್ಕೆ ಪರಿಷತ್ತಿನ ಕಾರ್ಯ ಯೋಜನೆಗಳಿಗೆ ಸರ್ಕಾರದಿಂದ ಇನ್ನಷ್ಟು ನೆರವು ಬೇಕು ಎಂದು ಪರೋಕ್ಷವಾಗಿ ವಿನಯದಿಂದ ಬೇಡಿಕೆಯನ್ನಿಡುತ್ತಾರೆ. ಆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದವರು ಅಂದಿನ ಮೈಸೂರು ರಾಜ್ಯದ ಯುವರಾಜರು.

1918ರಲ್ಲಿ ಮೊದಲ ಬಾರಿಗೆ ಬೆಂಗಳೂರಿನ ಆಚೆಗೆ ಸಮ್ಮೇಳನವು ನಡೆಯುತ್ತದೆ. ಅದು ಧಾರವಾಡದಲ್ಲಿ. ಅದರ ಅಧ್ಯಕ್ಷರು ಆರ್. ನರಸಿಂಹಾಚಾರ್ ಅವರು. 1861ರಲ್ಲಿ ಜನಿಸಿದ ಇವರು ಎಂ.ಎ. ಕನ್ನಡದ ಮೊದಲ ಪದವೀಧರರು. ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಈ ಪದವಿಯನ್ನು ಇವರು 1893ರಲ್ಲಿ ಪಡೆದರು. ಇವರು ವಿಶೇಷವಾಗಿ ಪ್ರಾಚ್ಯ ಸಾಹಿತ್ಯ ಮತ್ತು ಭಾಷೆಯ ಬಗೆಗೆ ಪಾಂಡಿತ್ಯವನ್ನು ಹೊಂದಿದ್ದರು. ಇವರು ಪದವೀಧರರಾಗುವ ಹೊತ್ತಿಗೆ, ಹಿಂದೆ ಸಂಸ್ಕೃತದ ಕರಿನೆರಳಲ್ಲಿ ನಲುಗಿದಂತೆ, ಈಗ ಇಂಗ್ಲಿಷಿನ ಕರಿನೆರಳಲ್ಲಿ ಕನ್ನಡವು ನಲುಗತೊಡಗಿತ್ತು. ಆಡಳಿತ, ಶಿಕ್ಷಣ, ಕಾನೂನು ಇತ್ಯಾದಿ ಕ್ಷೇತ್ರಗಳಲ್ಲಿ ಇಂಗ್ಲಿಷಿಗೆ ಮೊದಲ ಮನ್ನಣೆಯಿತ್ತು. ಸಾಹಿತ್ಯ, ಭಾಷೆಯ ಕ್ಷೇತ್ರದಲ್ಲಿ ಸಹ ಇಂಗ್ಲಿಷ್ ಬಳಕೆದಾರರಿಗೆ ಸಿಗುತ್ತಿದ್ದ ಮನ್ನಣೆ ಕನ್ನಡದ ಬಳಕೆದಾರರಿಗೆ ಇರಲಿಲ್ಲ. ಹೀಗೆ ಕನ್ನಡದ ವಿಸ್ಮೃತಿಯ ಕಾಲಘಟ್ಟ ಇದಾಗಿತ್ತು. ಹಾಗಾಗಿ ಇಲ್ಲಿಯ ಎಲ್ಲಾ ಕನ್ನಡಪರ ಚಿಂತಕರು ಕನ್ನಡದ ಶ್ರೀಮಂತಿಕೆಯನ್ನು ಇತಿಹಾಸ, ಪುರಾಣಗಳ ಭಿತ್ತಿಯಲ್ಲಿ ನೋಡಲು, ಜನರಿಗೆ ತೋರಲು ಯತ್ನಿಸುತ್ತಿದ್ದರು. ಈ ಹಿಂದಿನ ಸಮ್ಮೇಳನಾಧ್ಯಕ್ಷರು ವರ್ತಮಾನದ ಕನ್ನಡದ ಸಮಸ್ಯೆಗಳು ಮತ್ತು ಅವುಗಳ ಕೆಲವು ಪರಿಹಾರೋಪಾಯಗಳನ್ನು ಸೂಚಿಸಿದಂತೆ ಪ್ರಸ್ತುತ ಸಮ್ಮೇಳನದಲ್ಲಿ ಅದೇ ಕೆಲಸವನ್ನು ಆರ್. ನರಸಿಂಹಾಚಾರ್ ಅವರು ಇನ್ನೊಂದು ಬಗೆಯಲ್ಲಿ ಮಾಡುತ್ತಾರೆ. ಅದೆಂದರೆ ಸುಮಾರು 26 ಪುಟಗಳಲ್ಲಿ ವ್ಯಾಪಿಸಿರುವ ತಮ್ಮ ಸುದೀರ್ಘವಾದ ಭಾಷಣದಲ್ಲಿ ಬಹುಪಾಲು ಮೀಸಲಾಗಿರುವುದು ಕನ್ನಡದ ಚಾರಿತ್ರಿಕ ಶ್ರೀಮಂತಿಕೆಯನ್ನು ಕುರಿತು. ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯದ ಮೂಲ, ಆರಂಭದ ಕಾಲ, ಅನಂತರ ಅದರ ಬೆಳವಣಿಗೆ, ಅದರ ಭಾಗವಾಗಿ ಭಾಷಾ ಚರಿತ್ರೆ, ಕನ್ನಡ ಸಾಹಿತ್ಯ ಚರಿತ್ರೆ, ಕರ್ನಾಟಕದ ರಾಜಕೀಯ ಅಥವಾ ರಾಜಮನೆತನಗಳ ಚರಿತ್ರೆ, ಧಾರ್ಮಿಕ ಚರಿತ್ರೆ ಇತ್ಯಾದಿಗಳನ್ನು ಸಂಶೋಧನಾ ನೆಲೆಯಲ್ಲಿ ಮಂಡಿಸುತ್ತಾರೆ. ಅದಕ್ಕಾಗಿ ಶಾಸನ, ಕಾವ್ಯ, ಶಾಸ್ತ್ರ ಇತ್ಯಾದಿಗಳ ಲಿಖಿತ ದಾಖಲೆಗಳನ್ನು ವಿಶೇಷವಾಗಿ ಪ್ರಸ್ತಾಪಿಸುತ್ತಾರೆ. ಈ ಮೂಲಕ ವಿಸ್ಮೃತಿಯತ್ತ ನಡೆದ ಕನ್ನಡಕ್ಕೆ ತನ್ನ ಶ್ರೀಮಂತ ಅಸ್ಮಿತೆಯನ್ನು ವರ್ತಮಾನದಲ್ಲಿ ಪ್ರತಿಷ್ಠಾಪಿಸುವ ಅನಿವಾರ್ಯ ಕೆಲಸವನ್ನು ಇಲ್ಲಿ ಮಾಡುತ್ತಾರೆ. ನಾಡು ಸಾಂಸ್ಕೃತಿಕವಾಗಿ ಏಳದೇ ಸರ್ವತೋಮುಖವಾಗಿ ಏಳ್ಗೆಯಾಗದು. ಈ ನಿಟ್ಟಿನಲ್ಲಿ ಭಾಷೆ ಆ ನಾಡಿನ ಆತ್ಮವೇ ಸರಿ. ಈ ಪರಿಭಾವನೆಯಲ್ಲಿ ಕನ್ನಡದ ವರ್ತಮಾನದ ಸಮಸ್ಯೆಯನ್ನು

ನಿವಾರಿಸುವುದು ಸಾಧ್ಯವಿದೆ. ಆ ಸಮಸ್ಯೆಗೆ ಕಾರಣವೆಂದರೆ ಕನ್ನಡಕ್ಕೆ ಎಲ್ಲಾ ಕ್ಷೇತ್ರಗಳಲ್ಲಿಯೂ ಎರಡನೆಯ ಸ್ಥಾನ ಸಿಕ್ಕಿರುವುದು, ಅದರಲ್ಲೂ ಮೈಸೂರೇತರ ರಾಜ್ಯಗಳಲ್ಲಿ ಕನ್ನಡಕ್ಕೆ ಕನಿಷ್ಠ ಸ್ಥಾನವೂ ಶಿಕ್ಷಣ, ಆಡಳಿತದಲ್ಲಿ ದೊರೆಯುತ್ತಿಲ್ಲ. ಹೀಗಾಗಿ ಎಲ್ಲಾ ಕನ್ನಡದ ಪ್ರದೇಶಗಳ ಜನ ಸಾಂಸ್ಕೃತಿಕವಾಗಿ, ಭಾಷಿಕವಾಗಿ ಒಂದಾಗಬೇಕು, ಗಟ್ಟಿಯಾಗಬೇಕು. ಅದಕ್ಕಾಗಿ ಹಲವು ಪ್ರಭೇದಗಳಲ್ಲಿ ಹರಡಿಕೊಂಡಿರುವ ಕನ್ನಡವು ಪ್ರಮಾಣಬದ್ಧ ಭಾಷೆಯ ರೂಪದಲ್ಲಿ ಹೊಸದಾಗಿ ಮೈತಳೆಯಬೇಕು. ಅಂತಹ ಭಾಷೆಯ ಬಳಕೆ ಹಲವು ಕನ್ನಡ ಪ್ರದೇಶಗಳ ಜನರ ನಡುವೆ ಐಕ್ಯತೆಯನ್ನು ಗಟ್ಟಿಯಾಗಿ ತರಬಲ್ಲುದು. ಅಲ್ಲದೆ ಆ ಭಾಷೆಯನ್ನು ಶಿಕ್ಷಣ, ಆಡಳಿತದಲ್ಲಿ ಬಳಸುವುದರಿಂದ ಯಾವುದೇ ವಿಷಯದ ಗ್ರಹಿಕೆ ಮತ್ತು ಸಂವಹನದಲ್ಲಿ ಪಾರದರ್ಶಕತೆ ಮತ್ತು ಪರಿಣಾಮ ತೀವ್ರತೆ ಸಾಧ್ಯವಾಗುವುದರಿಂದ ಅಂತಹ ಭಾಷಾರೂಪದ ನಿರ್ಮಿತಿಗೆ ವಿಶೇಷವಾಗಿ ಗ್ರಂಥಕರ್ತರು ಮುಂದಾಗಬೇಕು. ಅದರ ಜಾರಿಯಲ್ಲಿ ಪ್ರಭುತ್ವಗಳು ಕೈ ಜೋಡಿಸಬೇಕು ಎಂಬ ಹಲವು ನೆಲೆಗಳಲ್ಲಿ ಮಹತ್ವದ ಭಾಷಣವನ್ನು ಇವರು ಮಾಡುತ್ತಾರೆ. ಅದು ಕನ್ನಡದ ಶ್ರೀಮಂತಿಕೆ, ಬ್ರಿಟಿಷರ ಅವಧಿಯಲ್ಲಿ ಅದರ ನಲುಗುವಿಕೆಯ ಸ್ವರೂಪ ಮತ್ತು ಅದರ ಪರಿಹಾರೋಪಾಯ. ಈ ನೆಲೆಯಲ್ಲಿ ಇವರ ಭಾಷಣವು ಚಾರಿತ್ರಿಕ ಮಹತ್ವವನ್ನು ಇಂದಿಗೂ ಸ್ಥಾಪಿಸುತ್ತದೆ.

1919ರಲ್ಲಿ ಹಾಸನದಲ್ಲಿ ನಡೆದ 5ನೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದವರು ಕರ್ಪೂರ ಶ್ರೀನಿವಾಸರಾಯರು. ಇವರ ಜೀವನ ಬೆಂಗಳೂರು, ಧಾರವಾಡ, ಪೂನಾ ಮುಂತಾದ ಪ್ರದೇಶಗಳಲ್ಲಿ ವಿಶೇಷವಾಗಿ ಅರಳಿದೆ. ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಉನ್ನತ ಹುದ್ದೆಗಳಲ್ಲಿದ್ದವರು. ಎಂಜಿನಿಯರ್ ಆಗಿ, ಕನ್ನಡ, ಸಂಸ್ಕೃತ, ಇಂಗ್ಲಿಷ್, ಮರಾಠಿ ಮುಂತಾದ ಭಾಷೆಗಳಲ್ಲಿ ಪ್ರಾವೀಣ್ಯತೆಯನ್ನು ಹೊಂದಿದ್ದ ಇವರು ಬರೆಯಲಿಲ್ಲ. ಆದರೆ ಒಳ್ಳೆಯ ಓದುಗರಾಗಿದ್ದರು. ಅಲ್ಲದೆ ಅನೇಕ ಕೃತಿಕಾರರ ಬಗೆಗೆ ಆಳವಾಗಿ ಅಭ್ಯಸಿಸಿದ್ದರಿಂದಾಗಿ ಮತ್ತು ಕೃಷ್ಣರಾಜ ಪರಿಷನ್ಮಂದಿರ ಸ್ಥಾಪನೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅನೇಕ ಆಗುಹೋಗುಗಳಲ್ಲಿ ಗುರುತರವಾಗಿ ಕೆಲಸ ಮಾಡಿದ್ದುದರಿಂದಾಗಿ ಇವರು ಸಮ್ಮೇಳನದ ಅಧ್ಯಕ್ಷತೆಯ ಗೌರವವನ್ನು ಪಡೆದರು. ಇವರು ತಮ್ಮ ಭಾಷಣದಲ್ಲಿ ಕನ್ನಡ ಸಾಹಿತ್ಯ ಪರಂಪರೆಯ ಬಗೆಗೆ ವಿಶೇಷವಾಗಿ ಮಾತನಾಡುತ್ತಾರೆ. ಅಲ್ಲದೆ ವರ್ತಮಾನದ ಕನ್ನಡದ ಧಾರುಣ ಸ್ಥಿತಿಯನ್ನು ಬಿಚ್ಚಿಡುತ್ತಾರೆ. ಹಲವು ಆಡಳಿತಗಳಲ್ಲಿ ಇರುವ ಕನ್ನಡದ ಪ್ರದೇಶಗಳಲ್ಲಿ ಮುಂಬಯಿ ಪ್ರಾಂತ್ಯದಲ್ಲಿ ಮಾತ್ರ ವಿಶೇಷವಾಗಿ ಕನ್ನಡ ಜಾಗೃತಿ ಕಾಣುತ್ತಿದೆ. ಮದ್ರಾಸು, ಮೈಸೂರು, ಹೈದರಾಬಾದ್ ಮುಂತಾದ ಕಡೆಗಳಲ್ಲಿ ಅದು ಕಾಣುತ್ತಿಲ್ಲ ಎಂದು ಹೇಳಿದ್ದಾರೆ. ಅಂತಹ ಭೂಮಿಕೆ ಧಾರವಾಡ ಎಂಬುದು ಗಮನಾರ್ಹ. ಅಲ್ಲದೆ ಹಿಂದೆ ಶ್ರೀಮಂತಿಕೆಯನ್ನು ಮೆರೆದಿದ್ದ ಕನ್ನಡದ ಭಾಷಿಕ ಪ್ರದೇಶಗಳ ವ್ಯಾಪ್ತಿ ದಕ್ಷಿಣದ ಕಾವೇರಿಯಿಂದ ಉತ್ತರದ ಗೋದಾವರಿ,

ಪಶ್ಚಿಮದ ಕರಾವಳಿಯಿಂದ ಪೂರ್ವದ ಕರಾವಳಿಯವರೆಗೆ ವ್ಯಾಪಿಸಿತ್ತು; ಆದರೆ ಆ ವ್ಯಾಪ್ತಿ ಇಂದು ಬಹುತೇಕ ಕುಗ್ಗಿದೆ. ಆದರೆ ಇರುವ ಪ್ರದೇಶದಲ್ಲಿ ಕನ್ನಡ ಭಾಷೆಯ, ಸಾಹಿತ್ಯದ, ಸಂಸ್ಕೃತಿಯ ಶ್ರೀಮಂತಿಕೆಯನ್ನು ಹೆಚ್ಚಿಸಬೇಕಿದೆ. ಅದಕ್ಕಾಗಿ ಸಾಹಿತ್ಯವು ವಿಶೇಷವಾಗಿ ಮುಂದಾಗಬೇಕು. ಆ ದಿಸೆಯಲ್ಲಿ ಗ್ರಂಥಕರ್ತರು ಪೂರ್ವದ ಕನ್ನಡ ಸಾಹಿತ್ಯ ಮತ್ತು ಇಂಗ್ಲಿಷ್ ಸಾಹಿತ್ಯವನ್ನು ವಿಶೇಷವಾಗಿ ಅರಿಯಬೇಕು. ಸ್ವತಂತ್ರ ಕೃತಿ ರಚನೆ ಮತ್ತು ಅನುವಾದ ಕಾರ್ಯಗಳಿಂದ ಸಾಹಿತ್ಯ ಕೃಷಿ ಶ್ರೀಮಂತಗೊಳ್ಳುವುದು ಸಾಧ್ಯ. ಆ ದಿಸೆಯಲ್ಲಿ ನಾಡನ್ನು ಸಾಂಸ್ಕೃತಿಕವಾಗಿ ಉಳಿಸುವುದು, ಬೆಳೆಸುವುದು ಸಾಧ್ಯವಿದೆ ಎಂದು ಹಲವು ನೆಲೆಗಳಲ್ಲಿ ತಮ್ಮ ಭಾಷಣವನ್ನು ಮಾಡುತ್ತಾರೆ. ಬಹಳ ಮುಖ್ಯವಾಗಿ ಇಲ್ಲಿ ಕನ್ನಡ ನುಡಿಯ ಶ್ರೀಮಂತಿಕೆಯನ್ನು ಹೆಚ್ಚಿಸುವ ವಿಧಿ–ವಿಧಾನಗಳ ಚರ್ಚೆ ಇಲ್ಲಿದೆಯೇ ಹೊರತು ರಾಜಕೀಯವಾಗಿ ಕನ್ನಡ ಪ್ರದೇಶಗಳ ಏಕೀಕರಣ ಎಂಬುದು ಪ್ರಸ್ತುತ ಸಂಸ್ಥೆ ಮತ್ತು ಸಮ್ಮೇಳನದ ಆಸ್ಥೆಯಲ್ಲ ಎಂದು ಅಭಿಪ್ರಾಯ ಪಡುತ್ತಾರೆ.

ಹೀಗೆ ನಾಡನ್ನು ರಾಜಕೀಯವಾಗಿ ಕಟ್ಟುವ ಬದಲಿಗೆ ಭಾಷೆ ಮತ್ತು ಸಾಹಿತ್ಯದ ಮೂಲಕ ಸಾಂಸ್ಕೃತಿಕವಾಗಿ ಕಟ್ಟುವ ಬಗೆಯನ್ನು ಇಲ್ಲಿ ಚರ್ಚಿಸುತ್ತಾರೆ.

1920ರಲ್ಲಿ ಬಳ್ಳಾರಿಯ ಹೊಸಪೇಟೆಯಲ್ಲಿ ನಡೆದ 6ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ರೊದ್ದ ಶ್ರೀನಿವಾಸರಾಯರು ಕನ್ನಡದ ಅಂದಿನ ದಾರುಣ ಅವಸ್ಥೆಯನ್ನು ಮನ ಮುಟ್ಟುವಂತೆ ಬಿಚ್ಚಿಟ್ಟಿದ್ದಾರೆ. ಮುಂಬೈ, ಹೈದರಾಬಾದ್, ಮದ್ರಾಸ್, ಮೈಸೂರು ಕರ್ನಾಟಕ ಪ್ರದೇಶಗಳಲ್ಲಿ ಮೈಸೂರು ಕರ್ನಾಟಕದಲ್ಲಿ ಮಾತ್ರ ಅರಸರ, ಜನರ ಭಾಷೆ ಒಂದೇ ಆಗಿರುವುದು. ಅದು ಕನ್ನಡ. ಆದರೂ ಹಲವಾರು ವರ್ಷಗಳ ಕಾಲ ಕಮೀಷನರುಗಳ ಆಳ್ವಿಕೆಗೆ ಒಳಪಟ್ಟಿದ್ದರಿಂದಾಗಿ ಇಲ್ಲಿಯ ಶಿಕ್ಷಣ, ಆಡಳಿತದಲ್ಲಿ ವಿಶೇಷವಾಗಿ ಇಂಗ್ಲಿಷ್ ಭಾಷೆ ನೆಲೆಗೊಂಡಿದೆ. ಅದರ ಪರಿಣಾಮವಾಗಿ ಇಲ್ಲಿಯ ಜನರಿಗೆ ಇಂಗ್ಲಿಷ್ ವ್ಯಾಮೋಹವೂ ಹೆಚ್ಚಾಗಿದೆ. ಕನ್ನಡ–ಇಂಗ್ಲಿಷ್ ನುಡಿಬೆರಕೆ ಇಲ್ಲಿ ಇತರೆ ಪ್ರದೇಶಗಳಿಗಿಂತ ಹೆಚ್ಚಾಗಿದೆ. ಮೈಸೂರು ಮಹಾರಾಜರ ಕನ್ನಡ ಕಟ್ಟುವ ಕಾಯಕ ದೊಡ್ಡದು. ಅದು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಬೆಳವಣಿಗೆಯಲ್ಲಿಯೂ ಇದೆ. ಹೀಗೆ ಮುಂಬಯಿ–ಮೈಸೂರುಗಳೊಂದಾಗುವ ದಿಸೆಯಲ್ಲಿ ಇದು ಚಾರಿತ್ರಿಕ ಮಹತ್ವದ ಹೆಜ್ಜೆ ಎಂದು ಚರ್ಚಿಸುವ ಇವರು, ಮುಂಬಯಿ ಕರ್ನಾಟಕದಲ್ಲಿ ಕನ್ನಡ ಶಾಲೆಗಳ ಸಂಖ್ಯೆ ದಿನೇದಿನೆ ಹೆಚ್ಚಾಗುತ್ತಾ ಬಂದಿರುವುದಕ್ಕೆ ದುಡಿದ ಅನೇಕ ಮಹನೀಯರನ್ನು ನೆನಪಿಸಿಕೊಳ್ಳುವ ಇವರು ಇಂತಹ ಭರವಸೆ ಇತರೆ ಕನ್ನಡ ಪ್ರದೇಶಗಳಲ್ಲಿ ಇಲ್ಲದಿರುವುದನ್ನು ಸಹ ಸೂಚ್ಯವಾಗಿ ಪ್ರಸ್ತಾಪಿಸುತ್ತಾರೆ.

ಹೀಗೆ ಕನ್ನಡದ ವಿವಿಧ ಆಡಳಿತ ಪ್ರದೇಶಗಳಲ್ಲಿ ಇರುವ ಕನ್ನಡದ ವಿವಿಧ ಬಗೆಯ ಅವಸ್ಥೆಗಳನ್ನು ಕಾಳಜಿಯಿಂದ ಪರಿಶೀಲಿಸುವ ಇವರು ಇಂಗ್ಲಿಷ್ ಮೋಹವನ್ನು ಬಿಟ್ಟು ಕನ್ನಡವನ್ನು ಕಟ್ಟುವ ಕೆಲಸಕ್ಕೆ ಕನ್ನಡಿಗರಿಗೆ ಕರೆ ಕೊಡುತ್ತಾರೆ. ಈ ದಿಸೆಯಲ್ಲಿ ಕನ್ನಡದ ಹಿಂದಿನ ಶ್ರೀಮಂತ ಅವಸ್ಥೆಯನ್ನು ಕೇವಲ ನೆನೆಸುತ್ತ ಕೂರುವುದು ಅಧಃಪತನದ ಲಕ್ಷಣವಾಗುತ್ತದೆ ಎಂದು ಎಚ್ಚರಿಸುವ ಇವರು, ಈ ದಿಸೆಯಲ್ಲಿ ಭಾರತದ ಇತರೆ ಭಾಷಿಗರಿಗಿಂತ ತಾವು ಹಿಂದಿದ್ದೇವೆ ಎಂಬುದನ್ನು ಪ್ರಸ್ತಾಪಿಸುತ್ತಾರೆ. ವಿಶೇಷವಾಗಿ ಶಿಕ್ಷಣ ಇಲಾಖೆಯಲ್ಲಿ ಅಧ್ಯಾಪಕರಾಗಿ, ಅಧಿಕಾರಿಗಳಾಗಿ ಕೆಲಸ ನಿರ್ವಹಿಸಿದ್ದ ಇವರು ಕನ್ನಡ ಭಾಷೆ ಮತ್ತು ಶಿಕ್ಷಣದ ಮೂಲಕ ನಾಡನ್ನು ಕಟ್ಟಿದ ಆಶಯವನ್ನು ತಮ್ಮ ಭಾಷಣದಲ್ಲಿ ಇರಿಸಿಕೊಳ್ಳುತ್ತಾರೆ. ಈ ದಿಸೆಯಲ್ಲಿ ಹೊರಬರುತ್ತಿರುವ ಸಾಹಿತ್ಯವನ್ನು ಸಹ ಗುರುತಿಸುತ್ತಾರೆ.

ಹೀಗೆ ಮುಂಬಯಿ ಕರ್ನಾಟಕ ಮತ್ತು ಅದರಲ್ಲೂ ವಿಶೇಷವಾಗಿ ಧಾರವಾಡದ ಪರಿಸರವನ್ನು ಕರ್ಮಭೂಮಿಯನ್ನಾಗಿ ಹೊಂದಿದ್ದ ರೊದ್ದ ಶ್ರೀನಿವಾಸರಾಯರು ಶಿಕ್ಷಣದಲ್ಲಿ ಕನ್ನಡ ಅನುಷ್ಠಾನಗೊಳ್ಳದೇ ಕನ್ನಡ ಸಂಸ್ಕೃತಿಯ ಅಭಿವೃದ್ಧಿ ಸಾಧ್ಯವಿಲ್ಲ ಎಂಬ ನಿಲುವಿನಲ್ಲಿ ತಮ್ಮ ಭಾಷಣವನ್ನು ಮಂಡಿಸುತ್ತಾರೆ.

ಹೀಗೆ ಕನ್ನಡ ಸಾಹಿತ್ಯ ಪರಿಷತ್ತಿನ ಬಹಳ ಮುಖ್ಯ ಆಶಯಗಳಾದ ಕನ್ನಡ ನಾಡಿನ ಸಾಂಸ್ಕೃತಿಕ ಮತ್ತು ಭಾಷಿಕ ಏಕೀಕರಣ (ಅನಂತರದಲ್ಲಿ ಇದು ನಾಡಿನ ರಾಜಕೀಯ ಏಕೀಕರಣದತ್ತಲೂ ತುಡಿಯುತ್ತದೆ). ಕನಿಷ್ಠ ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡದ ಅನುಷ್ಠಾನವನ್ನು ಎಲ್ಲಾ ಸಮ್ಮೇಳನಗಳ ಅಧ್ಯಕ್ಷರು ಏಕತ್ರವಾಗಿ ಒತ್ತಾಯಿಸುತ್ತ ಬಂದಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಹಾಗೂ ರಾಜ್ಯದ ಹೊರಗಿನ ಕೆಲವು ಪ್ರದೇಶಗಳಲ್ಲಿ ನಡೆದ ಈ ಸಮ್ಮೇಳನಗಳು ಈ ನಿಟ್ಟಿನಲ್ಲಿ ಒತ್ತಾಯಿಸುತ್ತಲೇ ಬಂದಿವೆ. ಆದರೂ ಇವತ್ತಿನವರೆಗೂ ನಾಡಿನ ಸಾಂಸ್ಕೃತಿಕ ಏಕೀಕರಣ ಒಂದಷ್ಟು ನಡೆದಿದೆ. ಅಂತೆಯೇ ಕನ್ನಡ ಭಾಷೆಯ ಪ್ರಮಾಣೀಕರಣವು ಪಠ್ಯಪುಸ್ತಕ, ಆಡಳಿತದ ಲಿಖಿತ ದಾಖಲೆ ಮೊದಲಾದವುಗಳಲ್ಲಿ ಅನುಷ್ಠಾನಗೊಂಡಿದೆ. ಆದರೆ ಶಿಕ್ಷಣದಲ್ಲಿ ಕನ್ನಡದ ಅನುಷ್ಠಾನವಿರಲಿ, ಕನಿಷ್ಠ ಪ್ರಾಥಮಿಕ ಶಿಕ್ಷಣದಲ್ಲಾದರೂ ಅದರ ಅನುಷ್ಠಾನ ಮಾತ್ರ ಈವರೆಗಿನ ಎಲ್ಲಾ ಎಂಬತ್ತೂರು ಸಮ್ಮೇಳನಗಳಲ್ಲಿ ಮೊಳಗಿದರೂ ಅದರ ಅನುಷ್ಠಾನ ಇಂದಿಗೂ ಆಗದೇ ಇರುವುದು ಅದು ಅರಣ್ಯರೋದನವಲ್ಲದೆ ಬೇರೆ ಅಲ್ಲ ಎನಿಸುತ್ತದೆ. ಈ ಒತ್ತಾಯ ಬಹುತೇಕ ಎಲ್ಲಾ ಸಮ್ಮೇಳನಗಳ ನಿರ್ಣಯಗಳಲ್ಲಿಯೂ ಸಹ ಆದ್ಯತೆಯನ್ನು ಪಡೆಯುತ್ತ ಬಂದಿದೆ. ಆಯಾ ಸಂದರ್ಭದಲ್ಲಿ ಸರ್ಕಾರಗಳು ಸಹ ಇದಕ್ಕೆ ಸಂಬಂಧಿಸಿದ ಕನಿಷ್ಠ ಗಟ್ಟಿ ಆಶ್ವಾಸನೆಯನ್ನು ಸಹ ಕೊಟ್ಟಿಲ್ಲ. ಪರಿಣಾಮವಾಗಿ ಇಂದಿಗೂ ಒಂದೆಡೆ ಆಂಗ್ಲ ಮಾಧ್ಯಮ, ಇನ್ನೊಂದೆಡೆ ಮಾತೃಭಾಷಾ ಮಾಧ್ಯಮ ಅನುಷ್ಠಾನದಲ್ಲಿದೆ. ಈ ಎರಡು ಮಾಧ್ಯಮಗಳಲ್ಲಿ

ಈ ನೆಲದ ಮಕ್ಕಳಿಗೆ ಒಂದು ಮಾಧ್ಯಮ ಮಾತ್ರ ವೈಜ್ಞಾನಿಕ ಮತ್ತು ಸಮರ್ಪಕ. ಅದು ಮಾತೃಭಾಷಾ ಮಾಧ್ಯಮ. ಇಲ್ಲಿ ಬಹುತೇಕ ಇರುವ ಕನ್ನಡದ ಮಕ್ಕಳಿಗೆ ಕನ್ನಡ ಮಾಧ್ಯಮವೇ ಆ ಮಾಧ್ಯಮ ಎಂಬುದು ಸ್ಪಷ್ಟ. ಈ ದಿಸೆಯಲ್ಲಿ ಗಾಂಧಿ, ಕುವೆಂಪು ಮೊದಲಾಗಿ ಎಲ್ಲಾ ತಜ್ಞರು ಹೇಳಿದರೂ ಸರ್ಕಾರ ಈವರೆಗೆ ಈ ವಿಚಾರದತ್ತ ಗಂಭೀರ ಚಿಂತನೆ ನಡೆಸಿಲ್ಲ. ಆದ್ದರಿಂದ ಈ ಕೂಗು ಪ್ರತೀ ಸಮ್ಮೇಳನದಲ್ಲಿಯೂ ಮೊಳಗುತ್ತಲೇ ಬಂದಿದೆ. ದಿನೇದಿನೆ ಇಂಗ್ಲಿಷ್ ಮಾಧ್ಯಮ ಶಾಲೆಗಳ ಸಂಖ್ಯೆ ಹೆಚ್ಚುತ್ತಿರುವುದು ಮತ್ತು ಕನ್ನಡ ಮಾಧ್ಯಮ ಶಾಲೆಯ ಸಂಖ್ಯೆ ಕುಗ್ಗುತ್ತಿರುವುದು ಈ ನಿಟ್ಟಿನ ಆಶಾವಾದವನ್ನು ಮಂಕುಗೊಳಿಸುತ್ತಿದೆ. ಹಾಗಾಗಿ ಕರ್ನಾಟಕದಲ್ಲಿ ಮಾತೃಭಾಷಾ ಮಾಧ್ಯಮದ ವಿಚಾರದಲ್ಲಿ ಅತ್ಯಂತ ಗಂಭೀರ ಚಿಂತನೆ ಮತ್ತು ಕನ್ನಡಿಗರು ಈ ನಿಟ್ಟಿನಲ್ಲಿ ಉಗ್ರ ಹೋರಾಟಕ್ಕೆ ಇಳಿಯದ ಹೊರತು ಇದರ ಅನುಷ್ಠಾನ ಸಾಧ್ಯವಿಲ್ಲ ಎನ್ನಿಸುತ್ತದೆ. ಈ ದಿಸೆಯಲ್ಲಿ ಡಾ. ಸಿದ್ಧಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ, ಪುಂಡಲೀಕ ಹಾಲಂಬಿ ಅವರ ನೇತೃತ್ವದಲ್ಲಿ ಶ್ರವಣಬೆಳಗೊಳದಲ್ಲಿ ನಡೆದ 81ನೆಯ ಕನ್ನಡ ಸಾಹಿತ್ಯ ಸಮ್ಮೇಳನವು ವಿಶೇಷವಾಗಿ ಮಾತೃಭಾಷಾ ಮಾಧ್ಯಮದ ಜಾರಿಗಾಗಿ ಸಮ್ಮೇಳನ ಎಂಬ ಆಶಯವನ್ನು ಹೊತ್ತು ನಡೆದಿದ್ದನ್ನು ಇಲ್ಲಿ ಸ್ಮರಿಸಬಹುದು. ಆದರೂ ಈವರೆಗೆ ಚರ್ಚೆ, ನಿರ್ಣಯ, ಹಕ್ಕೊತ್ತಾಯ ನಡೆದಿದೆಯೇ ಹೊರತು ಗೋಕಾಕ ಚಳವಳಿ ಮಾದರಿಯ ಹೋರಾಟ ಇನ್ನೂ ನಡೆದಿಲ್ಲ. ಅದು ನಡೆದು, ಸಂವಿಧಾನಕ್ಕೆ ತಿದ್ದುಪಡಿ ತರದ ಹೊರತು ಇಂಗ್ಲಿಷ್ ಮಾಧ್ಯಮದ ಪ್ರಾಥಮಿಕ ಶಿಕ್ಷಣವನ್ನು ಅಲುಗಾಡಿಸುವುದು ಸಾಧ್ಯವಿಲ್ಲ. ಈ ನಿಟ್ಟಿನ ಚಿಂತನೆ ಪರಿಷತ್ತು ಮತ್ತು ಕನ್ನಡ ಸಂಘಟನೆಗಳಿಂದ ಸಹ ಗಂಭೀರವಾಗಿ ನಡೆದಿಲ್ಲ.

ಹೀಗೆ ಕನ್ನಡ ನಾಡಿನ ಸಾಂಸ್ಕೃತಿಕ ಐಕ್ಯತೆ, ಪಠ್ಯಪುಸ್ತಕ ಮತ್ತು ನಾಡಿನ ಔಪಚಾರಿಕ ಲಿಖಿತ ಮತ್ತು ಮೌಖಿಕ ವ್ಯವಹಾರದಲ್ಲಿ ಪ್ರಮಾಣೀಕೃತ ಕನ್ನಡ ಭಾಷೆಯ ಬಳಕೆ ಮತ್ತು ಶಿಕ್ಷಣದಲ್ಲಿ, ಅದರಲ್ಲೂ ಶಾಲಾ ಶಿಕ್ಷಣದಲ್ಲಿ, ಕನ್ನಡ ಅಥವಾ ಮಾತೃಭಾಷಾ ಮಾಧ್ಯಮದ ಅನುಷ್ಠಾನಕ್ಕಾಗಿ ಹುಟ್ಟಿದ ಕನ್ನಡ ಸಾಹಿತ್ಯ ಪರಿಷತ್ತು ನೂರು ವರ್ಷ ಮೀರಿದ ಇತಿಹಾಸವನ್ನು ಹೊಂದಿ, ಅದರ ಆಶಯದ ಅನುಷ್ಠಾನಕ್ಕಾಗಿ ಅವಿಶ್ರಾಂತ ಮಿಡಿಯುತ್ತ ಬಂದಿದೆ. ಆದರೆ ಶಿಕ್ಷಣದಲ್ಲಿ ಕನ್ನಡದ ಸಾರ್ವತ್ರಿಕ ಅನುಷ್ಠಾನ ಈವರೆಗೆ ಸಾಧ್ಯವಾಗದಿರುವುದು ಅದರ ಸವಾಲನ್ನು ತೀವ್ರವಾಗಿ ಗುರುತಿಸಿಕೊಳ್ಳುವಂತೆ ಮಾಡಿದೆ. ಸಂಸ್ಕೃತದ ಬಗೆಗಿನ ಈ ಹಿಂದಿನ ಗುಲಾಮಗಿರಿ ಕಳೆದ ನೂರಿನ್ನೂರು ವರ್ಷಗಳಲ್ಲಿ ಇಂಗ್ಲಿಷಿನ ಸಂದರ್ಭಕ್ಕೆ ವರ್ಗಾವಣೆಗೊಂಡಿರುವುದರಿಂದ ನಾವು ಮಾನಸಿಕ ದಾಸ್ಯದಿಂದ ನಲವತ್ತೇಳರ ಸ್ವಾತಂತ್ರ್ಯವನ್ನು ಅರ್ಥಪೂರ್ಣವಾಗಿ ಪಡೆಯಬೇಕಿದೆ. ಇಲ್ಲವಾದಲ್ಲಿ ಕನ್ನಡ ನಾಡಿನ ಪ್ರಗತಿ ಸಾಧ್ಯವಿಲ್ಲ. ಕಾರಣ, ಕನ್ನಡ ನಾಡು ದೇಹವಾದರೆ; ಕನ್ನಡ ಭಾಷೆ ಅದರ ಆತ್ಮವಾಗಿದೆ. ಆತ್ಮವಿಲ್ಲದ ದೇಹ ಸ್ಮಶಾನಕ್ಕೆ ಹೋಗುತ್ತದೆ. ಈ ಮಾತನ್ನು

ಇವತ್ತು ಅನಿವಾರ್ಯವಾಗಿ ಆಡಬೇಕಾಗಿದೆ. ಭಾಷೆ ಗತಿಸಿದರೆ ಅದರ ಸಾವಿರಾರು ವರ್ಷಗಳ ಶ್ರೀಮಂತಿಕೆಯ ವಾರಸುದಾರಿಕೆಯನ್ನು ನಾವು ಕಳೆದುಕೊಂಡೆವೆಂದೇ ಅರ್ಥ. ಶ್ರೀಮಂತ ಭೂಮಿಕೆಯಲ್ಲಿ ಬೆಳೆ ಹುಲುಸಾಗಿ ಬರುವುದು ಸಾಧ್ಯ. ಆ ದಿಸೆಯಲ್ಲಿ ಬಾಟ್ಲಿ ಹಾಲು ನಮಗೆ ಬೇಕೋ ಅಥವಾ ತಾಯಿಯ ಎದೆ ಹಾಲನ್ನು ಉಳಿಸಿಕೊಳ್ಳಬೇಕೋ ಎಂದು ಗಂಭೀರವಾಗಿ ಆಲೋಚಿಸಬೇಕಿದೆ. ಈ ನಿಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ, ಅದರ ಸಮ್ಮೇಳನಗಳ, ಅದರ ಅಧ್ಯಕ್ಷರ ಭಾಷಣಗಳ ಅಡಿಪಾಯ ಆರಂಭದಲ್ಲೇ ಗಟ್ಟಿಯಾಗಿ ಬಿದ್ದಿದ್ದು, ಅದರ ಮೇಲೆ ಕನ್ನಡದ ಸೌಧ ಎದ್ದಿದೆ. ಈ ಶ್ರೀಮಂತ ಅಸ್ಮಿತೆಯನ್ನು ಉಳಿಸಿಕೊಂಡು ವರ್ತಮಾನಕ್ಕೆ ತೀವ್ರವಾಗಿ ಮುಖಾಮುಖಿಯಾಗಿ ಸಂಘಟಿತ ಕ್ರಿಯೆ ಮೂಡಿದಾಗ ಮಾತ್ರ ಇಲ್ಲಿ ಕಂಡ ಆಶಯಗಳು ಸಾಕಾರಗೊಂಡು ಸವಾಲುಗಳು ನಿರ್ಮೂಲನಗೊಳ್ಳುವುದಕ್ಕೆ ಸಾಧ್ಯವಾಗುವುದು. ಆ ದಿಸೆಯಲ್ಲಿ ಮಂಕಾಗುತ್ತಿರುವ ಭರವಸೆಯ ಬೆಳಕು ಉಜ್ವಲವಾಗಬೇಕಾಗಿದೆ. ಆ ಉಜ್ವಲತೆ ಮಾತ್ರ ಕನ್ನಡಿಗರ ಬದುಕನ್ನು ಬೆಳಗಬಲ್ಲುದು. ಆ ಬೆಳಗು ನಾಡನ್ನು ಭಾರತದ ಭೂಪಟದಲ್ಲಿ ಸ್ಫುಟವಾಗಿ ಕಾಣುವಂತೆ ಮಾಡಬಲ್ಲುದು.

□

## ತತ್ವಪದ

ಯಾಕೊ ಮನವೆ ನೀನು
ಇಷ್ಟು ಚಿಂತೆಯ ಮಾಡುವುದೇನು

ಮಾಯೆಯ ಸಂಗ ಮಾಡಿ ಮೂರೈದಾರಾಂಟನು ತೊರೆದು
ಜ್ಞಾನಖಡ್ಗವ ಪಿಡಿದು ಬಾಳ್ವ ಭಂಟನಾಗಿರಬಹುದು

ನಿನ್ನೊಳಗೆ ನೀ ನೋಡೊ ನಿಜಲಿಂಗದ ಪೂಜೆ ಮಾಡೊ
ಧ್ಯಾನಾಮೃತ ನೀಡೊ ನೀ ದಿಟ್ಟತನದಲ್ಲಿ ಕುಣಿದಾಡೊ

ಕುಲಗೋತ್ರಂಗಳ ಬಿಟ್ಟು ನೀಚ ಜನರ ಸಂಗವ ಸುಟ್ಟು
ನಾರಾಯಣನ ಗುರಿಯಿಟ್ಟು ನಂಬಿದರೆ ಲೇಸುಂಟು

– ಮರಕುಂದಿ ಬಸವಣ್ಣಪ್ಪ

ಕೃಪೆ: ತತ್ವ ಪದಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

# ಚಿಂತನತ್ರಯ

**ಡಾ. ಎಸ್.ಪಿ. ಉಮಾದೇವಿ**

**ಸದಭಿರುಚಿ**

**ಮ**ನುಷ್ಯನ ಜೀವನದ ಯಶಸ್ಸಿನ ರಹಸ್ಯವೂ, ಆತ ತಾನು ಇರಿಸಿಕೊಂಡ ಉದ್ದೇಶಕ್ಕೆ ಸತತವಾಗಿ ಅಂಟಿಕೊಂಡು ಇರುವುದರಲ್ಲಿಯೇ ಇದೆ. ಯಾವ ಒಂದು ಘನವಾದ ಉದ್ದೇಶವನ್ನೋ ಸದಭಿರುಚಿಯನ್ನೋ ಇರಿಸಿಕೊಳ್ಳದೆ, ಯಾವನೊಬ್ಬ ಮನುಷ್ಯನೂ ಈ ಜಗತ್ತಿನಲ್ಲಿ ದೊಡ್ಡವನಾಗಿ ಬೆಳೆದಿಲ್ಲ. ಪ್ರತಿಯೊಬ್ಬನೂ ಒಂದು ಉದ್ದೇಶವನ್ನು ಇರಿಸಿಕೊಂಡಿರಬೇಕು. ಆ ನಂತರ ಅದರ ಸಾಧನೆಗೋಸುಗ ಆತ ತನ್ನ ಮನಸ್ಸು, ನಿರ್ಧಾರ ಹಾಗೂ ತನ್ನ ಸರ್ವಸ್ವವೆಲ್ಲವನ್ನೂ ತೊಡಗಿಸಿ ಸದಭಿರುಚಿ ಇರಿಸಿಕೊಂಡು ಮುಂದಾಗಬೇಕು.

'ಬದುಕೇ ಹಸಿರು ಪ್ರೀತಿ ಬೆರೆದಾಗ' ಎಂಬ ಕವಿವಾಣಿಯಂತೆ ಜೀವನವನ್ನು ಪ್ರೀತಿಸುವ ಯಾವನೊಬ್ಬನೂ ಅದನ್ನು ಹಾಳುಮಾಡುವುದಕ್ಕೆ ಹೋಗಬಾರದು. ಸಮಯಪ್ರಜ್ಞೆ, ಕಾರ್ಯಪ್ರಜ್ಞೆ, ಸ್ನೇಹಪ್ರಜ್ಞೆ ಇರಿಸಿಕೊಂಡು ನಡೆಯುವವನ ಜೀವನ ವರ್ಧಿಸುತ್ತದೆ.

ಸುಭಾಷಿತದ ಒಂದು ಶ್ಲೋಕದಂತೆ ಮನುಷ್ಯನು ತನ್ನ ವಿದ್ಯಾಭ್ಯಾಸವನ್ನು ನಾಲ್ಕು ಹಂತಗಳಲ್ಲಿ ಕಲಿಯುತ್ತಾನೆ. ಗುರುಹಿರಿಯರಿಂದ, ಸ್ವಾಧ್ಯಾಯದಿಂದ, ಸಹಪಾಠಿಗಳಿಂದ ಮತ್ತು ಅನುಭವಗಳಿಂದ, ಅಭಿರುಚಿಯಿರುವ ವ್ಯಕ್ತಿ ಜೀವನದ ಎಲ್ಲಾ ಕಾಠಿಣ್ಯಗಳನ್ನು ಮೆಟ್ಟಿ ನಿಂತು ಕಲಿಕೆಯಲ್ಲಿ ಸದಾ ತೊಡಗಿಸಿಕೊಂಡಿರುತ್ತಾನೆ.

ವಾಲ್ಮೀಕಿ ಮೊದಲು ಒಬ್ಬ ದರೋಡೆಕೋರನಾಗಿದ್ದ. ಆಗ ಅವನ ಕಣ್ಣಲ್ಲಿ ಕ್ರೋಧ, ಕೈಯಲ್ಲಿ ಕ್ರೌರ್ಯ, ಮನದೊಳಗೆ ಹಿಂಸೆಯ ಭಾವ ಇದ್ದಿತು. ಇಂಥ ವಾಲ್ಮೀಕಿಗೆ ನಾರದಮಹರ್ಷಿಗಳ ಸತ್ಸಂಗ ದೊರೆಯಿತು. ಸದಭಿರುಚಿ ಬೆಳೆಯಿತು. ಅಗಾಧ ಪರಿವರ್ತನೆಯಾಯಿತು.

ಅದೇ ವಾಲ್ಮೀಕಿಯ ಹೃದಯದಿಂದ ಹಿಂಸಾಭಾವ ಶಾಶ್ವತವಾಗಿ ಮರೆಯಾಯಿತು. ಅನಂತ ಮಾಧುರ್ಯಭಾವ ಹೊರಹೊಮ್ಮಿತು! ಕಣ್ಣೊಳಗಿನ ಕ್ರೋಧ ದೂರವಾಗಿ, ಅಪ್ರತಿಮ ಶಾಂತಿರಸ ಚಿಮ್ಮಿತು! ಕೈಯೊಳಗಿನ ಕ್ರೌರ್ಯ ನಿಂತು ಅಮರಕಾವ್ಯ ಪ್ರವಹಿಸಿತು!

ಅವನ ಶಬ್ದಗಳಲ್ಲಿ ನಿಶ್ಶಬ್ದ ಬ್ರಹ್ಮನೇ ನೆಲೆಸಿದ! ಇತಿಹಾಸದಲ್ಲಿ ಇಂಥ ಹೃದಯ ಪರಿವರ್ತನೆಯ ಘಟನೆಗಳು ಅಪರೂಪ. ಅಂಗುಲಿಮಾಲ, ನಾಮದೇವರಂತ ಅಲ್ಲೊಂದು ಇಲ್ಲೊಂದು! ಎಂಥ ಅಪರೂಪದ ಶಕ್ತಿ ಸದಭಿರುಚಿಯಲ್ಲಿ!

ಉತ್ತರಧ್ರುವದಲ್ಲಿ, ಚಳಿಗಾಲದಲ್ಲಿ ಸೂರ್ಯನು ಕಾಣುವುದೇ ಅಪರೂಪ. ಅರಬಸ್ತಾನದಲ್ಲಿ ಯಾವ ಕಾಲದಲ್ಲಿಯೂ ಮಳೆಯಾಗುವುದು ಅಪರೂಪ. ಹೀಗಿದ್ದರೂ ಅಲ್ಲಿಯ ಪಶುಪಕ್ಷಿ, ಜೀವರಾಶಿ ಬದುಕಿದೆ, ಜೀವನ ಸಾಗಿದೆ. ಅಪರೂಪವಾಗಿರುವುದನ್ನೇ ಹಿತಮಿತವಾಗಿ ಬಳಸಿಕೊಂಡು ಬದುಕುವುದೊಂದು ಸದಭಿರುಚಿಯ ಕಲೆ.

ಏಕತಾನತೆಯ ಬದುಕಿಗೆ ಒಗ್ಗಿಸಿಕೊಂಡಿರುವ, ಗಡಿಬಿಡಿಯ ಜಂಜಡದಲ್ಲಿ ಮುಳುಗಿ ಹೋಗಿರುವ ನಮಗೆ, ಮನಸ್ಸಿಗೆ ಚೇತೋಹಾರಿ ಎನಿಸುವ ಏನಾದರೂ ಅಭ್ಯಾಸಗಳು ಇರಬೇಕು. ಓದುವ ಮಕ್ಕಳಿಗೆ ಸಂಗೀತ, ಆಟ, ಈಜು, ನೃತ್ಯ ಮುಂತಾದ ಅಭಿರುಚಿಗಳಿದ್ದರೆ, ಮನರಂಜನೆಯ ಜೊತೆಗೆ ಪ್ರಶಾಂತವಾಗಿ ಓದಿಕೊಳ್ಳುವ ವಾತಾವರಣವೂ ಈ ಮೂಲಕ ಸೃಷ್ಟಿಯಾಗುತ್ತದೆ. ಸಹಜವಾಗಿ ಅಡುಗೆ ಮಾಡುವುದು, ಕಸೂತಿ, ಹೊಲಿಗೆ, ಕೃಷಿ, ಕೈತೋಟ, ಪ್ರಾಣಿಪಕ್ಷಿ ಸಾಕಾಣಿಕೆ, ಸಾಹಿತ್ಯ ರಚನೆ ಮುಂತಾದವೆಲ್ಲವೂ ಆಸಕ್ತಿ–ಅಭಿರುಚಿಗಳೇ, ಇವೆಲ್ಲವೂ ಮನಸ್ಸಿಗೆ ಮುದವನ್ನು ನೀಡುತ್ತವೆ.

ಕವಿರಾಜಮಾರ್ಗಕಾರ ಹೇಳಿರುವಂತೆ, ಕನ್ನಡನಾಡಿನ ಜನರು 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್', ಇದು ಅಂದು ಕನ್ನಡಿಗರಿಗೆ ಇದ್ದ ಸದಭಿರುಚಿಯನ್ನು ತಿಳಿಸುತ್ತದೆ. 'ಕ್ರಿಯೆಯಷ್ಟೆ ನನ್ನದು' ಎಂದು ಬದುಕುವ ಕಾಯಕಪ್ರೇಮಿಗಳಿಗೆ, ಸದಭಿರುಚಿಗಳ ಕೊರತೆ ಎದುರಾಗದು. ಗಾಂಧೀಜಿ, ಅಂಬೇಡ್ಕರ್, ಲಿಂಕನ್, ಆನ್‌ಸನ್‌ಸೂಕಿ ಮುಂತಾದವರಿಗೆ ಎದುರಾದ ಎಲ್ಲಾ ಪರೀಕ್ಷೆಗಳು ಅವರನ್ನು ಗಟ್ಟಿಗರನ್ನಾಗಿ ಮಾಡುತ್ತಲೇ, ಸದಾ ಹಸನ್ಮುಖಿಗಳಾಗಿಯೇ ಉಳಿಯುವಂತೆ ಮಾಡಿದುದೇ ಅವರಲ್ಲಿದ್ದ ವಿವಿಧ ಅಭಿರುಚಿಗಳು.

ವಾಸ್ತವ ಏನೇ ಇದ್ದರೂ ಮನುಷ್ಯನ ಇದಿರಿನಲ್ಲಿ ಒಂದು ಆದರ್ಶ ಸದಭಿರುಚಿ ಇರಬೇಕು. ಮನುಷ್ಯನು ತನ್ನ ಜೀವನದ ಪ್ರತಿಯೊಂದು ಕ್ಷಣವನ್ನು ಬದುಕಿಕೊಂಡು ಹೋದರೇನೇ ಅವನು ಅದರಲ್ಲಿ ಸ್ವಾರಸ್ಯವನ್ನು ಕಾಣುತ್ತಾನೆ. ತಾನು ಜಯಗಳಿಸಬೇಕೆಂದು ಹೊರಟ ಹಾದಿಯಲ್ಲಿ ಸದಭಿರುಚಿಗಳ, ಆಸಕ್ತಿಗಳ ಕೈಹಿಡಿದು ಮುಂದೆ ಸಾಗಿದರೆ, ಸಿದ್ಧಿ ಪ್ರಸಿದ್ಧಿಗಳು ಅವಶ್ಯ ಲಭ್ಯವಾಗುತ್ತವೆ.

ಸದಭಿರುಚಿಗಳನ್ನು ಹೊಂದಿರುವ ಮನುಷ್ಯನು ತನ್ನ ಸಂತೋಷದ ಕ್ಷಿತಿಜಗಳನ್ನು ವಿಸ್ತರಿಸುವ ರೋಮಾಂಚಕಾರಿ ಅನುಭವಗಳನ್ನು ಪಡೆಯುತ್ತಾನೆ. ತನ್ನ ಜೀವನವನ್ನು, ಜಗತ್ತನ್ನು, ಮನುಜಕುಲವನ್ನು, ಪ್ರಕೃತಿಯನ್ನು, ಪಶುಪಕ್ಷಿಗಳನ್ನು ಪ್ರೀತಿಸುತ್ತಾನೆ. ಹೊಸ

ಜೀವನದ ಬಾಗಿಲನ್ನು ತೆರೆದು ಆತ ಮುಂದೆ ಸಾಗುತ್ತಾನೆ. ಸದಭಿರುಚಿಗಳನ್ನಿರಿಸಿಕೊಂಡು ನಮ್ಮ ಜೀವನಕ್ಕೆ ಮೆರಗು ತಂದುಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ ಅಲ್ಲವೆ?

* * *

**ಸಂಕಟ – ಸಮಾಧಾನ**

ಜೀವನವೆನ್ನುವುದು ಬೇಕು–ಬೇಡಗಳನ್ನು ಒಳಗೊಂಡದ್ದು ಸಂಸ್ಕೃತಿ, ಧರ್ಮ, ಕುಟುಂಬ, ವ್ಯಾಸಂಗ ಹೀಗೆ ನಿರ್ಮಿತವಾಗಿರುವ ಪರಿಸ್ಥಿತಿಯಲ್ಲಿ ಬೆಳೆಯುವಾಗ ಬೇಕು–ಬೇಡಗಳು ತಾವಾಗಿಯೇ ಬಂದು ನಮ್ಮನ್ನು ಸೇರಿಕೊಂಡು ಬಿಡುತ್ತವೆ. ಸುತ್ತಮುತ್ತಲ ಪರಿಸ್ಥಿತಿ ಎಂಥವರಿಗಾದರೂ ದೊಡ್ಡ ರೀತಿಯಲ್ಲಿ ಪ್ರಭಾವವನ್ನುಂಟು ಮಾಡುತ್ತದೆ. ಹಾಗೆಯೇ ಪ್ರತಿಯೊಂದು ಜೀವಿಗೂ ಇಂತಹ ಪ್ರಭಾವಗಳಿಂದಾಗಿ ಜೀವನದಲ್ಲಿ ಸಮತೋಲನವನ್ನೇ ಕಳೆದುಕೊಳ್ಳಬೇಕಾದಂತಹ ಸಂದರ್ಭ ಬಂದೊದಗುತ್ತದೆ. ಇಂತಹ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ ಸಮಾಧಾನವೆಂಬುದು ಅತ್ಯಾವಶ್ಯಕ.

ಯಾವುದೇ ಚಿಂತೆ ಸಂಕಟಗಳಿಲ್ಲದ ಮನುಷ್ಯ ಯಾರಿದ್ದಾರೆ? ಒಂದಲ್ಲ ಒಂದು ಚಿಂತೆ ಪ್ರತಿಯೊಬ್ಬನನ್ನು ಕಾಡುತ್ತಲೇ ಇರುತ್ತದೆ. ಅನಿರೀಕ್ಷಿತ ಘಟನೆಗಳು, ಸಾವು–ನೋವುಗಳು, ನಷ್ಟ–ಸಂಕಟಗಳು ಇವು ಎಲ್ಲರ ಚಿಂತೆಗೆ ಕಾರಣವಾಗಿವೆ. ಮಗಳ ಮದುವೆ, ಮಗನ ವಿದ್ಯಾಭ್ಯಾಸ, ಉದ್ಯೋಗದಲ್ಲಿ ಬಡ್ತಿ, ಸಂಪಾದನೆಯಲ್ಲಿ ಹೆಚ್ಚಳ, ತನ್ನದೇ ಆದ ಒಂದು ಮನೆ ಹೊಂದುವ ಬಯಕೆ, ಯಾವುದಕ್ಕೂ ಎಟುಕದ ಹಣಕಾಸಿನ ದುಃಸ್ಥಿತಿ ಎಡೆಬಿಡದ ಅನಾರೋಗ್ಯ ಹೀಗೆ ಸಂಕಟಪಡಲು ಕಾರಣವಾಗುವ ಸಂದರ್ಭಗಳು ಹಲವಾರು!

ರಸ್ತೆ ನಿರ್ಮಾಣದ ಉದ್ದೇಶವೆಂದರೆ, ಪಥಿಕ ದಾರಿ ತಪ್ಪದೆ ತನ್ನ ಗುರಿಯ ಸ್ಥಳವನ್ನು ತಲುಪಲು ನೆರವಾಗಲೆಂದು. ನಮ್ಮ ಬದುಕೂ ಸಹ ಒಂದು ಪ್ರಯಾಣದಂತೆ. ಕ್ಷಣಕ್ಷಣವೂ ನಾವು ಕ್ರಮಿಸಿ ಅಂತ್ಯದತ್ತ ಹೆಜ್ಜೆ ಇಡುತ್ತಲೆ ಇರುತ್ತೇವೆ. ಈ ಪ್ರಯಾಣಕ್ಕೆ ಉತ್ತಮ ರಸ್ತೆಯ ಅವಶ್ಯಕತೆಯಿದೆ. ಹಿಂದಿನ ಸಿದ್ಧಪುರುಷರು ಮುನಿಗಳು ಇಂತಹ ರಸ್ತೆಗಳನ್ನೇ ಮಾನವನ ಉನ್ನತಿಗಾಗಿ ಆತ್ಮೋನ್ನತಿಗಾಗಿ ನಿರ್ಮಿಸಿ ಹೋಗಿದ್ದಾರೆ. ಆದರೆ ನಾವೀಗ ಬುದ್ಧಿಯನ್ನು ಸಡಿಲಬಿಟ್ಟು ಅರಿಷಡ್ವರ್ಗಗಳ ಮೊರೆಹೊಕ್ಕಿರುವುದೇ ನಮ್ಮ ಸಂಕಟಗಳಿಗೆ ಕಾರಣವಾಗಿದೆ. ಇದನ್ನು ದಾಸರು 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಬೇಡಿ ಹುಚ್ಚಪ್ಪಗಳಿರಾ' ಎಂದಿದ್ದಾರೆ.

ಜೀವನದಲ್ಲಿ ಎದುರಾಗುವ ಅನೇಕ ಸಂಕಟಗಳಲ್ಲಿ ಕೆಲವು ನಮ್ಮ ಕೈ ಮೀರಿದ ಸಂಗತಿಗಳೂ ಇವೆ. ಪ್ರೀತಿಪಾತ್ರರ ಅಗಲುವಿಕೆ, ಅಪಘಾತ–ದುರಂತಗಳು ಇವೆಲ್ಲಾ ನಮ್ಮ ಹಿಡಿತದಲ್ಲಿಲ್ಲದ ಘಟನಾವಳಿಗಳು. ಇವುಗಳು ಸಂಭವಿಸಿದಾಗ ಸಹಜವಾಗಿ

ದುಃಖ, ಚಿಂತೆಗಳು ಬಂದರೂ ಲೋಕಾನುಭವದಿಂದ ಸ್ವವಿವೇಚನೆಯಿಂದ ಮನಸ್ಸಿಗೆ ಸಮಾಧಾನ ತಂದುಕೊಳ್ಳುವುದು ಅನಿವಾರ್ಯವಾಗಿದೆ. ನಮಗಿಂತ ಹೆಚ್ಚು ದುಃಖಿಗಳಾದವರನ್ನು, ದುರಂತಕ್ಕೊಳಗಾದವರನ್ನು ಕಂಡು ನಾವು ನಮ್ಮನ್ನು ಸಾಂತ್ವನಗೊಳಿಸಿ ಕೊಳ್ಳಬೇಕಾಗುತ್ತದೆ. ಅರಮನೆಯಲ್ಲಿದ್ದರೂ ಕೂಡ ಕೆಲವರ ಮನಸ್ಸಿಗೆ ಶಾಂತಿ ಇಲ್ಲ.

ಕೆಲವು ಚಿಂತೆಗಳು ಸಂಕಲ್ಪಿತವಾದವುಗಳು. ಅವು ನಿಜವಾಗಿಯೂ ಅಂತಹ ದೊಡ್ಡ ವಿಚಾರಗಳೇ ಅಲ್ಲ. ಆದರೂ ಅವು ವ್ಯಕ್ತಿಯನ್ನು ಕಾಡುತ್ತಲೇ ಇರುತ್ತವೆ. ತಾನು ಇತರರಿಗಿಂತ ಕೀಳು ಎಂಬ ಕೀಳರಿಮೆ, ಜಗತ್ತಿನಲ್ಲಿ ಎಲ್ಲ ದುಃಖಗಳು ತನ್ನ ಪಾಲಿಗೆ ಮಾತ್ರ ಎಂಬ ಭಾವನೆ, ಎಲ್ಲರೂ ತನ್ನನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ ಎಂಬ ಕಲ್ಪನೆ, ನಾಳೆ ಏನಾದೀತೋ ಎಂಬ ಭಯ, ಎಲ್ಲವೂ ತಾವು ಹೇಳಿದಂತೆಯೇ ಆಗಬೇಕು ಎಂಬ ಆಗ್ರಹ, ಇವೆಲ್ಲವೂ ಬಹುಮಟ್ಟಿಗೆ ಸ್ವಭಾವ ವೈಪರೀತ್ಯದಿಂದ ಉಂಟಾಗುವ ಸಂಕಟಗಳು.

ಜೀವನವನ್ನು ನೋಡುವ ನಮ್ಮ ದೃಷ್ಟಿಯನ್ನು ಸ್ವಲ್ಪ ಬದಲಾಯಿಸಿಕೊಂಡಲ್ಲಿ, ಇಂತಹ ಚಿಂತೆಗಳ ಒತ್ತಡವನ್ನು ಮಾನಸಿಕ ಉದ್ವೇಗದ ತೀವ್ರತೆಯನ್ನು ಕಡಿಮೆ ಮಾಡಿಕೊಂಡರೆ ಮಾತ್ರ ಸಂಕಟದಿಂದ ಸಮಾಧಾನದ ಕಡೆ ಹೆಜ್ಜೆ ಹಾಕಲು ಸಾಧ್ಯ.

ಬದುಕಿನಲ್ಲಿ ಸಂಭವಿಸಿದ ಒಳ್ಳೆಯ ಘಟನೆಗಳನ್ನು ಸಕಾರಾತ್ಮಕ ರೀತಿಯಲ್ಲಿ ಚಿಂತಿಸುವುದು, ಇತರರಲ್ಲಿರುವ ಸಾತ್ವಿಕ ಗುಣಗಳನ್ನು ಗುರುತಿಸಿ ಪ್ರಶಂಸಿಸುವುದು, ಟೀಕೆ–ಟಿಪ್ಪಣಿಗಳಿಗೆ ಕಡಿವಾಣ ಹಾಕುವುದು. ಹಾಸಿಗೆ ಇದ್ದಷ್ಟು ಕಾಲುಚಾಚಿ ಸರಳ ಜೀವನದಲ್ಲಿ ಸಂತೃಪ್ತಿ ಕಾಣುವುದು, ತನ್ನ ಬೇಕು–ಬೇಡಗಳ ಪಟ್ಟಿಯನ್ನು ಆದಷ್ಟು ಕಡಿಮೆ ಮಾಡುವುದು, ತನಗಿಂತಲೂ ಹೆಚ್ಚು ಕಷ್ಟದಲ್ಲಿರುವವರನ್ನು ನೆನಪಿಗೆ ತಂದುಕೊಳ್ಳುವುದು, ಅಧ್ಯಯನ, ಸಜ್ಜನ ಸಹವಾಸ, ಧ್ಯಾನದ ಪ್ರಭಾವದ ಮೂಲಕ ವಿವೇಚನೆಯನ್ನು ವೃದ್ಧಿಸಿಕೊಳ್ಳುವುದು, ಇವೆಲ್ಲವೂ ಸಂಕಟವನ್ನು ಶಮನಗೊಳಿಸುತ್ತವೆ. ಅಜಾಗ್ರತೆ–ಅಜ್ಞಾನ–ಅವಿವೇಕಗಳನ್ನು ದೂರಮಾಡಿ ನಮ್ಮ ಜೀವನ ವಿಧಾನವನ್ನು ನೀತಿ ಪ್ರೀತಿಗಳಿಂದ ಕೂಡಿದ ಸರ್ವಸಮ್ಮತವಾದ ಮಾನವ ಧರ್ಮದಿಂದ ನಡೆಸಿದರೆ, ಬದುಕಿಗೆ ಒಂದು ಭರವಸೆ ಬರುತ್ತದೆ. "ಇಲ್ಲಿ ಸಲ್ಲದವರು ಅಲ್ಲಿ ಸಲ್ಲುವರೇ?" ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದರೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು ಎಂದಿದ್ದಾರೆ ಶರಣರು. ಸಾವು–ಬಾಳು ಯುದ್ಧದಲ್ಲಿ ತೀರ್ಮಾನವಾಗುವುದು ಜೂಜಿನಂತೆ ನಮ್ಮ ಕೈಯಲ್ಲಿಲ್ಲ. ಸತ್ಯ ಸಾಧನೆಗೆ ಹೋರಾಡಿದವರ ಕೀರ್ತಿ ಯುಗಾಂತರದಲ್ಲೂ ಚಿರಸ್ಥಾಯಿಯಾಗಿರುತ್ತದೆ ಅಲ್ಲವೇ?

* * *

**ಬದುಕಿನ ಸಾರ್ಥಕತೆ (ಅರಿವಿನ ಮೆಟ್ಟಿಲು)**

ಮನುಷ್ಯನಿಗೆ ಹಕ್ಕಿಯಂತೆ ಆಗಸದಲ್ಲಿ ಹಾರುವ ಆಸೆ, ಮೀನಿನಂತೆ ಸಾಗರದಲ್ಲಿ ಈಜುವ ಆಸೆ. ತನ್ನ ಪರಿಮಿತಿಯನ್ನು ಮೀರಿ ಅನಂತದೆಡೆಗೆ ಸಾಗುವ ಆಸೆ. ಆದರೆ ಇವೆಲ್ಲಕ್ಕು ಅಡ್ಡಿಯಾಗಿರುವುದು ಯಾವುದು? ಅದೇ ನಮ್ಮ ಉಪಾಧಿಗಳು. ಮೊದಲನೆಯಾಗಿ ನಮಗೆ ಪ್ರಿಯವಾದ ಈ ದೇಹವೇ ಒಂದು ದೊಡ್ಡ ಉಪಾಧಿ. ಅನಂತರ ಇನ್ನೂ ಹೆಚ್ಚಿನದಾಗಿ ನಮ್ಮ ಮನಸ್ಸು. ಈ ದೇಹವೆಂಬ ಎಂಟು ಗೇಣಿನ ಪಂಜರವು ನಮ್ಮನ್ನು ದೇಶ–ಕಾಲಗಳ ಪರಿಮಿತಿಯಿಂದ ಕಟ್ಟಿಹಾಕಿದೆ. ಇದರ ಬಾಧೆಗಳಾದ ಆಹಾರ, ನಿದ್ರೆ ಮುಂತಾದವುಗಳನ್ನು ಪೂರೈಸಿಕೊಳ್ಳಲು ನಾವು ಪಡುವ ಪಾಡು ಅಷ್ಟಿಷ್ಟಲ್ಲ. ಮೇಲಿಂದ ಮೇಲೆ ರೋಗಗಳ ಹಾವಳಿ ಬೇರೆ. ಇಂತಹ ಈ ದೇಹದಿಂದ ನಾವು ನಿತ್ಯಸುಖವನ್ನು ಬಯಸಿದರೆ ಅದು ಮಣ್ಣಿನ ದೋಣಿಯಲ್ಲಿ ಕುಳಿತು ಸಮುದ್ರಯಾನ ಮಾಡಿದಂತೆ.

ಜೀವನದಲ್ಲಿ ಯಶಸ್ಸು ಗಳಿಸುವುದು ಎಂದರೆ ಏನು? ಯಾವ ವೃತ್ತಿ ಅನುಸರಿಸಿದರೆ ದೊರೆತೀತು ಹೆಚ್ಚು ಸುಖ ಹೆಚ್ಚು ಲಾಭ? ಯಾವ ಬಗೆಯ ಶಿಕ್ಷಣ ಸಮರ್ಪಕ? ಇವು ಎಲ್ಲರ ಪ್ರಶ್ನೆಗಳು. 'ನಿನ್ನನ್ನು ನೀನು ತಿಳಿದಿಕೋ' ಎಂಬ ಒಂದು ಮಾತಿದೆ. ಈ ಮಾತು ಎಲ್ಲ ವೇದಾಂತ ಧರ್ಮ ಎಲ್ಲ ತತ್ವಜ್ಞಾನಗಳ ಸಾರಾಂಶವೂ ಹೌದು.

ಪ್ರಶಾಂತ ಬದುಕಿನ, ಪೂರ್ಣಾನಂದದ ಸಾಧನಗಳು ಹಲವಾರು. ಅದರಲ್ಲಿ ಧರ್ಮ ರಸಾಯನವೂ ಒಂದು. ಅದರಿಂದ ಅನ್ಯಾಸಕ್ತಿಯ ಮರೆವು ಸತ್ಯದ ಆವಿಷ್ಕಾರ, ಸುಜ್ಞಾನೋದಯ, ಸದಾನಂದ ಎಲ್ಲವೂ ಸಾಧ್ಯ. ಅದಕ್ಕೆ ಒಂದು ಅಡ್ಡಿ ಆತಂಕ ನಮ್ಮ ಹೃದಯದ ಕಹಿ ಭಾವನೆ. ಅದನ್ನು ಕಳೆದುಕೊಳ್ಳುವುದಕ್ಕೆ ಧರ್ಮವು ಒಂದು ಸುಂದರ ಸಾಧನ. ಅದಕ್ಕಾಗಿ ನಮ್ಮ ಮನದ ಪರೀಕ್ಷೆ ಆತ್ಮಾವಲೋಕನ ನಡೆಯಬೇಕು.

ಭಾರತದ ಪ್ರಧಾನಿಯಾಗಿದ್ದ ಲಾಲ್‌ಬಹದ್ದೂರ್‌ಶಾಸ್ತ್ರಿಯವರು ಮೂರ್ತಿ ಚಿಕ್ಕದಾದರು ಕೀರ್ತಿ ದೊಡ್ಡದು ಎಂಬಂತಿದ್ದರು. ತಮ್ಮಿಂದ ಸಹಾಯ ಬಯಸಿ ಬಂದ ವ್ಯಕ್ತಿಗೆ ತಮ್ಮ ಬಳಿ ಏನೂ ಇರದಾಗ ಅವರೊಮ್ಮೆ ಪತ್ನಿಯ ಬಳಿ ಹೋಗಿ ವಿಚಾರಿಸಿದರು. ಅವರ ಬಳಿ ಏನಾದರೂ ಹಣ ಉಂಟೇ ಎಂದು. ಪತ್ನಿಯು ಶಾಸ್ತ್ರಿಗಳಂತೆಯೇ ಕರುಣೆ ತುಂಬಿದ ವ್ಯಕ್ತಿ. ಅಡುಗೆ ಮನೆಗೆ ಹೋಗಿ ತಾವು ಸಂಗ್ರಹಿಸಿ ಇಟ್ಟಿದ್ದ ಹಣ ತಂದು ಒಪ್ಪಿಸಿದರು. ಅದೇನು ಅಲ್ಪವಲ್ಲ–ತಕ್ಕಮಟ್ಟಿನ ಇಡುಗಂಟು. ಶಾಸ್ತ್ರಿಗಳು ಆ ಹಣವನ್ನು ಆ ಆಗಂತುಕನ ಕೈಗೆ ಕೊಟ್ಟರು. ಅವನು ಸಂತೋಷದಿಂದ ಕಣ್ಣರಳಿಸಿ ನೋಡಿ ಧನ್ಯತೆ ಸಮರ್ಪಿಸಿ ಕೈ ಮುಗಿದು ತೆರಳಿದ.

ಹೆಂಡತಿ ಅಷ್ಟು ಹಣ ಕೊಟ್ಟಿದ್ದನ್ನು ನೋಡಿ ಶಾಸ್ತ್ರಿಯವರಿಗೆ ಆಶ್ಚರ್ಯವಾಗಿತ್ತು.

ತಮಗೆ ಬರುತ್ತಿದ್ದ ಸಂಬಳದಲ್ಲಿ ಸಂಸಾರ ಸಾಗಿಸುವುದೇ ಕಷ್ಟ ಎನ್ನುವಾಗ ಇಷ್ಟು ಹಣ ದೊರಕಿಸಿ ಕೊಡುವುದು ಹೇಗೆ ಸಾಧ್ಯವಾಯಿತು?

ಪತ್ನಿ ಹೇಳಿದರು : "ನೀವು ಕೊಟ್ಟ ಹಣದಲ್ಲಿ ಸಂಸಾರಕ್ಕೆ ಎಷ್ಟು ಬೇಕೋ ಅಷ್ಟನ್ನು ಖರ್ಚು ಮಾಡಿ ಉಳಿಸಿದ್ದ ಹಣ ಇದು" ಎಂದರು.

ಶಾಸ್ತ್ರಿಗಳು ಕಾಗದ ಲೇಖನಿ ತೆಗೆದುಕೊಂಡು ಲೆಕ್ಕ ಹಾಕಿದರು. ಜೀವನ ನಿರ್ವಹಿಸಲು ಎಷ್ಟು ಅಗತ್ಯವೋ ಅದಕ್ಕಿಂತ ಹೆಚ್ಚು ಪಡೆಯಬಾರದೆಂಬುದು ಅವರ ಆದರ್ಶ. ಕೂಡಲೇ ಸರ್ಕಾರಕ್ಕೆ ಪತ್ರ ಬರೆದರು 'ನನಗೆ ಸಂಬಳದಲ್ಲಿ ಅಗತ್ಯಕ್ಕಿಂತ ನಲವತ್ತು ರೂಪಾಯಿ ಹೆಚ್ಚಾಗಿ ಬರುತ್ತಿದೆ. ದಯವಿಟ್ಟು ಇನ್ನು ಮೇಲೆ ನನ್ನ ಸಂಬಳದಲ್ಲಿ ಇಷ್ಟನ್ನು ಕಡಿತಮಾಡಿ ಎಂದು. ಹಣವನ್ನಷ್ಟೇ ಅಲ್ಲ ಅವರು ಕೀರ್ತಿಯನ್ನು ಬಯಸುತ್ತಿರಲಿಲ್ಲ. ಯಾರಿಗೂ ಕಾಣಿಸದ, ಕಟ್ಟಡದ ಭಾರವನ್ನೆಲ್ಲ ಹೊತ್ತು ನಿಲ್ಲುವುದರಲ್ಲೆ ಧನ್ಯತೆ ತಿಳಿಯುವ ಅಡಿಗಲ್ಲಿನಂತೆ ಬದುಕಬೇಕು ಎಂಬುದಾಗಿತ್ತು ಅವರ ಸಂಕಲ್ಪ.

ನಮ್ಮಲ್ಲಿ ಎಷ್ಟೋ ಜನ ತಮ್ಮ ತಮ್ಮ ದೋಷಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಇತರರ ದೋಷಗಳನ್ನೆ ಎತ್ತಿ ಆಡುತ್ತೇವೆ. ನಿಜವಾಗಿ ತನ್ನನ್ನು ತಾನು ಅರಿತವ ತನ್ನಲ್ಲೇ ದೋಷ ಇರುವಾಗ ಇತರರ ಬಗ್ಗೆ ಆಡಲು ಮನಸ್ಸು ಮಾಡಲಾರ. ಇತರರಿಗೆ ಮಾಡುವ ಬೋಧನೆಗೆ ಶಕ್ತಿ ಬರುವುದೇ ಆ ಬೋಧನೆಯನ್ನು ನಾವು ಪಾಲಿಸಿದಾಗಲೇ ಅಥವಾ ಅದನ್ನು ನಾವು ಅರಿತಾಗಲೇ.

ಓರ್ವ ಹುಡುಗ ಮಹಾರಾಜನೋರ್ವನ ಖಜಾನೆಯ ಮೂಲಕ ಹಾದು ಬರುತ್ತಾನೆ. ಖಜಾನೆಯಲ್ಲಿ ಬಂಗಾರದ ನಾಣ್ಯಗಳು, ಆಭರಣಗಳು, ಮುತ್ತುರತ್ನ, ವಜ್ರ ವೈಢೂರ್ಯ ಎಲ್ಲೆಂದರಲ್ಲಿ ಇದ್ದರೂ ಆ ಹುಡುಗ ಅವುಗಳಲ್ಲಿ ಏನನ್ನೂ ಮುಟ್ಟದೆ ಮುನ್ನಡೆಯುತ್ತಾನೆ. ಅಲ್ಲಿದ್ದವರು ಅಲ್ಲಿ ಯಾರೂ ಇರದೇ ಇದ್ದರೂ ನೀನು ಅವುಗಳಲ್ಲಿ ಏನನ್ನೂ ಮುಟ್ಟಲಿಲ್ಲ. ಯಾಕೆ? ಎಂದು ಆ ಹುಡುಗನನ್ನು ಕೇಳಿದಾಗ, ನನ್ನನ್ನು ಗಮನಿಸಲು ಅಲ್ಲಿ ಹೊರಗಿನಿಂದ ಯಾರೂ ಇರಲಿಲ್ಲ; ನಿಜ. ಆದರೆ ಒಳಗಿರುವ ತನ್ನ ಅಂತರಾತ್ಮವೇ ನನ್ನನ್ನು ಗಮನಿಸುತ್ತಿಲ್ಲವೇ ಎಂದನಂತೆ. ಹೌದು ನಮ್ಮೊಳಗಿರುವ ಅಂತರಾತ್ಮವೇ ನಮ್ಮನ್ನು ಗಮನಿಸುತ್ತಿದೆ ಎಂಬ ಅರಿವು ಎಲ್ಲರಲ್ಲು ಇದ್ದರೆ ಅದೆಷ್ಟೋ ಕಳ್ಳತನ, ಕೊಲೆ, ಸುಲಿಗೆ, ಮೋಸ ವಂಚನೆಗಳಿಗೆ ಅವಕಾಶವೇ ಆಗುತ್ತಿರಲಿಲ್ಲ.

ನಮ್ಮ ಇತಿಮಿತಿ ಅರಿತಾಗ ಅದಕ್ಕೆ ಅನುಗುಣವಾಗಿ ನಾವು ವರ್ತಿಸುವುದರಿಂದಷ್ಟೆ ಆ ಸಂತೃಪ್ತಿ, ಅಸಮಾಧಾನ, ನಿರಾಶೆ ಹತಾಶೆಗಳು ನಮ್ಮ ಬಳಿ ಸುಳಿಯವು. ದೋಷ–ದೌರ್ಬಲ್ಯಗಳನ್ನು ನೀಗಿಸಿಕೊಳ್ಳಬಹುದೆಂಬ ಅರಿವಿದ್ದುದರಿಂದಲೇ ಶಹನಾಯ್‌ವಾದಕ ಬಿಸ್ಮಿಲ್ಲಾಖಾನ್ ನಿತ್ಯವೂ ಸತತವಾಗಿ ನಾಲ್ಕು ಗಂಟೆ ಅಭ್ಯಾಸ ಮಾಡುತ್ತಿದ್ದೆನೆಂದು

ಹೇಳುತ್ತಿದ್ದರು. ಚಿತ್ರಗಾರ ತಾನು ಕ್ಯಾನ್ವಾಸ್‌ನಲ್ಲಿ ಬಿಡಿಸಿದ ಚಿತ್ರವನ್ನು ಬೇರೆಬೇರೆ ದೂರಗಳಿಂದ, ನೇರಗಳಿಂದ ನೋಡಿದಂತೆ ನಮ್ಮನ್ನು ನಾವು ಬೇರೆ ಬೇರೆ ನೆಲೆಯಲ್ಲಿ ನೋಡುವ ಅಭ್ಯಾಸ ಮಾಡಬೇಕು. ನಮಗೆ ನೋವು ಆಗುವಂತೆ ಇತರರಿಗೂ ನೋವು ಆಗುತ್ತದೆ ಎಂದು 'ತನ್ನಂತೆ ಪರರ ಬಗೆದೊಡೆ', ನಮ್ಮ ಅದೆಷ್ಟೋ ಸಮಸ್ಯೆಗಳು ಪರಿಹರಿಸಲ್ಪಡುತ್ತವೆ. ನಮ್ಮನ್ನೆ ಅರಿತು ನಮ್ಮ ದೋಷ ದೌರ್ಬಲ್ಯಗಳನ್ನು ತಿದ್ದಿಕೊಂಡರೆ ನಮಗೆ ಗೆಲುವು. ನಲಿವು ಖಂಡಿತ. ಆದ್ದರಿಂದ ನಮ್ಮ ಅರಿವೇ ಗುರುವಾಗಿ ನಮ್ಮನ್ನು ಉದ್ಧಾರದ ಹೆದ್ದಾರಿಯಲ್ಲಿ ಮುನ್ನಡೆಸಬಲ್ಲದು. ಆದ್ದರಿಂದ ನಮ್ಮ ಬಗ್ಗೆಯೇ ನಾವು ಮೊದಲು ಅರಿತುಕೊಳ್ಳೋಣ. ನಮ್ಮ ಸಿಟ್ಟು, ಅಹಂಕಾರ, ಅಸೂಯೆ, ಸ್ವಾರ್ಥ ಒಂದು ಕುಟುಂಬದ, ಒಂದು ಸಮಾಜದ ಏಳಿಗೆಗೆ, ಸ್ವಾಸ್ಥ್ಯಕ್ಕೆ ಮಾರಕವಾಗಿದೆ ಎಂಬ ಅರಿವು ನಮ್ಮಲ್ಲಿ ಮೂಡಿದರೆ ಅದೇ ನಮ್ಮ ಸ್ವಭಾವದ ಪರಿವರ್ತನೆಗೂ, ವ್ಯಕ್ತಿತ್ವವಿಕಸನಕ್ಕೂ ಸಮಾಜಸುಧಾರಣೆಗೂ ಕಾರಣವಾಗಬಹುದು.

□

## ತತ್ವಪದ

ನಾಶವಾದರು ಬೇಗ ನೆಂಟರು
ಈ ದೇಹದ ಮನೆಯಲ್ಲಿ ಇದ್ದ ದುರ್ಜನರು

ಬಹಳ ಕೋಪಗಾರ ಗಂಡನು ಬಿಟ್ಟನು
ಮೂದೇವಿ ಮೈದನು ಮೃತನಾದನು
ಮಾಯೆಯು ಹೆಚ್ಚಿದ ಮಾವನು ಹೋದನು
ಅತ್ತೆ ಘಾತಕಿಮುಂಡೆ ಹತಳಾದಳು

ಆರಂಭಗಾರನವನೊಬ್ಬನಿದ್ದನು
ಭಂಗಿಯೆಂಬೋ ಭಾವನೊಬ್ಬನು
ಏನು ಹೇಳಲಿ ಇವರೆಲ್ಲ ಕಾಡಿಸಿಯನ್ನನು
ಭ್ರಷ್ಟರಾಗಿ ಹೋದರೂ ಇಷ್ಟೂ ಮಂದಿ

ಅಂಜಲೇಕೆ ಇನ್ನು ಅಮರನಾರೇಯಣ
ದಾಸನ ದಾಸರಿಗೆ ದಾಸನಾಗಿ
ಸತ್ತು ಹುಟ್ಟುವಂಥ ಸಂಕಟವೇನಿಲ್ಲ
ಆನಂದವಾಯಿತೊ ಆತ್ಮದಲ್ಲಿ

**– ಮರಕುಂದಿ ಬಸವಣ್ಣಪ್ಪ**

**ಕೃಪೆ: ತತ್ವ ಪದಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

# 'ಅಯಂ ಮೇ ಹಸ್ತೋ ಭಗವಾನ್' ಎಂಬ ಋಗ್ವೇದ ಮಂತ್ರ ಮತ್ತು ಇಷ್ಟಲಿಂಗ

ಡಾ. ಸಿ. ಶಿವಕುಮಾರಸ್ವಾಮಿ

**ಸ**ಪ್ತಶೈವಗಳಲ್ಲೊಂದಾದ ವೀರಶೈವದ ಮುಖ್ಯ ಕುರುಹು ಎಂದರೆ ಅಂಗದ ಮೇಲೆ ಶಿವನ ಪ್ರತೀಕವಾದ ಇಷ್ಟಲಿಂಗಧಾರಣೆಯಾಗಿರುತ್ತದೆ. ಲಿಂಗಧಾರಣೆಯ ಪ್ರಾಚೀನತೆಯನ್ನು ಕುರಿತು ಹೇಳುವ ಸಂದರ್ಭದಲ್ಲಿ ಶ್ರೀ ಶಿವಯೋಗಿ ಶಿವಾಚಾರ್ಯರು ಹೀಗೆ ಹೇಳಿದ್ದಾರೆ :

> ವೇದಶಾಸ್ತ್ರಪುರಾಣೇಷು ಕಾಮಿಕಾದ್ಯಾಗಮೇಷು ಚ ।
> ಲಿಂಗಧಾರಣಮಾಖ್ಯಾತಂ ವೀರಶೈವಸ್ಯ ನಿಶ್ಚಯಾತ್ ॥[1]

"ವೇದ, ಶಾಸ್ತ್ರ, ಪುರಾಣ, ಕಾಮಿಕಾದಿ ವಾತುಲಾಂತಗಳಾದ ಶಿವಾಗಮಗಳಲ್ಲಿ ವೀರಶೈವನಿಗೆ ಲಿಂಗಧಾರಣೆಯು ಹೇಳಲ್ಪಟ್ಟಿದೆ".

ವೀರಶೈವ–ಲಿಂಗಾಯಿತದ ಆಚಾರ–ವಿಚಾರಗಳನ್ನು ಪ್ರತಿಪಾದಿಸುವ ಸಂಸ್ಕೃತ ಗ್ರಂಥಗಳು, ಕನ್ನಡ ಭಾಷೆಯಲ್ಲಿ ರಚನೆಯಾಗಿರುವ ಶಿವಶರಣರ ವಚನಗಳಲ್ಲಿ ವೇದ, ಉಪನಿಷತ್, ಆಗಮ, ಪುರಾಣ ಗ್ರಂಥಗಳ ವಾಕ್ಯಗಳು ತುಂಬಿ ತುಳುಕುತ್ತಿರುವುದು ಸಿದ್ಧಾಂತ ಶಿಖಾಮಣಿಕಾರರ ಉಕ್ತಿಗೆ ಪುಷ್ಟಿಯನ್ನೊದಗಿಸುತ್ತದೆ. ಶಿವಶರಣರು ಸ್ವತಂತ್ರ ಚಿಂತಕರಾದರೂ, ಪರಂಪರೆಯನ್ನು ಬಿಟ್ಟು ನಡೆದವರಲ್ಲ ಎಂಬುದು ಅವರ ವಚನಗಳಿಂದಲೇ ನಮಗೆ ಅರಿವಾಗುತ್ತದೆ. ಭರತಖಂಡದ ಎಲ್ಲ ಆಸ್ತಿಕ ದಾರ್ಶನಿಕರು ತಮ್ಮ ತಮ್ಮ ಸಿದ್ಧಾಂತವನ್ನು ವೇದ, ವೇದಾಂತ, ಪುರಾಣ, ಆಗಮಗಳ ನೆಲೆಯಲ್ಲಿಯೇ ಸ್ಥಾಪಿಸಿದ್ದಾರೆ. ಅಂತೆಯೇ ವಚನಕಾರರು ತಾವು ಮುಂದುವರಿಸುತ್ತಿರುವ ಸಿದ್ಧಾಂತದ ಅಭಿಪ್ರಾಯಗಳಿಗೆ ಪ್ರಮಾಣಗಳನ್ನಾಗಿ ವೇದ, ಉಪನಿಷತ್, ಆಗಮ, ಪುರಾಣ ಇತ್ಯಾದಿ ಪ್ರಾಚೀನ ಸಂಸ್ಕೃತ ಗ್ರಂಥಗಳಿಂದ ಉಕ್ತಿಗಳನ್ನು ಸಾಕ್ಷಿ, ಪ್ರಮಾಣು, ಅದೆಂತೆಂದಡೆ, ಋಗ್ವೇದೇ, ಶ್ರುತಿ, ಲೈಂಗೇ, ಕಾಮಿಕಾಗಮೇ ಇತ್ಯಾದಿಯಾಗಿ ಹೇಳಿ ಯಥಾವತ್ತಾಗಿ ಉಲ್ಲೇಖಿಸುವ ಮೂಲಕ ಅವುಗಳ ಬಗ್ಗೆ ತಮಗಿದ್ದ ಗೌರವಾದರಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳಲ್ಲಿ ಪ್ರಸ್ತುತ ಲಿಂಗಧಾರಣಪರವಾಗಿರುವ ಋಗ್ವೇದದ ಒಂದು ಮಂತ್ರದ ಬಗ್ಗೆ ಶಿವಶರಣರ

ಅಭಿಪ್ರಾಯವೇನು ಎಂಬುದನ್ನು ಪರಿಶೀಲಿಸಲಾಗುವುದು. ಆ ಮಂತ್ರವಿದು–

ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ।
ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನಃ॥
ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮತ್।
ಇದಂ ತವ ಪ್ರಸರ್ಪಣಂ ಸುಬಂಧವೇಹಿ ನಿರೀಹಿ॥[2]

**ಅರ್ಥ** – ಅಯಂ ಭಗವಾನ್=ಲಿಂಗರೂಪಿಯಾದ ಈ ಸದಾಶಿವನು, ಮೇ ಹಸ್ತೆಃ=ನನ್ನ ಹಸ್ತದಲ್ಲಿ ವಿರಾಜಮಾನನಾಗಿದ್ದಾನೆ. ಅಯಂ=ಈ ಶಿವಲಿಂಗವು, ಮೇ = ನನಗೆ, ಭಗವತ್ತರಃ=ಅತಿಶಯವಾದ ಐಶ್ವರ್ಯವನ್ನು ಕೊಡುತ್ತದೆ. ಅಯಂ = ನನ್ನ ಹಸ್ತದಲ್ಲಿರುವ ಈ ಶಿವಲಿಂಗವು, ಮೇ = ನನಗೆ, ವಿಶ್ವಭೇಷಜಃ = ಎಲ್ಲ ಭವರೋಗಗಳನ್ನು ನಾಶಪಡಿಸುವ ಮಹಾವೈದ್ಯನು. ಅಯಂ = ನನ್ನ ಹಸ್ತದಲ್ಲಿರುವ ಈ ಶಿವಲಿಂಗವು, ಶಿವಾಭಿಮರ್ಶನಃ = ಸಮಸ್ತ ಕಲ್ಯಾಣವನ್ನುಂಟು ಮಾಡುವನು. ಅಯಂ = ನನ್ನ ಹಸ್ತದಲ್ಲಿರುವ ಈ ಶಿವಲಿಂಗವು, ಮಾತಾ–ತಾಯಿಯಂತೆ ವಾತ್ಸಲ್ಯವುಳ್ಳವನು, ಪಿತಾ = ತಂದೆಯಂತೆ ರಕ್ಷಣೆಯುಳ್ಳವನು. ಅಯಂ = ಈ ಶಿವಲಿಂಗವು, ಜೀವಾತುಃ = ಸಂಜೀವಿನಿಯಂತೆ ಪ್ರಾಣರಕ್ಷಣೆ ಮಾಡುತ್ತದೆ. ಆಗಮಾತ್ = ಶಾಸ್ತ್ರಪ್ರಮಾಣದಿಂದ, ಹೇ ಸುಬಂಧೋ = ಎಲೈ ನಿರ್ವ್ಯಾಜ ಬಂಧುವೇ!, ಏಹಿ = ಇಲ್ಲಿಗೆ ಆಗಮಿಸು. ಇದಂ = ನನ್ನ ಹಸ್ತದಲ್ಲಿರುವ ಶಿವಲಿಂಗವು, ತವ = ನಿನಗೆ, ಪ್ರಸರ್ಪಣಂ = ವಿಹಾರ ಸ್ಥಾನವಾಗಿರುವುದು, ನಿರೀಹಿ = ಈ ಕಡೆ ಆ ಕಡೆ ಚಲಿಸದಂತೆ ಈ ಇಷ್ಟಲಿಂಗದಲ್ಲಿ ಯಾವಾಗಲೂ ನೆಲೆಸು".

ನಂದಿಕೇಶ್ವರ ಶಿವಾಚಾರ್ಯರು ಲಿಂಗಧಾರಣಚಂದ್ರಿಕಾ ಎಂಬ ಗ್ರಂಥದಲ್ಲಿ ಈ ಮಂತ್ರವನ್ನು ಹೀಗೆ ಅರ್ಥೈಸಿದ್ದಾರೆ: "ಅತ್ರ ಭಗವಚ್ಛಬ್ದೇನಂ ಪರಮಶಿವ ಏವೋಚ್ಯತೇ, "ಅಥೈನಂ ಭಗವಂತಂ ರುದ್ರಂ ಕುಮಾರಃ ಪಪ್ರಚ್ಛ", "ಅಥ ಕಾಲಾಗ್ನಿರುದ್ರಂ ಭಗವಂತಂ ಸನತ್ಕುಮಾರಃ ಪಪ್ರಚ್ಛ" ಕಾಲಾಗ್ನಿರುದ್ರೋಪನಿಷತ್, 2) ಇತ್ಯಾದಿ ಶ್ರುತಿಷು, "ಇತಿ ಸಂಸ್ತೂಯಮಾನಸ್ತು ಭಗವಾನ್ ಋಷಭಧ್ವಜಃ" "ಇತಿ ಹರಿವಂಶಾದಿಷು ಚ ಶಿವೇ ತತ್ಪದ ಪ್ರಯೋಗಾತ್। ಏವಂ ಚಾಯಂ ಭಗವಾನ್ ಲಿಂಗರೂಪಃ ಶಿವಃ, ಮೇ ಹಸ್ತಃ ಹಸ್ತಗತಃ, ಮೇ ಮತ್ಸಂಬಂಧೀ, ಅಯಂ ಶಿವೋ ಭಗವತ್ತರ ಇತ್ಯರ್ಥಃ.[3]

ಇಲ್ಲಿ ನಿರೂಪಿತವಾಗಿರುವ ಅರ್ಥವಿವರಣೆಯಂತೆ 'ಭಗವಾನ್' ಶಬ್ದವು ಕೇವಲ 'ಪರಮಶಿವ'ನಿಗೆ ಅನ್ವಯವಾಗುತ್ತದೆ. ಅದಕ್ಕೆ ಪೂರಕವಾಗಿ ನಂದಿಕೇಶ್ವರ ಶಿವಾಚಾರ್ಯರು ಕಾಲಾಗ್ನಿರುದ್ರೋಪನಿಷತ್ ಮತ್ತು ಹರಿವಂಶಗಳಲ್ಲಿ ಭಗವಾನ್, ರುದ್ರ, ಕಾಲಾಗ್ನಿ ರುದ್ರ, ವೃಷಭಧ್ವಜ ಮುಂತಾದವುಗಳು ಒಂದೇ ವಿಭಕ್ತಿಯಲ್ಲಿರುವುದನ್ನು ಉಲ್ಲೇಖಿಸಿ, 'ಅಯಂ ಭಗವಾನ್' ಎಂದರೆ 'ಲಿಂಗರೂಪಿಯಾದ ಶಿವ' ಎಂದರ್ಥವೆಂದು ನಿರೂಪಿಸಿ,

ಶಿವನು ನನ್ನ ಹಸ್ತಗತನು ಅರ್ಥಾತ್ ನನ್ನ ಕರಪೀಠವನ್ನಲಂಕರಿಸಿದ್ದಾನೆ ಎಂದು ಹೇಳಿದ್ದಾರೆ.

ಪೂರ್ವೋಕ್ತ ಎರಡನೆಯ ಮಂತ್ರವು (ಅಯಂ ಮಾತಾ ಅಯಂ ಪಿತಾ....) ಕರಪೀಠಸ್ಥ ಲಿಂಗವೆಂದು ಹಿಂದಿನ ಮಂತ್ರದ ಅರ್ಥವನ್ನು ಹೇಳುವುದರ ಜೊತೆಗೆ ಲಿಂಗವು ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣೀಭೂತವೆಂದು ವ್ಯಾಖ್ಯಾನಿಸಿದ್ದಾರೆ (ಏವಂ ಹಸ್ತಾದೌ ಲಿಂಗಧಾರಣಂ ವಿಧಾಯ ತಸ್ಯ ಲಿಂಗಸ್ಯ ಸೃಷ್ಟ್ಯಾದಿ ಕರ್ತೃತ್ವೇನಾರ್ಥವಾದಃ ಕ್ರಿಯತೇ। ತತ್ರ 'ಅಯಂ ಮಾತಾ ಅಯಂ ಪಿತಾ' ಇತಿ ಸೃಷ್ಟಿಕರ್ತೃತ್ವಂ ಅಭಿಧೀಯತೇ!)[4]

ಇದೇ ಅಭಿಪ್ರಾಯವು ಸಿದ್ಧಾಂತ ಶಿಖಾಮಣಿಯ ಈ ಶ್ಲೋಕದಲ್ಲಿ ವ್ಯಕ್ತವಾಗಿದೆ:

> ಬ್ರಹ್ಮೇತಿ ವ್ಯಪದೇಶಸ್ಯ ವಿಷಯಂ ಯಂ ಪ್ರಚಕ್ಷತೇ।
> ವೇದಾಂತಿನೋ ಜಗನ್ಮೂಲಂ ತಂ ನಮಾಮಿ ಪರಂ ಶಿವಮ್॥[5]

"ವೇದಾಂತಿಗಳು 'ಪರಬ್ರಹ್ಮ' ಎಂಬ ಶಬ್ದಕ್ಕೆ ಯಾರನ್ನು ವಿಷಯವನ್ನಾಗಿ ಹೇಳುತ್ತಾರೆಯೋ ಅಂತಹ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣೀಭೂತನಾದ ಆ ಪರಶಿವನನ್ನು ನಮಸ್ಕರಿಸುತ್ತೇನೆ."

ಋಗ್ವೇದದ ಈ ಮಂತ್ರವು (ಅಯಂ ಮೇ ಹಸ್ತೋ ಭಗವಾನ್.....) ಶಿವಶರಣರ ಮೇಲೆ ತುಂಬಾ ಪ್ರಭಾವ ಬೀರಿದ್ದು, 'ಅಯಂ ಮೇ ಹಸ್ತೋ ಭಗವಾನ್' ಎಂದರೆ ಇಷ್ಟಲಿಂಗವೆಂದೇ ತಮ್ಮ ವಚನಗಳಲ್ಲಿ ಬಳಸಿದ್ದಾರೆ. ಚೆನ್ನಬಸವಣ್ಣನವರ ಈ ವಚನವನ್ನು ಗಮನಿಸಿ:

> ಶೀಲವಂತರೆಲ್ಲ ಅಂತಿರಲಿ,
> ತಮ್ಮ ತಮ್ಮ ಮನದಿ ಮದವ ಕಳೆದು
> ತಮ್ಮೊಳಗಿರ್ದ ಭವಿಗಳ ಭಕ್ತರ ಮಾಡಿ
> ತಮ್ಮಲ್ಲಿರುವ ಅಷ್ಟಮದಂಗಳು, ಸಪ್ತವ್ಯಸನಂಗಳು,
> ಅರಿಷಡ್ವರ್ಗಂಗಳು, ಪಂಚಭೂತಂಗಳು,
> ಚತುಷ್ಕರಣಂಗಳು, ತ್ರಿಕರಣಂಗಳು, ತ್ರಿಗುಣಂಗಳು
> ಶಿವಸಂಸ್ಕಾರದಿಂದ ಲಿಂಗಕರಣಗಳೆಂದೆನಿಸಿ
> ನಿತ್ಯ ಲಿಂಗಾರ್ಚನೆಯ ಮಾಡಬಲ್ಲಾತನೆ ಶೀಲವಂತನಯ್ಯಾ.
> ಅವನ ಶ್ರೀಪಾದವನು ಹಸ್ತವನೆತ್ತಿ ಹೊಗಳುತಿರ್ದವು ವೇದಂಗಳು:
> "ಓಂ ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ ॥
> ಅಯಂ ಮೇ ವಿಶ್ವಭೇಷಜಃ । ಅಯಂ ಶಿವಾಭಿಮರ್ಶನಃ ॥
> ಅಯಂ ಮಾತಾ ಅಯಂ ಪಿತಾ"॥
> ಇಂತಪ್ಪ ಲಿಂಗದ ಅರ್ಚನೆಯ ಮಾಡಬಲ್ಲಾತನೆ
> ಸಂಬಂಧಿಯೆನಿಸಿಕೊಳ್ಳಬಲ್ಲನಯ್ಯಾ ಕೂಡಲಚೆನ್ನಸಂಗಮದೇವಾ.[6]

ಶ್ರೀಗುರುವು ಶಿವದೀಕ್ಷಾ ಸಂಸ್ಕಾರದ ಮೂಲಕ ಭವಿಯಾಗಿದ್ದವನನ್ನು ಭಕ್ತನನ್ನಾಗಿ ಮಾಡಿ, ಇಷ್ಟಲಿಂಗವನ್ನು ಅನುಗ್ರಹಿಸಿದ ಪರಿಣಾಮವಾಗಿ ಆತನ ಅಂತರಂಗದ ಕರಣಗಳೆಲ್ಲ ಲಿಂಗಕರಣಗಳಾಗುತ್ತವೆ ಎಂಬ ಭಾವನೆಯಿಂದ ಇಷ್ಟಲಿಂಗವನ್ನು ಪೂಜಿಸುವವನು ಶೀಲವಂತ ಎನಿಸುತ್ತಾನೆ. ಅಂಥವನನ್ನು ವೇದಗಳು "ಓಂ ಅಯಂ ಮೇ ಹಸ್ತೋ ಭಗವಾನಯಂ ಮೇ ಭಗವತ್ತರಃ ......" ಇತ್ಯಾದಿಯಾಗಿ ಹೊಗಳುತ್ತಿವೆ ಎಂದು ಚೆನ್ನಬಸವಣ್ಣನವರು ತಮ್ಮ ಅಭಿಪ್ರಾಯವನ್ನು ವೇದಮಂತ್ರದಿಂದ ಪ್ರಮಾಣಿಸಿದ್ದಾರೆ.

"ಓಂ ಅಯಂ ಮೇ ಹಸ್ತೋ ಭಗವಾನ್.....ಅಯಂ ಪಿತಾ ॥ ಇಂತಪ್ಪ ಲಿಂಗದ ಅರ್ಚನೆಯ ಮಾಡಬಲ್ಲಾತನೆ ಸಂಬಂಧಿಯೆನಿಸಿಕೊಳ್ಳಬಲ್ಲನಯ್ಯಾ" ಎಂಬ ವಚನದ ಕೊನೆಯ ಭಾಗದಿಂದ ಈ ಮಂತ್ರವು ಕರಪೀಠದಲ್ಲಿ ಸ್ಥಾಪಿಸಿ ಪೂಜಿಸುವ ಇಷ್ಟಲಿಂಗವನ್ನು ಕುರಿತು ಹೀಗೆ ಹೇಳುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ವಚನಗಳಲ್ಲಿ ವೇದ, ಉಪನಿಷತ್, ಆಗಮ, ಪುರಾಣಗಳಿಂದ ಹೆಚ್ಚು ಶ್ಲೋಕಗಳನ್ನು ಉಲ್ಲೇಖಿಸಿರುವ ವಚನಕಾರರಲ್ಲಿ ಉರಿಲಿಂಗಪೆದ್ದಿಯು ಪ್ರಮುಖನು (ಚೆನ್ನಬಸವಣ್ಣನವರೂ ಅತಿ ಹೆಚ್ಚು ಸಂಸ್ಕೃತ ಶ್ಲೋಕಗಳನ್ನು ವಚನದಲ್ಲಿ ಉಲ್ಲೇಖಿಸಿದ್ದಾರೆ). ಅವರು ಮೂರು ವಚನಗಳಲ್ಲಿ ಪೂರ್ವೋಕ್ತ ಋಗ್ವೇದ ಮಂತ್ರವನ್ನು ಕರಪೀಠಸ್ಥ ಇಷ್ಟಲಿಂಗವೆಂಬ ಅರ್ಥದಲ್ಲಿಯೇ ಉಲ್ಲೇಖಿಸಿದ್ದಾರೆ.

> 'ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ'
> ಎಂದೆನಿಸುವ ಲಿಂಗವು
> 'ಅತ್ಯತಿಷ್ಠದ್ದಶಾಂಗುಲಂ' ಎಂದೆನಿಸುವ ಲಿಂಗವು,
> 'ಚಕಿತಮಭಿಧತ್ತೇ' ಎಂದೆನಿಸುವ ಲಿಂಗವು
> 'ಅಣೋರಣೀಯಾನ್ ಮಹತೋ ಮಹೀಯಾನ್' ಎಂದೆನಿಸುವ ಲಿಂಗವು,
> 'ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ' ಎಂದೆನಿಸುವ ಲಿಂಗವು,
> 'ಏಕಮೂರ್ತಿಸ್ತ್ರಿಧಾ ಭೇದಾಃ' ಎಂದೆನಿಸಿ ಶ್ರೀಗುರುಲಿಂಗಜಂಗಮರೂಪಾಗಿ,
> ಇಷ್ಟಂ ಪ್ರಾಣಸ್ತಥಾ ಭಾವಸ್ತ್ರಿಧಾ ಚೈಕಂ ವರಾನನೇ' ಎಂದುದಾಗಿ
> ತ್ರಿವಿಧ ಏಕೀಭವಿಸಿ ಲಿಂಗರೂಪದಿ
> ಎನ್ನ ಕರಸ್ಥಲಕ್ಕೆ ಬಂದು ಕರತಲಾಮಲಕದಂತೆ ತೋರುವೆ[7]
> .............

ಲಿಂಗದ ಸ್ವರೂಪವು ವಾಕ್-ಮನಸ್ಸುಗಳಿಗೆ ನಿಲುಕದ್ದು, ಪಂಚಮಹಾಭೂತ ಗಳಿಗಿಂತಲೂ ಹತ್ತು ಅಂಗುಲ ಉದ್ದವಾದುದು, ಅಣುವಿಗಿಂತಲೂ ಅಣು ಮಹತ್ತಿಗಿಂತಲೂ ಮಹತ್ತಾದುದು ಇತ್ಯಾದಿಯಾಗಿ ವರ್ಣಿತವಾಗಿರುವ ಈ ವಚನದಲ್ಲಿ ಉರಿಲಿಂಗಪೆದ್ದಿಗಳು 'ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ' ಎಂದೆನಿಸುವ ಲಿಂಗವು ಇಷ್ಟಲಿಂಗ, ಪ್ರಾಣಲಿಂಗ ಮತ್ತು ಭಾವಲಿಂಗ ಎಂಬ ತ್ರಿವಿಧ

ಲಿಂಗಗಳು ಏಕೀಭವಿಸಿ ಲಿಂಗರೂಪಾಗಿ (ಇಷ್ಟಲಿಂಗದ ರೂಪವನ್ನು ತಾಳಿ) ಎನ್ನ ಕರಸ್ಥಲಕ್ಕೆ ಬಂದು ಕರತಳಾಮಲಕದಂತೆ ತೋರುತ್ತಿದೆ ಎಂದು ಹೇಳಿದ್ದಾರೆ.

ಇದರಿಂದ 'ಅಯಂ ಮೇ ಹಸ್ತೋ ಭಗವಾನ್....' ಇತ್ಯಾದಿ ಮಂತ್ರವು ಕರಪೀಠದಲ್ಲಿ ಪೂಜೆಗೊಳ್ಳುವ ಇಷ್ಟಲಿಂಗವನ್ನು ಕುರಿತಾಗಿಯೇ ಹೇಳುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

> ವಟಭೀಜದ ವಟವೃಕ್ಷಕೋಟಿಯನೊಳಕೊಂಡಿಪ್ಪಂತೆ,
> ಸಟೆಯಿಂದಲಾದಜಾಂಡಕೋಟಿಯನೊಳಕೊಂಡಿಹ ಲಿಂಗವೆ,
> 'ಅಯಂ ಮೇ ಹಸ್ತೋ ಭಗವಾನ್' ಎಂದೆನಿಸುವ ಲಿಂಗವೆ,
> 'ಚಕಿತಮಭಿಧತ್ತೇ ಶ್ರುತಿರಪಿ' ಎಂದೆನಿಸುವ ಲಿಂಗವೆ,
> ಎನ್ನ ಕರಸ್ಥಲಕ್ಕೆ ಬಂದು ಸೂಕ್ಷ್ಮವಾದೆ
> ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ[8]

ಈ ವಚನದ 'ಅಯಂ ಮೇ ಹಸ್ತೋ ಭಗವಾನ್' ಎಂದೆನಿಸುವ ಲಿಂಗವೆ..... ಎನ್ನ ಕರಸ್ಥಲಕ್ಕೆ ಬಂದು ಸೂಕ್ಷ್ಮವಾದೆ' ಎಂಬ ಉಕ್ತಿಯೂ ಋಗ್ವೇದ ಮಂತ್ರವು ಇಷ್ಟಲಿಂಗವನ್ನು ಪ್ರತಿಪಾದಿಸುತ್ತದೆ ಎಂಬುದು ಮನವರಿಕೆಯಾಗುತ್ತದೆ.

> ಶ್ರೀಗುರುಸ್ವಾಮಿ ಕರುಣಿಸಿಕೊಟ್ಟ ಪ್ರಾಣಲಿಂಗವು
> ಪಂಚಬ್ರಹ್ಮಮುಖವುಳ್ಳ ವಸ್ತುವೆಂದರಿವುದು
> ............
> ಈ ಪ್ರಕಾರದಿಂ ಪಂಚಬ್ರಹ್ಮಲಿಂಗವು ಪಂಚಮುಖಸಂಜ್ಞೆಯ
> ನುಳ್ಳದಾಗಿಹುದೆಂದರಿವುದು.
> ಅದೆಂತೆಂದಡೆ: ಅದಕ್ಕೆ ವಾತುಳಾಗಮದಲ್ಲಿ
> "ಅಖಿಲಾರ್ಣವಲಯಾನಾಂ ಲಿಂಗತತ್ತ್ವಂ ಪರಂ ತತಃ ।
> ಪರಂ ಗೂಢಂ ಶರೀರಸ್ಥಂ ಲಿಂಗಕ್ಷೇತ್ರಮನಾದಿವತ್ ॥
> ಯದಾದ್ಯಮೈಶ್ವರಂ ತೇಜಸ್ತಲ್ಲಿಂಗಂ ಪಂಚಸಂಜ್ಞಕಮ್"॥
> ಎಂದೆನಿಸುವ ಲಿಂಗವು
> .............
> ಮತ್ತಂ ಋಗ್ವೇದದಲ್ಲಿ,
> "ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ।
> ಅಯಂ ಮೇ ವಿಶ್ವಭೇಷಜೋಽಯಂ ಶಿವಾಭಿಮರ್ಶನಃ॥
> ಅಯಂ ಮಾತಾ ಅಯಂ ಪಿತಾ ಅಯಂ ಜೀವಾತುರಾಗಮ್॥"
> ಎಂದೆನಿಸುವ ಲಿಂಗವು
> .............
> ಗುರುಲಿಂಗಜಂಗಮರೂಪಾಗಿ ಎನ್ನ ಕರಸ್ಥಲಕ್ಕೆ ಬಿಜಯಂಗೈದು
> ಕರತಲಾಮಲಕವಾಗಿ ತೋರುತ್ತೈದಾನೆ.[9]

ಈ ವಚನದಲ್ಲಿಯ "ಅಯಂ ಮೇ ಹಸ್ತೋ ಭಗವಾನ್..... ಅಯಂ ಜೀವಾತುರಾಗಮ್।" ಎಂದೆನಿಸುವ ಲಿಂಗವು....ಎನ್ನ ಕರಸ್ಥಲಕ್ಕೆ ಬಿಜಯಂಗೈದು

ಕರತಲಾಮಲಕವಾಗಿ ತೋರುತ್ತೈದಾನೆ" ಎಂಬ ವಾಕ್ಯದಿಂದಲೂ 'ಅಯಂ ಮೇ ಹಸ್ತೋ ಭಗವಾನ್....' ಇತ್ಯಾದಿ ಋಗ್ವೇದ ಮಂತ್ರವು ವೀರಶೈವ/ಲಿಂಗಾಯತರು ವಾಮಕರಪೀಠದಲ್ಲಿರಿಸಿಕೊಂಡು ಪೂಜಿಸುವ 'ಇಷ್ಟಲಿಂಗ' ಎಂಬ ಅರ್ಥವನ್ನೇ ಬೋಧಿಸುತ್ತಿದೆ ಎಂದು ಸ್ಪಷ್ಟವಾಗುತ್ತದೆ.

ತೋಂಟದ ಸಿದ್ಧಲಿಂಗ ಶಿವಯೋಗಿಗಳ ಒಂದು ವಚನದ ಎರಡು ಸಾಲುಗಳು 'ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ' ಎಂಬ ಮಂತ್ರದ ಭಾವಾನುವಾದವಾಗಿದೆ:

ಲಿಂಗವ ಹಿಡಿದ ಹಸ್ತವೆ ಲಿಂಗಕ್ಕೆ ಪೀಠ ಕಾಣಿರೊ.
ಲಿಂಗವ ಪೂಜಿಸುವ ಹಸ್ತವೆ ಶಿವಹಸ್ತ ಕಾಣಿರೊ
ಲಿಂಗವ ಧರಿಸಿಪ್ಪ ಅಂಗವೆ ಲಿಂಗದಂಗ ತಾನೆ ನೋಡ.
ಲಿಂಗ ಪ್ರಸಾದವ ಕೊಂಬ ಪ್ರಾಣ ಲಿಂಗ ತಾನೆ ನೋಡ.
ಒಳಹೊರಗೆ ಲಿಂಗಭರಿತವಾಗಿಪ್ಪ ಲಿಂಗದೇಹಿ ಲಿಂಗಪ್ರಾಣಿಗೆ
ಕರ್ಮವ ಕಲ್ಪಿಸಿ ನುಡಿವ ಅಬದ್ಧರನೇನೆಂಬೆನಯ್ಯ
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ[10]

ಇಲ್ಲಿಯವರೆಗೆ 'ಅಯಂ ಮೇ ಹಸ್ತೋ ಭಗವಾನ್' ಇತ್ಯಾದಿ ಋಗ್ವೇದಮಂತ್ರವು ಇಷ್ಟಲಿಂಗವನ್ನು ಪ್ರತಿಪಾದಿಸುತ್ತಿದೆ ಎಂಬುದನ್ನು ನಂದಿಕೇಶ್ವರ ಶಿವಾಚಾರ್ಯರ ಲಿಂಗಧಾರಣಚಂದ್ರಿಕೆ (ಸಂಸ್ಕೃತ), ಚೆನ್ನಬಸವಣ್ಣ, ಉರಿಲಿಂಗಪೆದ್ದಿ, ತೋಂಟದ ಸಿದ್ಧಲಿಂಗೇಶ್ವರರ ವಚನಗಳ ನೆಲೆಯಲ್ಲಿ ನಿರೂಪಿಸಲಾಯಿತು. ಋಗ್ವೇದದಲ್ಲಿಯೇ ಇಂತಹ ಪರಿಕಲ್ಪನೆ ಬಂದಿದೆ ಎಂದರೆ ವೀರಶೈವ-ಲಿಂಗಾಯತರ ಕುರುಹಾದ 'ಇಷ್ಟಲಿಂಗ'ದ ಪರಿಕಲ್ಪನೆಯೂ ಋಗ್ವೇದದಷ್ಟೇ ಪ್ರಾಚೀನವಾದುದೆಂದು ಹೇಳಬಹುದು.

**ಅಡಿಟಿಪ್ಪಣಿ**

1. ಸಿದ್ಧಾಂತಶಿಖಾಮಣಿ, 6.58
2. ಋಗ್ವೇದ, 10-60-12; 10-60-07
3. ಲಿಂಗಧಾರಣಚಂದ್ರಿಕಾ, ಪು. 146, (ಶೈವಭಾರತೀ ಭವನ, ಜಂಗಮವಾಡಿ ಮಠ, ವಾರಾಣಸಿ, 1988)
4. ಅದೇ., ಪು. 153
5. ಸಿದ್ಧಾಂತಶಿಖಾಮಣಿ, 1.2
6. ಚೆನ್ನಬಸವಣ್ಣನವರ ವಚನ, 1606
7. ಉರಿಲಿಂಗಪೆದ್ದಿಗಳ ವಚನ, 226
8. ಅದೇ., ವ.ಸಂ. 269
9. ಅದೇ., ವ.ಸಂ. 326
10. ತೋಂಟದ ಸಿದ್ಧಲಿಂಗ ಶಿವಯೋಗಿಗಳ ವಚನ, 184

□

# ಗ್ರಾಮದೇವತೆಗಳು (ಸಪ್ತಮಾತೃಕೆಯರು)

**ಡಾ. ಪಿ.ಕೆ. ರಾಜಶೇಖರ**

ಗ್ರಾಮದೇವತೆಗಳಿಗೆ ಅಥವಾ ಜನಪದ ದೇವತೆಗಳಿಗೆ ಮುಂಡವಿಲ್ಲದೆ ರುಂಡಗಳು ಮಾತ್ರ ಇವೆ. ಹೀಗೆ ಕೇವಲ ರುಂಡಮಾತ್ರವೇ ಇರುವುದಕ್ಕೂ ನಮ್ಮ ಜನಪದ ಕಲಾವಿದ ಬೆಟ್ಟದಬೀಡು ಸಿದ್ದಶೆಟ್ಟರು ಹಾಡಿರುವ 'ಎಲ್ಲಮ್ಮದೇವಿ' ಮಹಾಕಾವ್ಯದಲ್ಲಿ ಒಂದು ಸ್ವಾರಸ್ಯಕರವಾದ ಪ್ರಸಂಗವಿದೆ. ಅದೆಂದರೆ :

ಜಮದಗ್ನಿ ಮಹರ್ಷಿಯ ಪತ್ನಿ ರೇಣುಕಾದೇವಿ. ಆಕೆಯಿಂದ ತಿಳಿದೋ ತಿಳಿಯದೆಯೋ ಆದ ಅಚಾತುರ್ಯಕ್ಕೆ ಜಮದಗ್ನಿಯು ಕಟ್ಟುಗ್ರ ಕೋಪದಿಂದ ಅವಳ ಶಿರಚ್ಛೇದನ ಮಾಡಲು ಪುತ್ರ ಪರಶುರಾಮನಿಗೆ ಆಜ್ಞಾಪಿಸುತ್ತಾನೆ. ಪಿತೃವಾಕ್ಯ ಪರಿಪಾಲಕನಾದ ಪರಶುರಾಮನು ತಾಯಿ ರೇಣುಕೆಯ ಕುತ್ತಿಗೆಯನ್ನು ಕೊಚ್ಚಿ ಎಸೆಯಲು ತನ್ನ ಪರಶುವನ್ನು ಎತ್ತುತ್ತಾನೆ ಆಗ ಮಾತೆ ರೇಣುಕೆಯು:

'ಏಯ್ ಪರಶುರಾಮ, ನನ್ನನ್ನು ಕೊಲ್ತೀಯ? ನಾನು ನಿನ್ನ ಅಮ್ಮ ಕಣೋ' ಎನ್ನುತ್ತಾಳೆ. ಅದಕ್ಕೆ ಪರಶುರಾಮನು ಸ್ವಲ್ಪವೂ ಕಿವಿಗೊಡದೆ,

'ಅಮ್ಮ? ಎಲ್ಲಿ ಅಮ್ಮ!' ಎಂದು ಹೇಳುತ್ತ ಅವಳ ಕುತ್ತಿಗೆಯನ್ನು ಕೊಚ್ಚಿಹಾಕುತ್ತಾನೆ. ಹಾಗೆ ಅವನು ಕೊಚ್ಚಿಹಾಕಿದ ಕುತ್ತಿಗೆಯ ಭಾಗದಿಂದ ಥಟ್ಟನೆ ಮತ್ತೊಂದು ತಲೆ ಮೂಡಿ,

'ಇಲ್ಲಿ ಅಮ್ಮ!' ಎನ್ನುತ್ತದೆ. ಇದರಿಂದ ಕ್ಷುದ್ಧನಾದ ಪರಶುರಾಮ ಮತ್ತೆ 'ಎಲ್ಲಿ ಅಮ್ಮ?' ಎನ್ನುತ್ತ ಪರಶು ಬೀಸಿ ಕೊಚ್ಚಿಹಾಕುತ್ತಾನೆ. ಆ ಕ್ಷಣವೇ ರೇಣುಕೆಯ ಕುತ್ತಿಗೆಯಲ್ಲಿ ಮತ್ತೊಂದು ತಲೆ ಎದ್ದು ಕಾಕು ಹಾಕುತ್ತ

'ಇಲ್ಲಿ ಅಮ್ಮ!' ಎನ್ನುತ್ತಾಳೆ.

ಹೀಗೆ 'ಎಲ್ಲಿ ಅಮ್ಮ' ಎನ್ನುತ್ತ ಪರಶುರಾಮ ರೇಣುಕೆಯ ತಲೆಗಳನ್ನು ಕೊಚ್ಚುತ್ತಲೇ ಇರುತ್ತಾನೆ. ಅವಳು 'ಇಲ್ಲಿ ಅಮ್ಮ!' ಎಂದು ಮೂಡುತ್ತಲೇ ಇರುತ್ತಾಳೆ. ಇದರಿಂದ

---

ನಗರ್ಲೆ ಶಿವಕುಮಾರ ಅವರ ಸಂಪಾದಿತ 'ಗ್ರಾಮದೇವತೆಗಳು' (ಸಪ್ತಮಾತೃಕೆಯರು) ಕೃತಿಗೆ ಬರೆದ ಮುನ್ನುಡಿ.

ಬೃಹತ್ ಬೆಟ್ಟದ ಗಾತ್ರಕ್ಕೆ ತಲೆಗಳ ರಾಶಿ ಬೀಳುತ್ತದೆ. ಪರಶುರಾಮನ ಕೈ ಸೋತು ನೆಲಕ್ಕುರುಳುತ್ತಾನೆ.

ಈ ಸಮಯದಲ್ಲಿ ರೇಣುಕೆಯ ದಾಸಿ ಮಾತಂಗಿಯು 'ನನ್ನ ತಾಯಿಯೇ ಹೋದ ಮೇಲೆ ನಾನೇಕೆ ಬದುಕಬೇಕು' ಎಂದು ಹೇಳುತ್ತ ತನ್ನ ಶಿರಸ್ಸನ್ನು ಕಡಿದುಕೊಳ್ಳುತ್ತಾಳೆ.

ಈಗ ಜಮದಗ್ನಿಯು ಉಗ್ರಾತಿ ಉಗ್ರ ಕೋಪದಿಂದ ನೋಡಿದಾಗ ರೇಣುಕೆಯ ಕುತ್ತಿಗೆಯಿಂದ ಮತ್ತೆ ಶಿರಸ್ಸು ಉದ್ಭವಿಸದೆ ಕತ್ತರಿಸಿದ ಕುತ್ತಿಗೆ ಮಾತ್ರ ಉಳಿಯುತ್ತದೆ.

ಪರಶುರಾಮನು ಚೇತರಿಸಿಕೊಂಡು ಮೇಲೆದ್ದಾಗ ಸುಪ್ರೀತನಾದ ಜಮದಗ್ನಿಯು ಪುತ್ರನ ಪಿತೃಭಕ್ತಿಗೆ ಮೆಚ್ಚಿ

'ವತ್ಸ, ನಿನ್ನ ಪಿತೃಭಕ್ತಿಗೆ ಮೆಚ್ಚಿದ್ದೇನೆ. ನಿನಗೆ ಏನಾದರೂ ವರ ಕೊಡಬೇಕು ಎನಿಸುತ್ತಿದೆ. ಪ್ರೀತ್ಯರ್ಥವಾಗಿ ಕೊಡುತ್ತೇನೆ ಕೇಳಿಕೋ' ಎಂದನು. ಅದಕ್ಕೆ ಪರಶುರಾಮನು

'ತಂದೆಯವರೇ ನನಗೆ ನೀವು ವರವನ್ನು ಕೊಡುವುದಾದರೆ ನಿಮ್ಮಲ್ಲಿ ಅಂತರ್ಗತ ವಾಗಿರುವ ಕ್ರೋಧದೇವತೆಯನ್ನು ತ್ಯಜಿಸಿರಿ. ನನಗಿಷ್ಟು ಸಾಕು!' ಎಂದನು. ಜಮದಗ್ನಿ ಆ ಕೂಡಲೆ ಕ್ರೋಧದೇವತೆಯನ್ನು ಹೊರಹಾಕಿ 'ಮಗು, ನಿನ್ನಿಚ್ಛೆಯಂತೆ ಕ್ರೋಧ ದೇವತೆಯನ್ನು ಹೊರದೂಡಿದ್ದೇನೆ. ಈಗ ನಿನಗಾಗಿ ಏನಾದರೂ ಕೇಳಿಕೋ' ಎಂದನು. ಅದಕ್ಕೆ ಪರಶುರಾಮನು 'ತಂದೆಯವರೇ ತಾಯಿಯ ಶಿರಚ್ಛೇದನ ಮಾಡಲು ಒಪ್ಪದೆ ಹೋದ ನನ್ನ ಅಣ್ಣಂದಿರನ್ನು ನಿಮ್ಮ ಕ್ರೋಧಾಗ್ನಿಯಿಂದ ಭಸ್ಮ ಮಾಡಿದ್ದೀರಿ. ಅವರನ್ನು ಬದುಕಿಸಿಕೊಡಿ' ಎಂದು ಬೇಡಿಕೊಂಡ. ಆಗ ಜಮದಗ್ನಿಯು ನಾಲ್ವರು ಸೋದರರನ್ನು ಬದುಕಿಸಿಕೊಟ್ಟು ಮತ್ತೆ ಜಮದಗ್ನಿಯು 'ಮಗೂ, ಈಗಲಾದರೂ ನಿನಗಾಗಿ ಏನನ್ನಾದರೂ ಬೇಡಿಕೋ' ಎಂದಾಗ 'ಅಪ್ಪಾಜಿ, ನನಗೆ ನನ್ನ ತಾಯಿ ಬೇಕು. ದಯಮಾಡಿ ಬದುಕಿಸಿಕೊಡಿ' ಎಂದ. ಆಗ ಜಮದಗ್ನಿಯು 'ಮಗೂ ನಿನ್ನ ತಾಯಿಯ ರುಂಡವನ್ನು ಮುಂಡಕ್ಕೆ ಸೇರಿಸು ಬದುಕಿ ಬರುತ್ತಾಳೆ!' ಎಂದ.

ಬೆಳಗ್ಗೆ ಪ್ರಾರಂಭವಾದ ಈ ಪ್ರಸಂಗ ಪರಶುರಾಮ ವರ ಕೇಳುವ ಹೊತ್ತಿಗೆ ಮುಚ್ಚಂಜೆಯಾಗಿತ್ತು. ಪರಶುರಾಮನು ತನ್ನ ತಾಯಿಯನ್ನು ಬದುಕಿಸಿಕೊಳ್ಳುವ ಆತುರದಿಂದ ಮಬ್ಬುಗತ್ತಲೆಯಲ್ಲಿ ಕಣ್ತಪ್ಪಿನ ಕಾರಣ ರೇಣುಕೆಯ ತಲೆಯನ್ನು ಮಾತಂಗಿಯ ದೇಹಕ್ಕೂ ಮಾತಂಗಿಯ ತಲೆಯನ್ನು ರೇಣುಕೆಯ ದೇಹಕ್ಕೂ ಸೇರಿಸಿಬಿಟ್ಟ! ಪರಶುರಾಮನ ಈ ಅಚಾತುರ್ಯದಿಂದ ರೇಣುಕೆಯಂತೆ ಬೆಳ್ಳಗೆ ಮಾತ್ರವಿದ್ದ, ಮಾತಂಗಿಯಂತೆ ಕಪ್ಪಗೆ ಮಾತ್ರವಿದ್ದ, ಮಾನವರಲ್ಲಿ ಮಿಶ್ರ ವರ್ಣದೇಹಿಗಳುಂಟಾದರಂತೆ!

ಅದಿರಲಿ ಪರ್ವತದೆತ್ತರಕ್ಕೆ ರಾಶಿ ಬಿದ್ದಿದ್ದ ತಲೆಗಳನ್ನೆಲ್ಲ ಪರಶುರಾಮ ನೋಡಿದ. ಆಗ ಅವನು 'ಏಯ್ ತಲೆಗಳೇ ನೀವು ಆದಿಶಕ್ತಿ ಎಲ್ಲಮ್ಮದೇವಿಯ ತಲೆಗಳು. ಆದ್ದರಿಂದ

ನೀವು ಒಂದೊಂದು ತಲೆಯೂ ಒಂದೊಂದು ಗ್ರಾಮವನ್ನು ಸೇರಿಕೊಂಡು ಗ್ರಾಮದೇವತೆಯಾಗಿ ಪೂಜೆ ಪುರಸ್ಕಾರ ಪಡೆಯಿರಿ!' ಎಂದು ಹೇಳಿದ. ಪರಶುರಾಮ ಹಾಗೆಂದ ಕೂಡಲೇ ಒಂದೊಂದು ತಲೆಯೂ ಒಂದೊಂದು ಗ್ರಾಮದಲ್ಲಿ ನೆಲೆಸಿ ಗ್ರಾಮದೇವತೆಗಳೆನಿಸಿಕೊಂಡವು. ಈ ಕಾರಣದಿಂದ ಗ್ರಾಮದೇವತೆಗಳಿಗೆ ರುಂಡವಿದೆಯೇ ಹೊರತು ಮುಂಡವಿಲ್ಲ ! ಆದರೆ ಕೆಲವು ಜೈನ ಯಕ್ಷಿಗಳು ಜೈನಧರ್ಮ ಕ್ಷೀಣಿಸಿದ ಮೇಲೆ ಗ್ರಾಮದೇವತೆಗಳಾಗಿವೆ. ಇವುಗಳಿಗೆ ಸುಂದರ ವಿಗ್ರಹಗಳಿವೆ. ಅಲ್ಲದೆ ಇತ್ತೀಚೆಗೆ ಶಿಲ್ಪಿಗಳಿಂದ ಗ್ರಾಮದೇವತೆಗಳ ಸುಂದರ ವಿಗ್ರಹಗಳನ್ನು ಕೆತ್ತಿಸಿ ಪ್ರತಿಷ್ಠಾಪಿಸಿ ಆರಾಧಿಸುತ್ತಿದ್ದಾರೆ.

ಈ ಜಗತ್ಸೃಷ್ಟಿಗೆ ಮೂಲ ಕಾರಣವಾದುದು ಯಾವುದು? ಎಂದು ಕೇಳಿದರೆ ಅದಕ್ಕೆ ಮೂಲಶಕ್ತಿ ಅಥವಾ ಆದಿಶಕ್ತಿ ಕಾರಣ ಎನ್ನುತ್ತಾರೆ. ಆ ಆದಿಶಕ್ತಿಯನ್ನು ಸ್ತ್ರೀ ಎಂದು ಪರಿಭಾವಿಸುವುದರ ಮೂಲಕ ಅದನ್ನು ಮಾತೃದೇವತೆ ಎಂದಿದ್ದಾರೆ. ಅಖಿಲಾಂಡ ಕೋಟಿ ಬ್ರಹ್ಮಾಂಡವೆಲ್ಲ ಅವಳ ಶಕ್ತಿಯಿಂದ ರೂಪುಗೊಂಡಿರುವುದಾಗಿ ಹೇಳುತ್ತಾರೆ. ಸಕಲ ಜೀವಕೋಟಿಗಳಿಗೆ ಹಾಗೂ ಸಮಗ್ರ ಸಸ್ಯಾವಳಿಗಳಿಗೆಲ್ಲ ಆಧಾರ ಸ್ವರೂಪವಾಗಿರುವ ಭೂಮಿಯನ್ನು–ಬರೀ ಭೂಮಿಯಲ್ಲ–ಭೂಮಿತಾಯಿ ಎಂದು ಕರೆದಿದ್ದಾರೆ. ಹೀಗಾಗಿ ಭೂಮಿಯೇ ಮಾತೃದೇವತೆಯೆಂದು ಪರಿಗಣಿಸಲ್ಪಟ್ಟಿದೆ.

'ಹರಪ್ಪಾ ಸಂಸ್ಕೃತಿಯಲ್ಲಿ ಒಂದು ಕುತೂಹಲಕರವಾದ ಮುದ್ರೆಯು ಸಿಕ್ಕಿದ್ದು ಇದು ಕೃಷಿ ದೃಶ್ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಮುದ್ರಿಕೆಯಲ್ಲಿ ಒಂದು ಸ್ತ್ರೀ ವಿಗ್ರಹವಿದ್ದು ಆಕೆಯ ಗರ್ಭದಿಂದ ಒಂದು ಸಸ್ಯವು ಹುಟ್ಟುತ್ತಿರುವಂತೆ ಚಿತ್ರಿಸಲಾಗಿದೆ. ಇದರ ಇನ್ನೊಂದು ಬದಿಯಲ್ಲಿ ಸ್ತ್ರೀಪುರುಷರ ಚಿತ್ರಗಳಿವೆ. ಒಬ್ಬ ಮನುಷ್ಯನು ನೇಗಿಲಿನಂಥ ಆಯುಧವನ್ನು ಹಿಡಿದಿದ್ದಾನೆ. ಈ ಚಿತ್ರದಲ್ಲಿರುವ ಮನುಷ್ಯ ಉಳುಮೆ ಮಾಡುವ ರೈತನೆಂದು ಭಾವಿಸಲಾಗಿದೆ. ಗರ್ಭದಿಂದ ಸಸ್ಯವು ಹೊಮ್ಮುತ್ತಿರುವ ಸ್ತ್ರೀ ಚಿತ್ರವನ್ನು ಮಾತೃದೇವತೆಯೆಂದು ಹೇಳಲಾಗಿದೆ. ಈಕೆಯನ್ನು ಶಾಕಾಂಭರಿ ಎಂದು ಗುರುತಿಸುತ್ತಾರೆ. ಹೀಗೆ ಸಸ್ಯಸಂಬಂಧಿಯಾದ ದೇವತೆಯ ಮುದ್ರಿಕೆಯು ಹರಪ್ಪಾ ಸಂಸ್ಕೃತಿಯಲ್ಲೇ ದೊರಕಿದೆ. ಈ ಚಿತ್ರ ಒಂದು ಹೆಣ್ಣಿನದಾಗಿದ್ದು ಈಕೆ ಒಂದು ವೃಕ್ಷದ ಎರಡು ಕೊಂಬೆಗಳ ನಡುವೆ ನಿಂತಿದ್ದಾಳೆ. ಒಬ್ಬ ಭಕ್ತನು ಮರದ ಪಕ್ಕದಲ್ಲಿ ಬಾಗಿ ನಿಂತಿದ್ದಾನೆ. ಒಂದು ಮೇಕೆಯು ಭಕ್ತನ ಹಿಂದೆ ನಿಂತಿದೆ. ಇದರ ಕೆಳಭಾಗದಲ್ಲಿ ಏಳು ವಿಗ್ರಹಗಳನ್ನು ಕಾಣಬಹುದು. ಈ ಚಿತ್ರದ ಹೆಣ್ಣಿನ ವಿಗ್ರಹವನ್ನು ಮಾತೃದೇವತೆಯೆಂದು ಭಾವಿಸಲಾಗಿದೆ. ಏಳು ವಿಗ್ರಹಗಳು ಕಡಿಮೆ ದರ್ಜೆಯ ಏಳು ದೇವತೆಗಳೆಂದು ಭಾವಿಸಲಾಗಿದೆ. ಈ ಏಳು ದೇವತೆಗಳು ಮುಂದೆ ಬೆಳೆದ ಸಪ್ತಮಾತೃಕೆಯರ ಕಲ್ಪನೆಗೆ ಪುಷ್ಟಿಕೊಟ್ಟಿರಬಹುದು" (Macay E.J.H. Further Excavations of Mohen Jodaro- ಉದ್ಧೃತ: ಡಾ. ಸಿದ್ಧಲಿಂಗಯ್ಯ, 'ಗ್ರಾಮದೇವತೆಗಳು' ಅಂಕಿತ ಪುಸ್ತಕ, ಬೆಂಗಳೂರು, ಎ.ಮು.2005, ಪು. 22)

ಈ ಸೈಂಧವ ಸಂಸ್ಕೃತಿಯ ಮಾತೃದೇವತಾ ಆರಾಧನಾ ಪದ್ಧತಿಯು ವೈದಿಕ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿದುದರಿಂದ ಇದಕ್ಕೆ ವೈದಿಕ ಸಮ್ಮತಿಯೂ ದೊರೆತು ತಾಯಿ–ತಂದೆಯರಿಬ್ಬರೂ ಅಗತ್ಯವೆಂದು ಸಮನ್ವಯ ಮಾಡಲಾಯಿತು.

ಪುಲ್ಲಿಂಗಂ ಸರ್ವಮೀಶಾನಂ ಸ್ತ್ರೀಲಿಂಗಂ ವಿದ್ಧಿ ಚಾಪ್ಯುಮಾಂ।
ದ್ವಾಭ್ಯಾಂ ತುನುಭ್ಯಾಂ ವ್ಯಾಪ್ತಂ ಹಿ ಚರಾಚರಮಿದಂ ಜಗತ್॥
(ಮಹಾಭಾರತ, ಅನುಶಾಸನ ಪರ್ವ, 14, 235)

ಎಂಬುದಾಗಿ ಹೇಳಲಾಗಿದೆ ಆದರೆ ಮಾತೃಪ್ರಧಾನತೆಯು ತಾಂತ್ರಿಕ ಅಥವಾ ಶಾಕ್ತ ಸಂಪ್ರದಾಯದ ಮೂಲಾಧಾರವಾಗಿದ್ದು ಈ ಸಂಪ್ರದಾಯುವೂ ವೈದಿಕ ಸಂಪ್ರದಾಯಕ್ಕಿಂತಲೂ ಪ್ರಾಚೀನವಾದುದೆಂದು ತಿಳಿದುಬರುತ್ತದೆ.

'ಜಗತ್ ಶಕ್ತಿಮಯಂ ವಿದ್ಯಾತ್'
'ಶಕ್ತಿ ಪ್ರೇರಯಿತಾ ಶಿವ'

ಎಂಬುದು ಈ ಸಂಪ್ರದಾಯದ ಮುಖ್ಯ ನಿಲುವು. ಇದರಲ್ಲಿ ವೇದಬಾಹ್ಯವಾದ ರಾಜಸ ಪ್ರಧಾನವಾದ ಪದ್ಧತಿಯೂ ಶಕ್ತಿಯೇ ಶಿವನಿಗೂ ಕಾರಣವೆನ್ನುವುದು. ಇದರ ನೆಲೆ.

'ಶಕ್ತೇಃ ಪ್ರಾಧಾನ್ಯಂ ಸರ್ವದಾ ಪರಿಕೀರ್ತಿತಂ'
'ಸರ್ವೇಷಾಂ ಜಗತಾಮೇಷಾಂ ಮಾತಾ ಶಕ್ತಿಃ ಪಿತಾ ಶಿವಃ'

ವಾಸ್ತವವಾಗಿ ಇರುವುದು ಒಂದೇ ದೈವೀಶಕ್ತಿ. ಅದೆಂದರೆ ಬೆಂಕಿಯಲ್ಲಿ ಕಾವು ಹೇಗೋ ಹಾಗೆ, ಸೂರ್ಯನಲ್ಲಿ ಕಿರಣಗಳು ಹೇಗೋ ಹಾಗೆ, ಚಂದ್ರನಲ್ಲಿ ಬೆಳದಿಂಗಳು ಹೇಗೋ ಹಾಗೆ, ಶಿವನಿಗೆ ಶಕ್ತಿ ಸಹಜವಾದುದು. ಮಾರ್ಕಂಡೇಯ ಪುರಾಣದ 'ಸಪ್ತಶತೀ'ಯು ಈಕೆಯ ಪ್ರಭಾವವನ್ನು ವೈದಿಕ ಪುರಾಣದೊಳಕ್ಕೆ ಅಡಕ ಮಾಡಿಬಿಟ್ಟಿತು. ಇಲ್ಲಿ ಅವಳು ಸೌಮ್ಯರೂಪಿಣಿಯಾಗಿಯೂ ಅಂತೆಯೇ ರೌದ್ರರೂಪಿಣಿಯಾಗಿಯೂ ಕಾಣಿಸಿ ಕೊಳ್ಳಬಲ್ಲವಳೆಂದು ಹೇಳಿದೆ. ಅವಳು ವಿಶ್ವೇಶ್ವರಿ, ಜಗದ್ಧಾತ್ರಿ, ಸ್ಥಿತಿಸಂಹಾರಕಾರಿಣಿ. ಇಂಥ ಜಾನಪದ ಮೂಲದ ಶಕ್ತಿವಾದವು ಸಂಭಾವಿತ ಸಮಾಜವನ್ನು ಪ್ರವೇಶಿಸಿತು. ಈ ಸಂಭಾವಿತ ಸಮಾಜದವರು ವೈದಿಕ ಗಂಡು ದೇವತೆಗಳಿಗೆ ಹೆಣ್ಣುಗಳನ್ನು ಶಕ್ತಿಯರೆಂದು ಅಳವಡಿಸಿದರು. ಶಿವನಿಗೆ ಶಿವ, ವಿಷ್ಣುವಿಗೆ ಲಕ್ಷ್ಮಿ, ಬ್ರಹ್ಮನಿಗೆ ಸರಸ್ವತಿ, ಗಣಪತಿಗೆ ಪುಷ್ಟಿ, ಅನಂತನಿಗೆ ತುಷ್ಟಿ, ಕಾಲನಿಗೆ ರಾತ್ರಿ, ಸೂರ್ಯನಿಗೆ ಸಂಜ್ಞೆ, ಇಂದ್ರನಿಗೆ ಶಚಿ, ಅಗ್ನಿಗೆ ಸ್ವಾಹಾ ದಕ್ಷನಿಗೆ ದಕ್ಷಿಣೆ, ಸ್ಕಂಧನಿಗೆ ದೇವಸೇನೆ ಇತ್ಯಾದಿ (ವಿವರಗಳಿಗೆ ನೋಡಿ: ಎಸ್.ಕೆ. ರಾಮಚಂದ್ರರಾವ್, ಮೂರ್ತಿ ಶಿಲ್ಪ ನೆಲೆ – ಹಿನ್ನೆಲೆ ಬೆಂಗಳೂರು ವಿಶ್ವವಿದ್ಯಾನಿಲಯ, ಪು. 163)

ಬೃಹತ್ಸಂಹಿತೆಯ ವ್ಯಾಖ್ಯಾನಕಾರನಾದ ಉತ್ಪಲನು (ಬೃಹತ್ಸಂಹಿತೆ. 57.56)

ಸಪ್ತಮಾತೃಕೆಯರನ್ನು ಈ ನೆಲೆಯಲ್ಲಿ ಕಲ್ಪಿಸಿದ್ದಾನೆ.

ಬ್ರಹ್ಮ–ಬ್ರಾಹ್ಮಿ

ವಿಷ್ಣು–ವೈಷ್ಣವಿ

ರುದ್ರ–ರೌದ್ರಿ

ಕಾರ್ತಿಕೇಯ (ಕುಮಾರಸ್ವಾಮಿ) ಕೌಮಾರಿ

ಇಂದ್ರ–ಐಂದ್ರಿ (ಇಂದ್ರಾಣಿ)

ಯಮ–ಯಮಿ

ವರುಣ–ವಾರುಣಿ

ಕುಬೇರ–ಕುಬೇರಿ ಇತ್ಯಾದಿ

ಆದರೆ ಇತ್ತೀಚಿನ ಖಚಿತ ಸಪ್ತಮಾತೃಕೆಗಳೆಂದರೆ

> ಬ್ರಾಹ್ಮೀ ಮಾಹೇಶ್ವರೀ ಚೈವ ಕೌಮಾರೀ ವೈಷ್ಣವೀ ತಥಾ।
> ವಾರಾಹೀ ಚೈವ ಚೇಂದ್ರಾಣಿ ಚಾಮುಂಡಾ ಸಪ್ತ ಮಾತರಃ॥

ಪುರುಷದೇವತೆಗಳಿಗೆ ಅವರ ಹೆಸರಿನಿಂದಲೇ ಸ್ತ್ರೀದೇವತೆಗಳನ್ನೂ ಅವರಿಗೆ ಪುರುಷದೇವತೆಗಳ ವಾಹನಗಳನ್ನೂ ಕಲ್ಪಿಸಿರುವುದನ್ನು ನೋಡಬಹುದು.

ಬ್ರಹ್ಮ–ಬ್ರಾಹ್ಮಿ–ಹಂಸ

ಮಹೇಶ್ವರ–ಮಾಹೇಶ್ವರಿ–ವೃಷಭ

ಕುಮಾರಸ್ವಾಮಿ–ಕೌಮಾರಿ–ಮಯೂರ

ವಿಷ್ಣು–ವೈಷ್ಣವಿ–ಗರುಡ

ವರಾಹ (ವಿಷ್ಣುವಿನ ಒಂದು ಅವತಾರ)–ವಾರಾಹಿ–ಮಹಿಷ

ಇಂದ್ರ–ಇಂದ್ರಾಣಿ–ಆನೆ

ಸರ್ವದೇವತೆಗಳ ಶಕ್ತಿ–ಚಾಮುಂಡಿ–ಸಿಂಹ

ಈ ಏಳು ಜನ ಮಾತೃದೇವಿಯರನ್ನು ಏಕಶಿಲೆಯಲ್ಲಿ ಸಾಲಾಗಿರುವಂತೆ ಕಡೆದಿರುವುದೂ ಉಂಟು. ಈ ಎಲ್ಲರನ್ನೂ ಪ್ರತ್ಯೇಕ ಪ್ರತ್ಯೇಕ ವಿಗ್ರಹಗಳಾಗಿ ಕಡೆದಿರುವುದೂ ಉಂಟು. ಈ ಶಿಲ್ಪವ್ಯೂಹ ಪ್ರಾಚೀನ ದೇವಾಲಯಗಳಲ್ಲೆಲ್ಲ ಕಂಡುಬರುತ್ತದೆ.

ಸಪ್ತಮಾತೃಕೆಯರನ್ನು ಏಳೆಂದು ಹೇಳುವುದು ವಾಡಿಕೆಯಾದರೂ ಎಂಟು, ಒಂಬತ್ತು

ಹತ್ತು ಹದಿನಾರೆಂದು ಹೆಚ್ಚುತ್ತಾ ಹೋಗಿದೆ. ಹೀಗಾಗಿ ಆರ್ಯ ಸಂಸ್ಕೃತಿಯ ಪುರಸ್ಕರ್ತೃವಾದ ಬೋಪದೇವನು ಹಲವಾರು ಗ್ರಾಮದೇವತೆಗಳನ್ನು ಹೆಸರಿಸಿದ್ದಾನೆ. ಎಲ್ಲಮ್ಮ, ಅಣ್ಣಮ್ಮ, ಗಂಗಮ್ಮ, ಅಚ್ಚಮ್ಮ, ಅಂಚಮ್ಮ, ಸಿದ್ಧಮ್ಮ, ಬಂಗಾರಮ್ಮ, ಮಾರಮ್ಮ, ಮಲೆಯಮ್ಮ, ಚಂಗಲಮ್ಮ, ಗಳಗಳಮ್ಮ, ಮುದ್ದಾಲಮ್ಮ, ಪುಟ್ಟಮ್ಮ, ತಿಮ್ಮಮ್ಮ, ಉಡಿಸಲಮ್ಮ ಇತ್ಯಾದಿಗಳನ್ನು ಹೇಳಲಾಗಿದೆ. ಅಲ್ಲದೆ 'ಆಗಮಸ್ಮೃತಿಸಾರ'ದಲ್ಲಿ

ಬ್ರಾಹ್ಮಣಾನಾಂ ಶಿವೋ ದೇವಃ ಕ್ಷತ್ರಿಯಾಣಾಂ ತು ಮಾಧವಃ ॥
ವೈಶ್ಯಾನಾಂ ತು ಭವೇತ್ ಬ್ರಹ್ಮಾ ಶೂದ್ರಾಣಾಂ ಗ್ರಾಮದೇವತಾಃ ॥

(ಬ್ರಾಹ್ಮಣರಿಗೆ ಶಿವನು ದೇವರು, ಕ್ಷತ್ರಿಯರಿಗೆ ವಿಷ್ಣು, ವೈಶ್ಯರಿಗೆ ಬ್ರಹ್ಮ ಮತ್ತು ಶೂದ್ರರಿಗೆ ಗ್ರಾಮದೇವತೆಯರು)

ಏಕದೇವೋಪಾಸನೆಯಿಂದ ಬಹುದೇವೋಪಾಸನೆಯೆಡೆಗೆ ಪುರುಷದೇವತೆಗಳೊಡನೆ ಸ್ತ್ರೀದೇವತೆಗಳ ಕಡೆಗೆ ನಡೆದ ಆರಾಧನಾ ಪಥದಲ್ಲಿ ಪರಿವಾರ ದೇವತೆಗಳ ಜೊತೆಗೆ ಸಪ್ತಮಾತೃಕೆಯರ ಆರಾಧನೆಯೂ ಬಾದಾಮಿಯ ಚಾಲುಕ್ಯರ, ಗಂಗರ ಕಾಲದಲ್ಲಿ ವಿಜೃಂಭಿಸುತ್ತಿದ್ದು ಹೊಯ್ಸಳರ ಕಾಲಕ್ಕೆ ಕ್ಷೀಣಿಸಿದಂತೆ ಕಾಣುತ್ತದೆ. ವೈದಿಕ ಪರಂಪರೆಯ ಸಪ್ತಮಾತೃಕೆಯರಿಗೆ ಬದಲಾಗಿ ಜನಪದರ ಏಳು ಜನ ಮಾರಿಯರು ತಲೆಯೆತ್ತಿದಂತೆ ಕಾಣುತ್ತದೆ. ಈ ಏಳು ಜನ ಮಾರಿಯರಲ್ಲಿ ಯಾರೂ ವೈದಿಕ ಸಪ್ತಮಾತೃಕೆಯ ಹೆಸರಿನವರಿಲ್ಲ.

ಬೆಂಗಳೂರಿನ ಅಣ್ಣಮ್ಮ ಕೋಲಾರದ ಕೋಲಾರದಮ್ಮ ಮೂಡಿಗೆರೆ ತಾಲ್ಲೂಕಿನ ಅಂಗಡಿ ಗ್ರಾಮದಲ್ಲಿರುವ ವಾಸಂತಿಕಾ ದೇವಿಯರೆಲ್ಲರೂ ಸಪ್ತಮಾತೃಕೆಯರೆಂದೇ ಹೇಳುತ್ತಾರೆ. ಅಷ್ಟಮಾತೃಕೆಯರಿರುವಂತೆ ಚೌಷಷ್ಟಿಯೋಗಿನಿಯರಿದ್ದು ಮೂಗೂರಿನಲ್ಲಿರುವ ಒಂದು ನಗ್ನ ವಿಗ್ರಹವನ್ನು ಯೋಗಿನಿ ಎಂದು ಗುರುತಿಸಿದ್ದಾರೆ. ಈ ಸಪ್ತಮಾತೃಕೆಯರ ಬಲಗಡೆಯ ಮುಂಭಾಗದಲ್ಲಿ ಗಣಪತಿಯೂ ಎಡಮುಂಭಾಗದಲ್ಲಿ ಕಾಲಭೈರವ ಅಥವಾ ವೀರಭದ್ರನ ವಿಗ್ರಹಗಳಿವೆ.

ಶೃಂಗೇರಿಯ ಶ್ರೀ ಶಾರದಾದೇವಿಯ ರಥವು ಅಷ್ಟಕೋನಗಳಿಂದ ಕೂಡಿದ್ದು ಮುಖಭಾಗದಲ್ಲಿ ದೇವಿಯ ದರ್ಶನ ಮಾಡಿದರೆ, ಉಳಿದ ದಿಸೆಗಳಲ್ಲಿ ಸಪ್ತಮಾತೃಕೆಯರ ದರ್ಶನ ಪಡೆಯುತ್ತೇವೆ. ಈ ವೈದಿಕ ಸಪ್ತಮಾತೃಕೆಯರ ದೇವಾಲಯಗಳನ್ನು ಬ್ರಾಹ್ಮಣ ಅರ್ಚಕರು ನೋಡಿಕೊಳ್ಳುತ್ತಾರೆ. ಜನಪದ ದೇವತೆಗಳಿಗೆ ತಮ್ಮಡಿಗಳು ಎಂಬ ಹೆಸರಿನ ಬೇರೆ ಬೇರೆ ಶೂದ್ರ ಜನಾಂಗೀಯರು ಆರಾಧಕರಾಗಿದ್ದಾರೆ. ಇವುಗಳಿಗೆ ಪ್ರಾಣಿಬಲಿ ಇದ್ದು ಮಾಂಸ ನೈವೇದ್ಯವೂ ನಡೆಯುತ್ತದೆ.

ಗ್ರಾಮದೇವತೆಗಳು ಹೆಸರಿನಲ್ಲಿ ಹೇಳಿಕೊಳ್ಳುವಷ್ಟಲ್ಲವಾದರೂ ನಡೆದಿರುವ ಅಷ್ಟಿಷ್ಟು

ಕೆಲಸವನ್ನು ಅಲ್ಲಗಳೆಯಲಾಗುವುದಿಲ್ಲ. ಬಹುಶಃ ಪಾಶ್ಚಾತ್ಯ ವಿದ್ವಾಂಸರಿಂದಲೇ ಗ್ರಾಮದೇವತೆಗಳ ಅಧ್ಯಯನ ಯುಗ ಪ್ರಾರಂಭವಾಯಿತೆಂದು ಕಾಣುತ್ತದೆ. ಇದರ ಜೊತೆಜೊತೆಗೆ ನಮ್ಮ ವಿದ್ವಾಂಸರೂ ಸಾಕಷ್ಟು ಶ್ರಮಿಸಿದ್ದಾರೆ.

ಕರ್ನಾಟಕದ ಪರಿಮಿತಿಯಲ್ಲಿ ಹೇಳುವುದಾದರೆ 1921 ರಲ್ಲಿ Henry Whilehead ಎಂಬ ಪಾದ್ರಿ Village Gods of South India ಎಂಬ ಕೃತಿಯನ್ನು ಪ್ರಕಟಿಸಿದನು. ದಕ್ಷಿಣ ಕರ್ನಾಟಕದ ಬಹಳಷ್ಟು ಗ್ರಾಮದೇವತೆಗಳ ಪ್ರಸ್ತಾಪ ಈ ಕೃತಿಯಲ್ಲಿದೆ. ಆ ಅಂತರದಲ್ಲಿ ಒಂದು ಗ್ರಾಮದೇವತೆಯ ಅಧ್ಯಯನ ಎಂಬ ಅರಿವಿಲ್ಲದೆ, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಪಿ.ಸಿ. ವೀರಯ್ಯ ಎಂಬವರು 1926ರಲ್ಲಿ **'ಶ್ರೀ ಕನ್ನಂಬಾಡಿ ಅಮ್ಮನವರ ಸಂಕ್ಷಿಪ್ತ ಚರಿತ್ರೆ'** ಎಂಬ ಕಿರು ಹೊತ್ತಗೆಯನ್ನು ಪ್ರಕಟಿಸಿ ಆ ಮೂಲಕ ಕನ್ನಡದ ಆದ್ಯ ಜನಪದ ವಿದ್ವಾಂಸರು ಎನಿಸಿದರು. (ಇವರು ಅದೇ ಕಾಲದಲ್ಲಿ ನೀಲಗಾರರು ಹಾಡುವ ಪಿರಿಯಾಪಟ್ಟಣದ ಕಾಳಗ ಕೃತಿಯನ್ನು ಸಂಗ್ರಹಿಸಿದ್ದರು. ಅದು ಇತ್ತೀಚೆಗೆ ಪ್ರಕಟವಾಗಿದೆ). ಇದಾದ ಬಹಳ ವರ್ಷಗಳ ನಂತರ Wilbone Theodore Elmore ಎಂಬಾತ 1966 ರಲ್ಲಿ Dravidian Gods in Modern Hinduism ಎಂಬ ಕೃತಿಯನ್ನು ಪ್ರಕಟಿಸಿದನು. ಅನಂತರ 1970ರಲ್ಲಿ ಮಳಲಿ ವಸಂತಕುಮಾರ್ ಅವರ 'ಮಳಲಿಗಿಡ್ಡಮ್ಮ' 1971ರಲ್ಲಿ ಎನ್.ಎನ್. ಭಟ್ಟಾಚಾರ್ಯರ 'ಭಾರತೀಯ ಮಾತೃದೇವತೆಗಳು' 1972 ರಲ್ಲಿ ಪಿ.ಕೆ. ರಾಜಶೇಖರ ಅವರ 'ಬೆಟ್ಟದ ಚಾಮುಂಡಿ', ಶ್ರೀ ಮಹೇಶಚಂದ್ರ ಶ್ರೀ ವಾಸ್ತವ ಅವರ Mother Goddess in Indian Art, Archaeology and Literature, 1979ರಲ್ಲಿ ಹಿ.ಚಿ. ಬೋರಲಿಂಗಯ್ಯ ಅವರ 'ಉಜ್ಜನಿ ಚೌಡಮ್ಮ', 1981 ರಲ್ಲಿ ನಲ್ಲೂರು ಪ್ರಸಾದ್ ಅವರ 'ನಲ್ಲೂರು ದೊರೆಕಾಳಿ', 1983ರಲ್ಲಿ ಡಾ. ಚನ್ನಣ್ಣ, ಡಿ. ವಾಲೀಕಾರ ಅವರ ಪಿಎಚ್.ಡಿ. ಪ್ರಬಂಧ 'ಹೈದ್ರಾಬಾದ್ ಕರ್ನಾಟಕದ ಗ್ರಾಮದೇವತೆಗಳು', 1990ರಲ್ಲಿ ಎಸ್.ಕೆ. ರಾಮಚಂದ್ರರಾವ್ ಅವರ **'ಮೂರ್ತಿಶಿಲ್ಪ ನೆಲೆ ಹಿನ್ನೆಲೆ'** 2013 ರಲ್ಲಿ ಪಿ.ಕೆ. ರಾಜಶೇಖರ ಅವರ ಪಿರಿಯಾಪಟ್ಟಣದ ಶ್ರೀ ಮಸಣೀಕಮ್ಮ, 2019 ರಲ್ಲಿ **'ಪಿರಿಯಾಪಟ್ಟಣದ ಕನ್ನಂಬಾಡಿಯಮ್ಮ'** ಎಂಬೆಲ್ಲ ಕೃತಿಗಳು ಪ್ರಕಟವಾಗಿವೆ.

ಆದರೆ ಈ ಎಲ್ಲರೂ **'ಜನಪದ ದೇವತೆಗಳು'** (Folk Deity) ಎಂಬ ವ್ಯಾಪ್ತಿಯನ್ನು ಕಾಣದೆ ಕಣ್ಕಟ್ಟಿ ಹಾಕಿಕೊಂಡು ಗ್ರಾಮದೇವತೆಗಳನ್ನು ಮಾತ್ರ ಗಮನಿಸಿದ್ದರಿಂದ ಉಳಿದ ಹತ್ತಾರು ಬಗೆಯ ಜನಪದ ದೇವತೆಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲು ಸಾಧ್ಯವಾಗಿಲ್ಲ.

ಶ್ರೀ ನಗರ್ಲೆ ಶಿವಕುಮಾರ ಅವರು 'ಗ್ರಾಮದೇವತೆಗಳು' ಅಥವಾ ಸಪ್ತಮಾತೃಕೆಯರು

ಶೀರ್ಷಿಕೆಯ ಏಳು ಜನ ಗ್ರಾಮದೇವತೆಗಳನ್ನು ಕುರಿತ ಮೌಲಿಕವಾದ ಲೇಖನಗಳನ್ನು ಸಂಪಾದಿಸಿಕೊಟ್ಟು ಮಹದುಪಕಾರ ಮಾಡಿದ್ದಾರೆ. ಮೂಗೂರು ಚಿಗುರು ಕೃತಿಯಲ್ಲಿರುವ 'ಮೂಗೂರು ಶ್ರೀ ತಿಬ್ಬಾದೇವಿ' ಕ್ಯಾತನಹಳ್ಳಿ ಬಸವರಾಜು ಅವರ 'ಹದಿನಾರು ಶ್ರೀ ಚೌಡೇಶ್ವರಿ' ಕೆ.ಆರ್. ಷಣ್ಮುಖಸ್ವಾಮಿಯವರ 'ಸೋಸಲೆ ಶ್ರೀ ಹೊನ್ನಾದೇವಿ' ನಗರ್ಲೆ ಶಿವಕುಮಾರ ಅವರ 'ನಗರ್ಲೆ ಶ್ರೀ ಮಾಳಿಗೇಶ್ವರಿ (ಭ್ರಮರಾಂಬಿಕೆ)', ಕಳಲೆ ಗುರುಸ್ವಾಮಿಯವರ 'ಕಳಲೆ ಶ್ರೀ ಕೈವಲ್ಯಾದೇವಿ (ಕಲ್ಲಾದೇವಿ)' ರವಿಚಂದ್ರ ಹಂಚ್ಯಾ ಅವರ 'ಹಂಚ್ಯಾ ಶ್ರೀ ಲಕ್ಷ್ಮೀದೇವಿ (ನಂಚ್ಯಾತಿ, ನಂಚಿಕಾದೇವಿ)' ಪೂರಿಗಾಲಿ ಮರಡೇಶ್‌ಮೂರ್ತಿ ಅವರ 'ಅರಕೋಟ್ಲಾ ಶ್ರೀ ಕೋಟ್ಲಾದೇವಿ (ವಾರಾಹಿ)' ಎಂಬ ಏಳು ಗ್ರಾಮದೇವತೆಗಳನ್ನು ಕುರಿತ ಕ್ಷೇತ್ರ ಕಾರ್ಯಾಧಾರಿತ ಮಾಹಿತಿಗಳಿಂದ ಸಂಪನ್ನವಾದ ಸೊಗಸಾದ ಲೇಖನಗಳಿವೆ.

'ಮೂಗೂರು ತಿಬ್ಬಾದೇವಿ' ವಿಶೇಷವಾದ ವಿಸ್ಮಯಪೂರಿತ ವಿಚಾರಗಳಿಂದ ವಿಶಿಷ್ಟವೆನಿಸುತ್ತದೆ. ಏಕೆಂದರೆ ಮೂಗೂರು ತಿಬ್ಬಾದೇವಿಯನ್ನು ಕುರಿತ ಸ್ಥಳಪುರಾಣದೊಡನೆ ಒಡ್ಡಬಾಖಾನ್ ಎಂಬ ಮುಸ್ಲಿಂ ಪಾಳೇಗಾರನ ಇತಿಹಾಸ ಮಿಳಿತವಾಗಿರುವುದು ಅದ್ಭುತವೆನಿಸುತ್ತದೆ. ಶ್ರೀ ತ್ರಿಪುರಸುಂದರಿಯು ಮೂಕಾಸುರನನ್ನು ವಧಿಸಿದ ಸ್ಥಳಕ್ಕೆ ಮೂಗೂರು ಎಂದು ಹೆಸರಾಯಿತಂತೆ. ತ್ರಿಪುರಸುಂದರಿಯು ತಿಬ್ಬಾದೇವಿ ಎಂಬ ಹೆಸರಿನಿಂದ ತನ್ನ ಏಳು ಜನ ಸೋದರಿಯರೊಡನೆ ಮೂಗೂರಿನ ಹೊಸಳ್ಳಿಯಲ್ಲಿ ವಾಸವಾಗಿದ್ದಳಂತೆ.

ಹೀಗಿರುವಾಗ ಮೂಗೂರಿನ ಪಾಳೇಗಾರ ಒಡ್ಡಬಾಖಾನ್ ಪ್ರಯಾಣದ ಮಧ್ಯೆ ವಿಶ್ರಾಂತಿಗಾಗಿ ತಂಗಿರುವಾಗ ಅವನ ಕನಸಿನಲ್ಲಿ ಕಾಣಿಸಿಕೊಂಡ ತಿಬ್ಬಾದೇವಿಯು ತನಗೆ ಮೂಗೂರಿನಲ್ಲಿ ದೇವಾಲಯವನ್ನು ಕಟ್ಟಿಸುವಂತೆ ಹೇಳುತ್ತಾಳೆ. ಮೊದಮೊದಲು ಒಪ್ಪದಿದ್ದ ಖಾನನು ಕೆಲವು ಪವಾಡಗಳ ಕಾರಣದಿಂದ ಈಕೆ ಸತ್ಯದೇವತೆಯೇ ಸರಿ ಎಂದು ಒಪ್ಪಿ ಶರಣಾಗತನಾಗಿ ದೇವಾಲಯವನ್ನು ಕಟ್ಟಿಸುತ್ತಾನೆ. ತಿಬ್ಬಾದೇವಿಯ ಪರಮಭಕ್ತನಾದ ಖಾನನು ತಾನು ದೇವಿಯನ್ನು ಸದಾ ದರ್ಶನ ಮಾಡುತ್ತಿರಬೇಕು ಎಂಬ ಸದಾಶಯದಿಂದ ಗರ್ಭಗುಡಿಯ ಮುಂಭಾಗದ ಕಂಬದಲ್ಲಿ ತಾನು ಧ್ಯಾನಾಸಕ್ತನಾಗಿರುವ ಭಂಗಿಯ ಶಿಲ್ಪವನ್ನು ಕೆತ್ತಿಸಿಕೊಂಡಿದ್ದಾನೆ. ಇದು ಅವನ ಅನನ್ಯಭಕ್ತಿಯ ದ್ಯೋತಕವಾಗಿದೆ. ಅಲ್ಲದೆ ಈ ದೇವಾಲಯದ ರಚನೆ ಮುಸ್ಲಿಂ ಶೈಲಿಯ ಮಸೀದಿಯಂತಿದೆ. ಇವುಗಳ ಜೊತೆಗೆ ಮತ್ತೊಂದು ವಿಶೇಷವೆಂದರೆ ಈ ದೇವಾಲಯದಲ್ಲಿ ಬಲಗಡೆಯಿಂದ ಪ್ರದಕ್ಷಿಣೆ ಬರುವ ಬದಲು ಎಡಭಾಗದಿಂದ ಪ್ರದಕ್ಷಿಣೆ ಬರುವುದು ರೂಢಿಯಲ್ಲಿದೆ. ಇವೆಲ್ಲವನ್ನೂ ಮೀರಿಸುವ ದಿವ್ಯ ವಿಸ್ಮಯವೆಂದರೆ ಕತ್ತರಿಸಿದ ನೇರಳೆ ಮರದ ಕೊನೆ ಒಂದೇ ರಾತ್ರಿಯಲ್ಲಿ ಚಿಗುರುವುದು! ಇನ್ನೂ ಅನೇಕ ವೈಶಿಷ್ಟ್ಯಗಳ ಆಕರವಾಗಿರುವ

ತಿಬ್ಬಾದೇವಿಯ ಮಹಿಮೆಗಳು ಆಧುನಿಕರಿಗೆ ಆಕಾಶದೆತ್ತರದ ಸವಾಲುಗಳಾಗಿ ನಿಂತಿವೆ! ಏನಾದರಾಗಲಿ ಹಿಂದೂ-ಮುಸ್ಲಿಂ ಕೋಮು ಸೌಹಾರ್ದಕ್ಕೆ ಸಾಕ್ಷಿಯಾಗಿರುವ ಇದೊಂದು ಅಪರೂಪದ ಆದರ್ಶ ಮಾದರಿ!

'ಹದಿನಾರು ಚೌಡೇಶ್ವರಿ', ವಿಷಯ ಸಂಗ್ರಹ ಮತ್ತು ನಿರೂಪಣೆಯಲ್ಲಿ ಅಚ್ಚುಕಟ್ಟಾಗಿರುವ ಈ ಲೇಖನ ಈ ಸಂಕಲನದ ಒಂದು ಅತ್ಯುತ್ತಮ ಲೇಖನ. ಚೌಡೇಶ್ವರಿ ದೇವಾಲಯದ ಬಾಗಿಲು ಹಾಸನಾಂಬೆಯ ದೇವಾಲಯದ ರೀತಿಯಲ್ಲಿ ವರ್ಷಕ್ಕೊಂದಾವರ್ತಿ ತೆರೆದು ಹಬ್ಬ ಮುಗಿದ ಮಾರನೇ ದಿನ ಮುಚ್ಚಿಬಿಡುತ್ತಾರೆ. ಈ ದೇವಿಯ ಹುಲ್ಲಾಣಿ ಹಬ್ಬ, ಬಂಡಿಹಬ್ಬ, ಹೆಬ್ಬರೆ ಉತ್ಸವ, ವೀರಮಕ್ಕಳ ಕುಣಿತ, ಬಂಡಿಓಟ, ಕೊಂಡ ಹಾಯುವುದು ಇತ್ಯಾದಿ ಉತ್ಸವಗಳು ಹತ್ತು ದಿನಗಳ ಪರ್ಯಂತ ವೈಭವದಿಂದ ನಡೆಯುತ್ತವೆ. ಈ ಹತ್ತು ದಿನಗಳ ಉತ್ಸವಗಳನ್ನು ಕ್ಯಾತನಹಳ್ಳಿ ಬಸವರಾಜು ಅವರು ಕಣ್ಣಿಗೆ ಕಟ್ಟುವಂತೆ ಮೋಹಕವಾಗಿ ನಿರೂಪಿಸಿದ್ದಾರೆ. ಅವರ ಚಿತ್ರಕಶಕ್ತಿಯ ಜೊತೆಗೆ ಅವರು ವ್ಯಾಪಕವಾಗಿ ನಡೆಸಿರುವ ಕ್ಷೇತ್ರಕಾರ್ಯವೂ ಮೆಚ್ಚಾಗುತ್ತದೆ.

'ಸೋಸಲೆ ಹೊನ್ನಾದೇವಿಯನ್ನು ಕುರಿತ ಲೇಖನ ತ್ರಿಪುರದಹನದ ಕಥೆಯಿಂದ ಪ್ರಾರಂಭವಾಗಿರುವುದಲ್ಲದೆ ತ್ರಿಪುರವೇ ತಿರುಮಕೂಡಲು ಎಂದು ಸಾಧಿಸುವ ಯತ್ನ ಮಾಡಿದ್ದಾರೆ. ಶಿವನು ತ್ರಿಪುರಗಳನ್ನು ಆಳುತ್ತಿದ್ದ ತಾರಕಾಕ್ಷ, ವಿದ್ಯುನ್ಮಾಲಿ, ಕಮಲಾಕ್ಷರನ್ನು ಸಂಹರಿಸುವುದಕ್ಕಾಗಿ ಬಾಣ ಹೂಡಲು ಮಂಡಿಯೂರಿ ಕುಳಿತ ಸ್ಥಳವೇ ಮರಡಿಪುರವೆಂಬ ಐತಿಹ್ಯವನ್ನು ಹೇಳಿದ್ದಾರೆ. ಆದರೆ ಈ ಎರಡೂ ಐತಿಹ್ಯಗಳನ್ನೂ ಮೀರಿಸುವ 'ಸೋಸಲೆ' ಶಬ್ದ ನಿಷ್ಪತ್ತಿಗಿರುವುದನ್ನು ಹೇಳಿ ಬೆರಗು ಮೂಡಿಸಿದ್ದಾರೆ. ಅದೆಂದರೆ - ಶ್ರೀ ಶಂಕರಾಚಾರ್ಯರು ಈ ಸುತ್ತಿನಲ್ಲಿ ಪ್ರವಾಸದಲ್ಲಿರುವಾಗ ಈ ಪ್ರದೇಶವನ್ನು ದುಷ್ಟ ರಾಜನೊಬ್ಬ ಆಳುತ್ತಿದ್ದನಂತೆ. ಆ ದುಷ್ಟ ರಾಜನ ಕೋಟಲೆಯಿಂದ ತಮ್ಮನ್ನು ಪಾರುಮಾಡಲು ಪ್ರಜೆಗಳು ಶಂಕರಾಚಾರ್ಯರನ್ನು ಕೋರಿಕೊಂಡರಂತೆ. ಆಗ ಶಂಕರಾಚಾರ್ಯರು ಆಗತಾನೇ ಸತ್ತಿರುವವನ ಕಾಯವನ್ನು ಪ್ರವೇಶಿಸಿ ತಮ್ಮ ದೇಹವನ್ನು ರಕ್ಷಿಸಲು ಶಿಷ್ಯರಿಗೆ ಹೇಳಿ, ರಾಜನನ್ನು ಸಂಹರಿಸಲು ಅರಮನೆಯಲ್ಲಿ ಸಕಾಲಕ್ಕಾಗಿ ಕಾಯುತ್ತಿದ್ದರಂತೆ. ಇತ್ತಕಡೆ ಶಂಕರಾಚಾರ್ಯರ ದೇಹವನ್ನು ಕಾಯ್ದುಕೊಂಡಿದ್ದ ಶಿಷ್ಯರು ಇಷ್ಟು ದಿನಗಳಾದರೂ ಗುರುಗಳು ಬರಲಿಲ್ಲವಾದ್ದರಿಂದ ಅವರು ಬದುಕಿಲ್ಲವೆಂದು ಭಾವಿಸಿ ಅವರ ಶವವನ್ನು ನದಿಗೆ ಬಿಟ್ಟರಂತೆ. ಇತ್ತಕಡೆ ರಾಜನನ್ನು ಸಂಹರಿಸಿದ ಶಂಕರಾಚಾರ್ಯರು ಪರಕಾಯದಿಂದ ಹೊರಬಂದು ತಮ್ಮ ದೇಹ ನದಿಯಲ್ಲಿ ಸೇರಿಹೋಗಿರುವುದನ್ನು ಕಂಡುಕೊಂಡರು. ಅವರೇ ಈಗ ತಮ್ಮ ದೇಹವನ್ನು ನದಿಯೊಳಗೆಲ್ಲ ಸೋಸಿ ತೆಗೆದು ಆತ್ಮವನ್ನು ಕೂಡಿಸಿದರಂತೆ. ಆ ಕಾರಣದಿಂದ ದೇಹವನ್ನು ಶೋಧಿಸಿದ ಅಥವಾ ಸೋಸಿದ ಸ್ಥಳಕ್ಕೆ 'ಸೋಸಲೆ' ಎಂದು ಹೆಸರಾಯಿತಂತೆ! ಇಂಥ ಅನೇಕ ಮಾಹಿತಿಗಳಿಂದ

ಷಣ್ಮುಖಸ್ವಾಮಿಯವರ ಲೇಖನ ಓದುಗರ ಗಮನವನ್ನು ಸೆಳೆಯುತ್ತದೆ!

'ನಗರ್ಲೆ ಶ್ರೀ ಮಾಳಿಗೇಶ್ವರಿ' ಲೇಖನ ಶ್ರದ್ಧಾವಂತ ಕ್ಷೇತ್ರಕಾರ್ಯ, ಕರ್ತೃವಿನ ಉತ್ಸಾಹದ ಉತ್ತಮ ಲೇಖನವಾಗಿದೆ. ಮಾಳಿಗೇಶ್ವರಿಯನ್ನು ಲೇಖಕರು ಭ್ರಮರಾಂಬಿಕೆ ಎಂದೂ ಕರೆದಿದ್ದಾರೆ. ಈ ಹಬ್ಬದ ಜೊತೆಜೊತೆಯಲ್ಲೆ ಮನೆಯಮ್ಮ, ಉರಿಗಣ್ ಮಂಚಮ್ಮ, ದಂಡಿದೇವಮ್ಮ, ಪಟ್ಟಲದಮ್ಮ, ದಡದಲಿಂಗಪ್ಪ, ಈರಣ್ಣ ದೇವರುಗಳಿಗೆಲ್ಲ ವಾರವಿಡೀ ಪೂಜೆ ನಡೆಯುತ್ತದೆ. ಸಾರಣೆ, ಕಂಬ ನೆಡುವುದು, ಕೂಡಿ ಕಟ್ಟುವುದು (ಕೂಡಿ<ಕುಡಿ<ಗುಡಿ–ಧ್ವಜ?), ಬಾಯಿಬೀಗ, ಓಕುಳಿ, ಉರುಳುಸೇವೆ, ಸಿಡಿ, ಬಲಿ ಬೀಳುವುದು, ಕುಣಿಯಾಟ, ಮಡೆ, ಕೊಂಡ, ತೇರು, ಬೋನಗುಡಿಕೆ, ಈರಣ್ಣನ ಹಬ್ಬ – ಇವುಗಳ ಜೊತೆಗೆ ಆ ಊರಿನಲ್ಲಿರುವ ದಡದಲಿಂಗಪ್ಪ, ಈರಣ್ಣ, ಬಸವೇಶ್ವರ, ಪಾರ್ಶ್ವನಾಥ, ವೀರಗಲ್ಲುಗಳು, ಶಾಸನಗಳು – ಈ ಎಲ್ಲವನ್ನು ಸವಿವರವಾಗಿ ಹೇಳಿದ್ದಾರೆ. ಬಹುಶಃ ಇದು ಕ್ಷೇತ್ರಕಾರ್ಯ ಕರ್ತೃಗಳಿಗೆ ಒಂದು ಮಾದರಿಯಾಗಬಲ್ಲದು ಎಂದು ಭಾವಿಸಿದ್ದೇನೆ. ಆಧುನಿಕ ಮಾನವರ ಅಬ್ಬರದಲ್ಲಿ ಈ ಪಾರಂಪರಿಕ ಸಂಪತ್ತು ಅಡಗಿಹೋಗುವ ಮೊದಲೆ ಉಳಿಸಿಕೊಳ್ಳ ಬೇಕಾಗಿದೆ. ಇಂಥ ಮಹತ್ಕಾರ್ಯಕ್ಕೆ ಬೇಕಾದ ಅರ್ಹತೆ, ದಕ್ಷತೆ, ಕ್ಷಮತೆ, ವಿನಯ, ವಿದ್ವತ್ತು, ಉತ್ಸಾಹ ಶ್ರದ್ಧೆಗಳಿರುವ ನಗರ್ಲೆ ಶಿವಕುಮಾರ ಅವರು ದೊಡ್ಡ ಸಾಧನೆಗೆ ದಿಡ್ಡಿಬಾಗಿಲನ್ನು ತೆಗೆದು ಮುನ್ನುಗ್ಗುತ್ತಿದ್ದಾರೆ. ನಗರ್ಲೆಯ ಶ್ರೀ ಮಾಳಿಗೇಶ್ವರಿಯನ್ನೇ ಕುರಿತು ಸುದೀರ್ಘವಾದ ಸಮಗ್ರವಾದ ಅಧ್ಯಯನಶೀಲ ಶಿಸ್ತಿನ ಕೃತಿಯೊಂದನ್ನು ತರುವ ಅಗತ್ಯವಿದೆ. ಅವರ ಈ ಹೊಸ ಯೋಜನೆಗಳೆಲ್ಲ ಕೈಗೂಡಿ ಕನ್ನಡ ಜಾನಪದಕ್ಕೆ ಭಾರಿ ಕೊಡುಗೆಯೊಂದು ದಕ್ಕುವಂತಾಗಲೆಂದು ಹಾರೈಸುತ್ತೇನೆ.

'ಕಳಲೆ ಶ್ರೀ ಕೈವಲ್ಯಾದೇವಿ' (ಕಲ್ಲಾದೇವಿ) ಲೇಖನವು ಲವಣಾಸುರನೆಂಬ ರಾಕ್ಷಸನನ್ನು ಸಂಹರಿಸಲು ಕಪಿಲ ಮಹರ್ಷಿಗಳ ನಾಲಗೆಯಲ್ಲಿ ಉದ್ಭವವಾಗಿ ಬಂದವಳಂತೆ. ಕಳಲೆ ಅರಸರ ಆರಾಧ್ಯದೇವತೆಯಾಗಿದ್ದ ಇವಳ ಮೂಲ ವಿಗ್ರಹ ಬಿರುಕುಬಿಟ್ಟಿದ್ದರಿಂದ ಇತ್ತೀಚೆಗೆ ಸುಂದರ ಶಿಲಾಮೂರ್ತಿಯನ್ನು ಕೆತ್ತಿಸಿ ಪ್ರತಿಷ್ಠಾಪಿಸಿದ್ದಾರೆ ಎಂಬೆಲ್ಲ ವಿವರಗಳು ಉಪಯುಕ್ತ ಮಾಹಿತಿಗಳಾಗಿವೆ. ರವಿಚಂದ್ರ ಹಂಚ್ಯಾ ಅವರ 'ಹಂಚ್ಯಾ ಶ್ರೀ ಲಕ್ಷ್ಮೀದೇವಿ' (ನಂಚ್ಯಾಕ್ತಿ: ನಂಚಿಕಾದೇವಿ) ಎಂಬ ಲೇಖನವೂ ಸದುದ್ದೇಶಪೂರಿತ ಲೇಖನವಾಗಿದೆ. ಇಲ್ಲಿನ ದೇವತೆ ದಕ್ಷಿಣಾಭಿಮುಖವಾಗಿರುವುದು ಒಂದು ವಿಶೇಷ. ಚೋಳರ ಕಾಲದಲ್ಲಿ ಯುದ್ಧದ ಕಾರಣದಿಂದ ಬಂದಿದ್ದ ಸೈನಿಕರು ಈ ಗ್ರಾಮದಲ್ಲಿ ತಂಗಿದ್ದರಂತೆ. ಆಗ ಒಂದು ಹೆಂಚಿನ ಕೆಳಗೆ ಈ ದೇವಿಯ ಮೂರ್ತಿ ಕಂಡುಬಂದು ಆದನ್ನು 'ಹಂಚ್ಯದಮ್ಮ' ಎಂದೂ ಹೆಂಚಿನ ಕಾರಣದಿಂದ ಊರನ್ನು ಹಂಚ್ಯಾ ಎಂದು ಕರೆದುದಾಗಿಯೂ ತಿಳಿದು ಬರುತ್ತದೆ. ಈ ಊರಿನಲ್ಲಿ ಮಾರಮ್ಮ, ಸಿದ್ದಪ್ಪಾಜಿ, ಆಂಜನೇಯಸ್ವಾಮಿ,

ಸೋಮೇಶ್ವರ, ಹುಚ್ಚಮ್ಮ, ಸಾಕಿದೇವಮ್ಮ – ಎಂಬೆಲ್ಲ ದೇವರ ಗುಡಿಗಳಿವೆ. ಲಕ್ಷ್ಮೀದೇವಮ್ಮನ ಜಾತ್ರೆ ನಡೆದ ಎರಡನೆಯ ದಿನ ಮೂಗಮಾರಮ್ಮನಿಗೆ ತಂಬಿಟ್ಟಿನ ತಂಪು ನೀಡಿ ಅನಂತರ ಪ್ರಾಣಿಬಲಿಯು ನಡೆಯುತ್ತದೆ.

ಈ ಎಲ್ಲ ದೇವತೆಗಳಲ್ಲಿ 'ಅರಕೋಟ್ಲಾ ಶ್ರೀ ಕೋಟ್ಲಾದೇವಿ' (ವಾರಾಹಿ) ವೈದಿಕ ಸಂಪ್ರದಾಯದ ಸಪ್ತಮಾತೃಕೆಯಲ್ಲಿ ವಾರಾಹಿದೇವಿ. ನಂಜನಗೂಡು ತಾಲ್ಲೂಕು ನಗರ್ಲೆಯಲ್ಲಿರುವ 'ವಾರಾಹಿ'ಗೆ ಅರಕೋಟ್ಲಾ ಶ್ರೀ ಕೋಟ್ಲಾದೇವಿ ಎಂಬ ಹೆಸರು ಹೇಗೆ ಬಂತೋ ತಿಳಿಯದು. ಆದರೆ ವಾರಾಹಿಯನ್ನು ಕುರಿತ ವರ್ಣನೆ ಹೀಗಿದೆ.

> ಕೃಷ್ಣವರ್ಣಾ ತು ವಾರಾಹೀ ಮಹಿಷಸ್ಥಾ ಮಹೋದರೀ ।
> ವರಹಾ ದಂಡಿನೀ ಖಡ್ಗಂ ಬಿಭ್ರತೀ ದಕ್ಷಿಣೇ ಕರೇ
> ಖೇಟಪಾತ್ರಾಭಯಾನ್ವಾಮೇ ಸೂಕರಾಸ್ಯಾ ಲಸದ್ಭುಜಾ ॥

ಇದರ ಬಗೆಗೆ ತಲಸ್ಪರ್ಶೀ ಸಂಶೋಧನೆಯ ಅಗತ್ಯವಿದೆ.

ನಗರ್ಲೆ ಶಿವಕುಮಾರ ಅವರ 'ಗ್ರಾಮದೇವತೆಗಳು' ಕೃತಿಯು ಮಹತ್ವದ್ದಾಗಿದ್ದು ಶಿಷ್ಟ–ಜನಪದ ಪುರಾಣ ಕಥೆಗಳ ತೌಲನಿಕ ಅಧ್ಯಯನಕ್ಕೆ ಒಂದು ಆಕರ ಗ್ರಂಥವಾಗಿದೆ. ಧಾರ್ಮಿಕ ಶ್ರದ್ಧಾನುರಕ್ತರಿಗೆ ಪೂಜ್ಯ ಕೃತಿಯೆನಿಸಿದರೆ ಜಾನಪದ ಶಾಸ್ತ್ರಾಧ್ಯಯನಕಾರರಿಗೆ ಮಾರ್ಗದರ್ಶಿ ಕೃತಿಯಾಗಿದ್ದು ಶಿವಕುಮಾರ ಅವರ ಶ್ರಮ ಸಾರ್ಥಕವಾಗಿದೆ.

□

## ತತ್ವಪದ

ಸ್ಥಿರವಲ್ಲ ಕಾಯಾ ಸ್ಥಿರವಲ್ಲ
ಸ್ಥಿರ ಕಾಯುವ ನಂಬಲಿಬ್ಯಾಡಾ

ಮರಳಿ ಮರಳಿ ಬಹು ತೆರದಿ ಭವಕೆ ಬಂದು
ಸೊರಗಿ ಕೊರಗುವ ಈ ಕಾಯಾ

ಆತ್ಮ ವಿಚಾರವು ಆತ್ಮದೊಳಿರುತಿರೆ
ಆತ್ಮ ಪರಮಾತ್ಮನ ಪ್ರಮಾಣಿಸಿ ನೋಡದ

ಅಂದಿಗಿಂದಿಗಿ ಒಂದೇ ತಂದೆ ಗುರು ಗೋವಿಂದ
ಸುಂದರ ಶಿಶುನಾಳಧೀಶನ ಕಂದಾ

**– ಸಂತ ಶಿಶುನಾಳ ಶರೀಫ**

**ಕೃಪೆ: ತತ್ವ ಪದಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಕೃಷಿ ಸಂಶೋಧನೆಗಳ ಫಲಶ್ರುತಿಗಳ ಅವಲೋಕನ ಅಗತ್ಯ**

ದೇಶದಲ್ಲಿ ನಡೆಯುತ್ತಿರುವ ಕೃಷಿ ಸಂಶೋಧನೆಗಳ ಫಲಶ್ರುತಿಗಳನ್ನು ಅವಲೋಕನ ಮಾಡುವುದು ಅಗತ್ಯ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ನವೆಂಬರ್ 2ರಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕೃಷಿ ಜ್ಞಾನ ವೇದಿಕೆ ಆಯೋಜಿಸಿದ್ದ ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ ಅವರ 'ಕೃಷಿ ಲೋಕದೊಳಗೆ' ಹಾಗೂ 'ಪ್ಲಾಂಟ್ ಡಾಕ್ಟರ್' ಕೃತಿ ಬಿಡುಗಡೆ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಕೃಷಿಕ್ಷೇತ್ರದ ಸುಧಾರಣೆ ಸಂಬಂಧ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಅನೇಕ ಚರ್ಚೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ ಕೃಷಿ ಸಂಶೋಧನೆಗಳ ಫಲ ರೈತರಿಗೆ ಎಷ್ಟರಮಟ್ಟಿಗೆ ದೊರೆಯುತ್ತದೆ ಎಂಬುದನ್ನು ಪರಿಶೀಲಿಸಬೇಕು. ವಸಂತಕಮಾರ್ ತಿಮಕಾಪುರ ಓರ್ವ ನೈಜ ರೈತರಾಗಿದ್ದಾರೆ. ಮನೆಯಲ್ಲಿಯೇ ಪ್ರಯೋಗಾಲಯವನ್ನು ತೆರೆದು ಹೊಸ–ಹೊಸ ಸಂಶೋಧನೆಗಳನ್ನು ಮಾಡಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಏನಾದರು ಸಾಧಿಸಬೇಕು ಎನ್ನುವವರಿಗೆ ಅನುಕೂಲವಾಗುವಂತೆ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ರೈತರು ಹಲವಾರು ಸಮಸ್ಯೆ ಎದುರಿಸುತ್ತಿದ್ದಾರೆ. ಶ್ರಮದಿಂದ ಒಕ್ಕಲುತನ ಮಾಡಿ ಬೆಳೆ ಬೆಳೆದಿರುತ್ತಾರೆ. ಇನ್ನೇನು ಫಸಲು ತೆಗೆಯಬೇಕು ಎನ್ನುವಷ್ಟರಲ್ಲಿ ಪ್ರವಾಹ ಬಂದು ಬಿಡುತ್ತದೆ. ಉತ್ತರ ಕರ್ನಾಟಕದ ಪರಿಸ್ಥಿತಿ ನಮ್ಮೆದುರೇ ಇದೆ. ಇಡೀ ಫಸಲು ಕೊಚ್ಚಿ ಹೋಗುವ ಸಂದರ್ಭ ಬಂದಾಗ ರೈತರ ಪರಿಸ್ಥಿತಿ ಎಷ್ಟು ಕರುಣಾಜನಕವಾಗಿರುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು ಎಂದು ಹೇಳಿದರು.

ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಪ್ರಕಟಿಸಿರುವ ವಿಶ್ವದ ಅತ್ಯುನ್ನತ ವಿಜ್ಞಾನಿಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಪ್ರೊ. ಕೆ.ಎಸ್. ರಂಗಪ್ಪನವರನ್ನು ಸನ್ಮಾನಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕರಾದ ಶ್ರೀ ವಾಸುರವರು, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್‌ರವರು, ಹೈದರಾಬಾದ್‌ನ ಐಸಿಆರ್‌ಐ ಎಸ್‌ಎಟಿ ಉಪನಿರ್ದೇಶಕರಾದ ಡಾ. ಸಿ.ಎಲ್.

ಲಕ್ಷ್ಮೀಪತಿಗೌಡ, ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಆರ್. ಶಿವಪ್ಪ, ಗುಲ್ಬರ್ಗ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್.ಆರ್. ನಿರಂಜನ, ಜಿಲ್ಲಾ ಕಸಾಪ ಅಧ್ಯಕ್ಷರಾದ ಡಾ. ವೈ.ಡಿ. ರಾಜಣ್ಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯರಾದ ಶ್ರೀ ಗುಬ್ಬಿಗೂಡು ರಮೇಶ್ ಮೊದಲಾದವರು ಉಪಸ್ಥಿತರಿದ್ದರು

**ಜ್ಞಾನದ ಜೊತೆಗೆ ಕ್ರಿಯಾಶಕ್ತಿ ಹಾಗೂ ಮಾನವ ಪ್ರೀತಿ ಅಗತ್ಯ**

ಜ್ಞಾನದ ಜೊತೆಗೆ ಕ್ರಿಯಾಶಕ್ತಿ ಹಾಗೂ ಮಾನವ ಪ್ರೀತಿಯನ್ನು ಬೆಳೆಸಿಕೊಳ್ಳುವುದು ಅಗತ್ಯ ಎಂದು ಪ್ರೊ. ಮಲೆಯೂರು ಗುರುಸ್ವಾಮಿಯವರು ನವೆಂಬರ್ 2ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಏರ್ಪಡಿಸಿದ್ದ ಗದಗಿನ ಜಗದ್ಗುರು ಶ್ರೀ ಶಿವಾನಂದ ಬೃಹನ್ಮಠದ ನೂತನ ಜಗದ್ಗುರು ಶ್ರೀ ಸದಾಶಿವಾನಂದ ಸ್ವಾಮಿಗಳವರ ಅಭಿನಂದನ ಸಮಾರಂಭದಲ್ಲಿ ಅಭಿನಂದನ ನುಡಿಗಳನ್ನಾಡುತ್ತಾ ತಿಳಿಸಿದರು. ಕೈವಲ್ಯಾನಂದರು ಈಗ ಶ್ರೀ ಸದಾಶಿವಾನಂದ ಸ್ವಾಮಿಗಳಾಗಿದ್ದಾರೆ, ಜಗದ್ಗುರು ಸ್ಥಾನವನ್ನಲಂಕರಿಸಿದ್ದಾರೆ. ಇದೀಗ ನ್ಯಾಯಾಧೀಶರ ಪೀಠವನ್ನು ಅಲಂಕರಿಸಿದ್ದು, ಎಲ್ಲ ಬಗೆಯ ವಾಗ್ವಾದಗಳನ್ನು ಮೀರಿದ ಜೊತೆಗೆ ಮಾನವಪ್ರೀತಿ, ಜ್ಞಾನದ ಜೊತೆಗೆ ಕ್ರಿಯಾಶಕ್ತಿಯನ್ನು ಬೆಳೆಸಿಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಪರಮಪೂಜ್ಯ ಜಗದ್ಗುರುಗಳು ಗದಗಿನ ಶಿವಾನಂದ ಶ್ರೀಗಳು ಅಪರೂಪದ ಸಂತರು. ಶಿವಾನಂದ ಶ್ರೀಗಳು, ಹುಬ್ಬಳ್ಳಿಯ ಸಿದ್ಧಾರೂಢರು ಹಾಗೂ ಗದಗದ ಮಡಿವಾಳಪ್ಪನವರು ಸಮಕಾಲೀನರು. ಸಾಧನೆಯ ಮಾರ್ಗ ಬೇರೆ ಬೇರೆಯಾದರೂ ಅವರ ಸಾಧನೆ–ಸಿದ್ಧಿಗಳು ಮಹತ್ತರವಾದುವು. ಶ್ರೀ ಸದಾಶಿವಾನಂದ ಸ್ವಾಮಿಗಳು ಶ್ರೀ ಸಿದ್ಧೇಶ್ವರ ಸ್ವಾಮಿಗಳವರ ಆತ್ಮೀಯ ವಲಯದ ಸಾಧಕರು. ಅಧ್ಯಯನದಲ್ಲಿ ಆಸಕ್ತಿ, ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಮತ್ತು ಸಮರ್ಥ ಅಭಿವ್ಯಕ್ತಿಯ ಶಕ್ತಿ ಅವರಿಗಿದೆ. ಅವರು ಸ್ವಇಚ್ಛೆಯಿಂದ ಸನ್ಯಾಸ ಸ್ವೀಕರಿಸಿರುವವರು. ಅಧ್ಯಯನದ ಆಸಕ್ತಿಯಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪ್ರವೇಶ ಪಡೆದರು. ಗದಗಿನ ಶಿವಾನಂದ ಮಠದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಮುಗ್ಧತೆಯನ್ನು ಹೊಂದಿರುವವರು. ಶ್ರೀಮಠದ ಬಗೆಗೆ ಅಪಾರ ಭಕ್ತಿ ಗೌರವಗಳನ್ನು ಹೊಂದಿದವರು. ಸ್ವಾಮಿಗಳಾದವರು ಸದಾ ಎಚ್ಚರಿಕೆಯಿಂದ ಜೀವನ ಸವೆಸಬೇಕು. ಆಚಾರ–ವಿಚಾರಗಳಲ್ಲಿ ಸಮನ್ವಯತೆ ಕಾಯ್ದುಕೊಳ್ಳಬೇಕು. ಸದಾಶಿವಾನಂದ ಸ್ವಾಮಿಗಳು ವಾಗ್ಮಿಗಳು, ಚಿಂತಕರು, ವಿಚಾರವಂತರು. ವಿದ್ಯಾರ್ಥಿ ದೆಸೆಯಿಂದಲೂ ಆಚಾರ ನಿಷ್ಠೆಯನ್ನು ಬೆಳೆಸಿಕೊಂಡು ಬಂದವರು. ಇವರ ಮಾರ್ಗದರ್ಶನ ದಲ್ಲಿ ಶ್ರೀಮಠ ಶ್ರೇಯೋಮಾರ್ಗದಲ್ಲಿ ಮುನ್ನಡೆಯಲಿ ಎಂದು ಪೂಜ್ಯರು ಶುಭ ಹಾರೈಸಿದರು.

ಪ್ರೊ. ಕೆ. ಅನಂತರಾಮುರವರು ಸದಾಶಿವಾನಂದ ಸ್ವಾಮಿಗಳು ಪ್ರಾಚೀನ

ಗ್ರಂಥಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದಾರೆ. ಸರ್ವಶಕ್ತಿ ಸಂಪನ್ನರು. ಮೈಸೂರಿನ ಜ್ಞಾನ-ಕರ್ಮಗಳ ಸುಗಂಧ ಪರಿಮಳವನ್ನು ಉತ್ತರ ಕರ್ನಾಟಕದಲ್ಲಿ ನಿರಂತರ ಪಸರಿಸಲಿ ಎಂದು ಹೇಳಿದರು.

ಪ್ರೊ. ನೀಲಗಿರಿ ಎಂ. ತಳವಾರರವರು ಮಾತನಾಡಿ, ಪೂಜ್ಯರು ಸಮಾಜವನ್ನು ಮುನ್ನಡೆಸಿಕೊಂಡು ಹೋಗುವ ಭರವಸೆ ನಮ್ಮೆಲ್ಲರಿಗಿದೆ ಎಂದು ಹೇಳಿದರು.

ಕುಂದೂರು ಮಠದ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು, ಇದೊಂದು ಬಹಳ ವಿಶೇಷವಾದ ಕಾರ್ಯಕ್ರಮ. ಶ್ರೀ ಸದಾಶಿವ ಸ್ವಾಮಿಗಳು ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳವರ ಆತ್ಮೀಯ ವಲಯದಲ್ಲಿ ಒಬ್ಬರಾಗಿದ್ದರು. ವಚನಗಳಲ್ಲಿರುವ ಸಂಸ್ಕೃತೋಕ್ತಿಗಳನ್ನು ಗುರುತಿಸುವ ಸಂದರ್ಭದಲ್ಲಿ ಅತ್ಯಂತ ತಾಳ್ಮೆಯಿಂದ ಅವರೊಡನೆ ತೊಡಗಿಸಿಕೊಂಡಿದ್ದರು ಎಂದರು.

ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್‌ರವರು ಸದಾಶಿವಾನಂದ ಮಹಾಸ್ವಾಮಿಗಳು ಸಿದ್ಧೇಶ್ವರ ಸ್ವಾಮೀಜಿಯವರಿಗೆ ಮತ್ತು ನಮಗೆ ಸಂಪರ್ಕ ಸೇತುವೆಯಂತಿದ್ದಾರೆ ಎಂದು ತಿಳಿಸಿದರು.

ಶ್ರೀ ಸದಾಶಿವಾನಂದ ಸ್ವಾಮಿಗಳು ಮೈಸೂರು ಶಿಕ್ಷಣದ ಕಾಶಿ ಇದ್ದಂತೆ. ಶ್ರೀ ಸುತ್ತೂರು ಮಠ ನನ್ನ ತವರುಮನೆ. ಸಾವಿರಾರು ವರ್ಷಗಳ ಪರಂಪರೆಯಿರುವ ಮಠ ಇದು. ಇಲ್ಲಿ ಕಳೆದಿರುವ ಸ್ಮರಣೀಯ ನೆನಪುಗಳು ಜೀವನದಲ್ಲಿ ಎಂದಿಗೂ ಮರೆಯಲಾರದವು. ಯಾವುದೇ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವುದೇ ಸುತ್ತೂರು ಜಗದ್ಗುರುಗಳ ಜೀವನದ ಸಂದೇಶ. ಪಟ್ಟಾಧಿಕಾರಕ್ಕೆ ಗುರುಗಳನ್ನು ಆಹ್ವಾನಿಸಲು ಆಗಲಿಲ್ಲ. ಆದರೆ ಇಂದು ಮರು ಪಟ್ಟಾಧಿಕಾರ ಕಾರ್ಯಕ್ರಮವನ್ನೇ ಇಲ್ಲಿ ನೆರವೇರಿಸಿದ್ದಾರೆ. ಧರ್ಮಗಳ ಪ್ರತ್ಯೇಕತೆಯ ಹೋರಾಟ ಆಳವಾದ ಅಧ್ಯಯನ ಮಾಡಿದರೆ ಮರೆಯಾಗಿ ಹೋಗುತ್ತದೆ ಎಂದು ಕುಂದೂರು ಮಠದ ಇಮ್ಮಡಿ ಶಿವಬಸವ ಸ್ವಾಮಿಗಳೊಡನೆ ಆಳವಾಗಿ ಅಧ್ಯಯನ ಮಾಡಿದ ಸಂದರ್ಭದಲ್ಲಿ ಕಲಿತದ್ದನ್ನು ಸ್ಮರಿಸಿದರು.

ಕನಕಪುರ ಶ್ರೀ ದೇಗುಲಮಠ, ಹರವೆ, ನೀಲಕಂಠಸ್ವಾಮಿಮಠ, ದಂಡಿಕೆರೆ ಮಠಗಳ ಶ್ರೀಗಳು, ಶ್ರೀ ಎಸ್.ಪಿ. ಮಂಜುನಾಥ್, ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ಆರ್.ಎಸ್. ಪೂರ್ಣಾನಂದ, ಮಹಾಸಭಾದ ಜಿಲ್ಲಾ ಅಧ್ಯಕ್ಷರಾದ ಶ್ರೀ ಶಿವಮೂರ್ತಿ ಕಾನ್ಯ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಎಂ.ಜಿ. ಸುರೇಶ್ ಪ್ರಾರ್ಥಿಸಿದರು. ಶ್ರೀ ಜಯರಾಜೇಂದ್ರರು ಸ್ವಾಗತಿಸಿದರು. ಆಲಮಟ್ಟಿ ಡಾ. ಶ್ರೀ ರುದ್ರಮುನಿ ದೇವರು ವಂದಿಸಿದರು. ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಶ್ರೀ ಎಂ. ಚಂದ್ರಶೇಖರ್ ನಿರೂಪಿಸಿದರು.

**ಸಂಸ್ಕೃತ ಮತ್ತು ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳು**

ಸಂಸ್ಕೃತ ಮತ್ತು ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳು, ಅವುಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು.

ಪೂಜ್ಯರು ನವೆಂಬರ್ 6ರಂದು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಏರ್ಪಡಿಸಿದ್ದ 'ಸಂಸ್ಕೃತ–ಸಂಸ್ಕೃತಿ' ಉಪನ್ಯಾಸಮಾಲೆಯ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಭಾಷೆ ಮನುಷ್ಯನ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗುತ್ತದೆ. ಮ್ಯಾಕ್ಸ್‌ಮುಲ್ಲರ್ ಭಾರತವನ್ನು ಕುರಿತು ದೇಶ ನಾಶವಾದರೆ ಅದಕ್ಕೂ ಮೊದಲು ಇಡೀ ಜಗತ್ತೇ ನಾಶವಾಗುತ್ತದೆ ಎಂದಿದ್ದಾರೆ. ಅಂದರೆ ಭಾರತ ದೇಶ ನಾಶವಾಗಲು ಸಾಧ್ಯವಿಲ್ಲ ಎಂಬುದನ್ನು ಅರ್ಥೈಸಿಕೊಳ್ಳಬೇಕಿದೆ. ನೆಹರುರವರು ಸಂಸ್ಕೃತ ಭಾಷೆ ಮತ್ತು ಅದರ ವಾಙ್ಮಯವನ್ನು ನಮ್ಮ ದೇಶದ ಅಮೂಲ್ಯ ಖಜಾನೆ ಎಂದಿದ್ದಾರೆ. ಸಂಸ್ಕೃತ ತನ್ನೊಳಗೆ ಎಲ್ಲವನ್ನು ಗರ್ಭೀಕರಿಸಿಕೊಂಡಿದೆ. ಕಬ್ಬನ್ನು ನೇರವಾಗಿ ಆಸ್ವಾದಿಸುವುದು ಪ್ರಕೃತಿ. ಅದನ್ನು ರಸಮಾಡಿ ಸೇವಿಸುವುದು ಸಂಸ್ಕೃತಿಯಾಗುತ್ತದೆ. ಶರಣರ ವಚನಗಳಲ್ಲಿ ಸಂಸ್ಕೃತ ವಿಶೇಷವಾಗಿ ಬಳಕೆಯಾಗಿದೆ. ನಮ್ಮ ದೇಶದ 'ಸರ್ವೇ ಜನಾ ಸುಖಿನೋ ಭವಂತು' ಎನ್ನುವಂತಹ ಅನೇಕ ಸಾತ್ವಿಕ ಸಂದೇಶಗಳು ಜಗತ್ತಿಗೆ ಕೊಟ್ಟ ಅಪರೂಪದ ಕಾಣಿಕೆಗಳು. ಜಗತ್ತಿನಲ್ಲಿ ಯಾರೂ ದುಃಖಿತರಾಗಬಾರದು ಎನ್ನುವ ಸಂದೇಶ ಭಾರತದಲ್ಲಿ ಮಾತ್ರ ಕಾಣಲು ಸಾಧ್ಯ. ನಮ್ಮ ದೇಶದ ಮಹಾಕಾವ್ಯಗಳು, ಉಪನಿಷತ್ತುಗಳು, ದರ್ಶನಗಳು ಜಗತ್ತಿಗೆ ಸಾರ್ವಕಾಲಿಕವಾದ ಸತ್ಯವನ್ನೇ ನೀಡುವಂಥವು. ಕಂಪ್ಯೂಟರ್‌ಗೆ ಅತ್ಯಂತ ಸುಲಭವಾಗಿ ಅಳವಡಿಸಬಹುದಾದ ಭಾಷೆ ಸಂಸ್ಕೃತ ಎಂಬುದನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಅಪೂರ್ವ ಮತ್ತು ವಿಶಿಷ್ಟವಾದ ಸಾಹಿತ್ಯವನ್ನು ಸಂಸ್ಕೃತ ಒಳಗೊಂಡಿದೆ. ಸುತ್ತೂರು ಶ್ರೀಕ್ಷೇತ್ರದ ಶಾಲೆಯಲ್ಲಿ ಪ್ರತಿನಿತ್ಯದ ಪ್ರಾರ್ಥನೆಯಲ್ಲಿ ವಚನಗಳ ಜೊತೆಗೆ ಉಪನಿಷತ್ತಿನ ಮಂತ್ರಗಳು ಹಾಗೂ ಭಗವದ್ಗೀತೆಯ ಶ್ಲೋಕಗಳನ್ನು ಪಠಿಸಲು ಮತ್ತು ಸಂಸ್ಕೃತ ಹಾಗೂ ವೇದಾಧ್ಯಯನಕ್ಕೂ ಅವಕಾಶ ನೀಡಲಾಗಿದೆ. ಭಾರತೀಯ ಸಂಸ್ಕೃತಿಯ ಕುರಿತು ವಿಶೇಷವಾದ ಪಠ್ಯವನ್ನು ರಚಿಸಿ ಬೋಧಿಸಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಸದಸ್ಯರಾದ ಶ್ರೀ ಟಿ.ಎನ್. ಪ್ರಭಾಕರ್‌ರವರು ಸಂಸ್ಕೃತ ಸಂಸ್ಕಾರಯುತ ಭಾಷೆ. ವ್ಯಕ್ತಿಯಲ್ಲಿರುವ ದೋಷಗಳನ್ನು ದೂರಮಾಡಿ ಉತ್ತಮವಾದ ವಿಚಾರಗಳನ್ನು ತುಂಬುವುದಕ್ಕೆ ಸಂಸ್ಕಾರ ಎನ್ನಲಾಗುತ್ತದೆ. ಸಂಸ್ಕಾರದಿಂದ ಹುಟ್ಟುವ ಜ್ಞಾನವೇ ಸ್ಮೃತಿ. ಸಂಸ್ಕಾರಯುತವಾದ ಮಾತುಗಳಿಂದಲೇ ವ್ಯಕ್ತಿ ಪವಿತ್ರನಾಗುತ್ತಾನೆ ಎಂದು ಕವಿ ಕಾಳಿದಾಸ ಹೇಳುತ್ತಾನೆ. ವಾಲ್ಮೀಕಿ ಸಂಸ್ಕಾರದಿಂದ ಹೀನವಾದ ಮಾತು ಅರ್ಥಾಂತರವಾಗುತ್ತದೆ ಎನ್ನುತ್ತಾರೆ. ಎಲ್ಲ ಭಾಷೆಗಳಿಗೂ ಸಂಸ್ಕೃತ

ಭಾಷೆ ಸಾಮ್ರಾಜ್ಞಿ, ವ್ಯಾಕರಣ, ಅಲಂಕಾರ, ಶಬ್ದ ಸಂಪತ್ತನ್ನು ನಿರಂತರವಾಗಿ ಧಾರೆ ಎರೆಯುತ್ತಿದೆ. ಭಾಷೆ ಕೇವಲ ಸಂವಹನಕ್ಕಲ್ಲ. ಅದು ಶ್ರೇಷ್ಠವಾದ ಮೌಲ್ಯ, ಪರಂಪರೆ ಮತ್ತು ದರ್ಶನವನ್ನು ಕೊಟ್ಟಿವೆ. ಈ ದೃಷ್ಟಿಯಲ್ಲಿ ವರ್ತಮಾನದ ಸಂದರ್ಭದಲ್ಲಿ ಸಂಸ್ಕೃತವನ್ನು ಜಗತ್ತಿನ ವಿಸ್ಮಯ ಎನ್ನಲಾಗುತ್ತಿದೆ. ವಿದೇಶಿಗರು ಐಎಎಸ್‌ಎಸ್ ಎಂಬ ಸಂಸ್ಕೃತ ಸಂಸ್ಥೆಯನ್ನು ಪ್ರಾರಂಭಿಸಿ ಅದನ್ನು ಪೋಷಿಸುವ ಕಾರ್ಯವನ್ನು ಮಾಡುತ್ತಿದ್ದಾರೆ. ಸರ್. ವಿಲಿಯಂ ಜೋನ್ಸ್ ಸಂಸ್ಕೃತದ ಕುರಿತು ಇದು ಗ್ರೀಕ್ ಭಾಷೆಗಿಂತಲೂ ಸಮಗ್ರವಾದುದು ಹಾಗೂ ಲ್ಯಾಟಿನ್‌ಗಿಂತಲೂ ಸಮೃದ್ಧವಾದುದು ಎನ್ನುತ್ತಾರೆ. ಭಾರತದ ಶಾಲಾ–ಕಾಲೇಜುಗಳಲ್ಲಿ ಸಂಸ್ಕೃತವನ್ನು ಬೋಧಿಸುವುದು ನಮ್ಮ ಸಂಸ್ಕೃತಿ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ವೈಜ್ಞಾನಿಕ ಪರಿಭಾಷೆಯನ್ನು ಹೊಂದಿರುವ ಸಂಸ್ಕೃತದಿಂದ ಕಾವ್ಯಾತ್ಮಕವಾದ ಧ್ವನಿತರಂಗಗಳು ಹೊರಹೊಮ್ಮುತ್ತವೆ ಎಂದು ತಿಳಿಸಿದರು.

ವಿದ್ವಾಂಸರಾದ ಶ್ರೀ ಎಚ್.ವಿ. ನಾಗರಾಜರಾವ್‌ರವರು, ಪ್ರೊ. ಕೆ. ಅನಂತರಾಮುರವರು, ಕುಲಪತಿಗಳಾದ ಡಾ. ಕೆ.ಇ. ದೇವನಾಥನ್‌ರವರು ಉಪನ್ಯಾಸ ನೀಡಿದರು.

ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರಾದ ಡಾ. ಪ್ರಕಾಶ್ ಆರ್. ಪಾಗೋಜಿಯವರು ಸ್ವಾಗತಿಸಿ, ಅತಿಥಿಗಳ ಪರಿಚಯ ಮಾಡಿಕೊಟ್ಟರು. ಭಾಷಾ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಕೆ. ರಾಮಕೃಷ್ಣ ಭಟ್‌ರವರು ಆನ್‌ಲೈನ್‌ನಲ್ಲಿ ಕಾರ್ಯಕ್ರಮ ನಿರೂಪಣೆ ಮಾಡಿದರು. ಕುಲಸಚಿವರಾದ ಡಾ. ವೀರನಾರಾಯಣ ಪಾಂಡುರಂಗಿ, ವಿಶ್ರಾಂತ ಕುಲಪತಿಗಳಾದ ಡಾ. ಪದ್ಮಾ ಶೇಖರ್, ಸಹಾಯಕ ಪ್ರಾಧ್ಯಾಪಕರಾದ ಡಾ. ಶರತ್‌ಚಂದ್ರ ಸ್ವಾಮಿಗಳು, ಸಹಾಯಕ ಕುಲಸಚಿವರಾದ ಶ್ರೀ ವೆಂಕಟೇಶ್ ಮೊದಲಾದವರು ಉಪಸ್ಥಿತರಿದ್ದರು.

**ಬರವಣಿಗೆಯಲ್ಲಿ ಕ್ರಿಯಾಶೀಲತೆಗಿಂತ ಓದುಗರ ವಿಶ್ವಾಸಾರ್ಹತೆ ಮುಖ್ಯ**

ಬರವಣಿಗೆಯಲ್ಲಿ ಕ್ರಿಯಾಶೀಲತೆಗಿಂತ ಓದುಗರ ವಿಶ್ವಾಸಾರ್ಹತೆಯನ್ನು ಗಳಿಸುವುದು ಮುಖ್ಯ ಎಂದು ಪ್ರೊ. ಕೃಷ್ಣೇಗೌಡರವರು ನವೆಂಬರ್ 7ರಂದು ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಏರ್ಪಡಿಸಿದ್ದ ಶ್ರೀ ಎಸ್. ಷಡಕ್ಷರಿಯವರ 'ಕ್ಷಣ ಹೊತ್ತು ಅಣಿ ಮುತ್ತು ಭಾಗ–8 ಕೃತಿ' ಲೋಕಾರ್ಪಣೆ ಸಮಾರಂಭದಲ್ಲಿ ತಿಳಿಸಿದರು. ಕ್ರೂರಿ ದೊರೆಯನ್ನು ಮನುಷ್ಯನನ್ನಾಗಿ ಪರಿವರ್ತಿಸಿದ ಅರೇಬಿಯನ್ ನೈಟ್ಸ್ ಕಥೆಗಳ ರೂಪದಲ್ಲಿ ಷಡಕ್ಷರಿಯವರ 'ಕ್ಷಣ ಹೊತ್ತು ಅಣಿ ಮುತ್ತು' ಕೃತಿಗಳ ಸರಣಿ ಪ್ರಸಿದ್ಧಿಯಾಗಿದೆ ಎಂದು ತಿಳಿಸಿದರು.

ಪರಮಪೂಜ್ಯ ಜಗದ್ಗುರುಗಳು ಷಡಕ್ಷರಿಯವರ ಸಣ್ಣ ಸಣ್ಣ ಲೇಖನಗಳು

ಜನರ ಮನಸ್ಸಿಗೆ ಮುಟ್ಟುವಂಥವು. ಚೈತನ್ಯಕ್ಕೆ ಸ್ಫೂರ್ತಿ ದೊರೆತರೆ ಅದು ವಿಕಾಸಗೊಳ್ಳುತ್ತಾ ಹೋಗುತ್ತದೆ ಎಂಬುದಕ್ಕೆ ಅವರ ಬರವಣಿಗೆ ಉತ್ತಮ ನಿದರ್ಶನ. ಜಗತ್ತಿನ ವೇಗಕ್ಕೆ ತಕ್ಕಂತೆ ಅವರ ಲೇಖನಗಳು ಓದುಗರಿಗೆ ಆತ್ಮೀಯವಾಗಿವೆ. ಅವರು ಯಶಸ್ವಿ ಉದ್ಯಮಿಗಳು ಹಾಗೂ ಉತ್ತಮ ಲೇಖಕರೂ ಆಗಿದ್ದಾರೆ. ಅವರ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಓದುಗರ ಕೈ ಸೇರಿವೆ. ಸುದ್ದಿಗಿಂತ ಮೊದಲು ಅವರ ಲೇಖನಗಳನ್ನು ಓದುವ ಓದುಗರು ಅವರಿಗಿದ್ದಾರೆ. ಜಗತ್ತಿನ ಕಲ್ಯಾಣಕ್ಕಾಗಿ ವೈಯಕ್ತಿಕ ಸುಖ–ದುಃಖಗಳನ್ನು ಬದಿಗೊತ್ತಬೇಕು. ಕರ್ತವ್ಯಪ್ರಜ್ಞೆ, ಸಾಧನೆ, ಪರಿಕಲ್ಪನೆ ಹೀಗೆ ಎಲ್ಲವನ್ನು ಅವರ ಕೃತಿ ಒಳಗೊಂಡಿದೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ಮನು ಬಳಿಗಾರ್‌ರವರು ಸತತವಾದ ಅಧ್ಯಯನ ಮತ್ತು ನಿರಂತರ ಓದು ಉತ್ತಮ ಬರಹಗಾರನನ್ನಾಗಿ ಮಾಡಬಲ್ಲದು ಎಂಬುದಕ್ಕೆ ಷಡಕ್ಷರಿಯವರು ಉತ್ತಮ ಉದಾಹರಣೆ. ಮೂರು ದಶಕಗಳ ತಪಸ್ಸಿನ ರೀತಿಯ ಅಧ್ಯಯನದಿಂದ ಷಡಕ್ಷರಿಯವರಲ್ಲಿನ ಸುಪ್ತವಾದ ಪ್ರತಿಭೆ ಹೊರಬರಲು ಸಾಧ್ಯವಾಗಿದೆ ಎಂದರು.

ವಿಶ್ವವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ವಿಶ್ವೇಶ್ವರ ಭಟ್‌ರವರು ಜೀವನಕ್ಕೆ ಹತ್ತಿರವಾದ ಪ್ರಸಂಗಗಳನ್ನು ಷಡಕ್ಷರಿಯವರು ಬರೆಯುತ್ತಾರೆ. ಆರಂಭದಲ್ಲಿ ನಾನು ಸಂಪಾದಕನಾಗಿದ್ದ ದಿನಪತ್ರಿಕೆಯಲ್ಲಿ ಅವರು ಬರೆಯಲು ಪ್ರಾರಂಭಿಸಿದಾಗ ಅವರ ಅಂಕಣ ಒಂದೇ ವಾರದಲ್ಲಿ ಜನಪ್ರಿಯಗೊಂಡಿತು. ಪತ್ರಿಕೆಯ ಸಂಪಾದಕೀಯವಿಲ್ಲದಿದ್ದರೂ ಅವರ ಅಂಕಣ ಇರಲೇಬೇಕಾಗಿತ್ತು. ಅಷ್ಟರಮಟ್ಟಿಗೆ ಅವರು ಓದುಗರಿಗೆ ಪ್ರಿಯವಾಗಿದ್ದರು. ಸಮಾಜದಲ್ಲಿ ಪರಿವರ್ತನೆ ಬಯಸುವವರಿಗೆ ಹಾಗೂ ಜೀವನದಲ್ಲಿ ಜಿಗುಪ್ಸೆಗೊಂಡವರಿಗೆ ಹೊಸ ಬದುಕನ್ನು ಕಟ್ಟಿಕೊಳ್ಳಲು ಅವರ ಕೃತಿಗಳು ದಾರಿದೀಪವಾಗಿವೆ. ನಾಡಿನ ಜನರ ಮನಸ್ಸನ್ನು ಅವರು ತಟ್ಟಿದ ರೀತಿ ಅದ್ಭುತವಾದುದು ಎಂದು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿಗಳಾದ ಡಾ. ಸಿ. ಸೋಮಶೇಖರ್‌ರವರು ಈ ಕೃತಿ ಸಾಧನೆ ಮಾಡುವವರಿಗೆ ಕೈಪಿಡಿ, ವಿದ್ಯಾರ್ಥಿಗಳಿಗೆ ಅಧ್ಯಯನ ಸಾಮಗ್ರಿ, ನಿರಾಶಾವಾದಿ ಗಳಿಗೆ ಆಶಾವಾದ. ಆತ್ಮೀಯವಾದ ಹೃದಯಸ್ಪರ್ಶಿ ಜ್ಞಾನದ ದೀವಿಗೆಯಾಗಿದೆ ಎಂದರು.

ಲೇಖಕರಾದ ಶ್ರೀ ಎಸ್. ಷಡಕ್ಷರಿಯವರು ಜೆಎಸ್‌ಎಸ್ ಸಂಸ್ಥೆಯ ಹಿರಿಯ ವಿದ್ಯಾರ್ಥಿಯಾದ ತನಗೆ ಪೂಜ್ಯರು ಮಾಡಿದ ಮಾರ್ಗದರ್ಶನ, ನೀಡಿದ ಪ್ರೋತ್ಸಾಹ ಮತ್ತು ಬರೆಯಲು ಪ್ರೇರೇಪಿಸಿದ ವಿಶ್ವೇಶ್ವರ ಭಟ್‌ರ ಪ್ರೇರಣೆಯನ್ನು ಸ್ಮರಿಸಿದರು.

ಚಿ. ಅದೀಶ್ ಮತ್ತು ಚಿ. ಸುದಿಷ್ಣ ಪ್ರಾರ್ಥಿಸಿದರು. ಶ್ರೀ ವೀರೇಂದ್ರ ಸ್ವಾಗತಿಸಿ, ವಂದಿಸಿ ಕಾರ್ಯಕ್ರಮ ನಿರೂಪಿಸಿದರು.

### ಭಗವಂತನಲ್ಲಿ ಶರಣಾಗುವುದೇ ಮೋಕ್ಷಕ್ಕೆ ದಾರಿ

ಭಗವಂತನಿಗೆ ಶರಣಾಗುವುದು ಮೋಕ್ಷದ ಸುಲಭ ಮಾರ್ಗ ಎಂದು ಪರಮಪೂಜ್ಯ ಜಗದ್ಗುರುಗಳು ತಿಳಿಸಿದರು. ನವೆಂಬರ್ 7ರಂದು ಮಂಡ್ಯ ಜಿಲ್ಲೆಯ ಹಲ್ಲೇಗೆರೆಯಲ್ಲಿ ಶಿವಶರಣೆ ಅಮ್ಮಯ್ಯಮ್ಮ ದುರ್ಗೇಗೌಡ ಪ್ರತಿಷ್ಠಾನವು ಶಿವಶರಣೆ ಅಮ್ಮಯ್ಯಮ್ಮನವರ ಸ್ಮರಣಾರ್ಥ ಏರ್ಪಡಿಸಿದ್ದ ಕರ್ನಾಟಕ ರಾಜ್ಯ ಶರಣ ಸಮ್ಮೇಳನದ ಪ್ರಥಮ ಧಾರ್ಮಿಕ ಸಮಾವೇಶವನ್ನು ಉದ್ಘಾಟಿಸಿ ಆಶೀರ್ವದಿಸಿದರು. ಮನುಷ್ಯ ತಾನು ಶಾಶ್ವತವಲ್ಲವೆಂದು ಗೊತ್ತಿದ್ದರೂ ಕೂಡ ಪ್ರಾಪಂಚಿಕ ಸುಖಗಳತ್ತಲೇ ಹೆಚ್ಚು ಆಸಕ್ತನಾಗುತ್ತಾನೆ. ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಎಂಬ ಸತ್ಯವನ್ನು ಮರೆಯುತ್ತಿದ್ದಾನೆ. ಎಲ್ಲಿ ಚಿಂತನೆಗಳು ಇರುತ್ತವೋ ಅಲ್ಲಿ ಪಕ್ವ ವ್ಯಕ್ತಿತ್ವದ ಫಲಗಳು ದೊರಕುತ್ತವೆ. ಹಲ್ಲೇಗೆರೆ ಗ್ರಾಮದ ಅಮ್ಮಯ್ಯಮ್ಮ ಶಿವಶರಣರಾಗಿ 90 ವರ್ಷಗಳ ಕಾಲ ಜೀವಿಸಿ ಅಂತ್ಯಕಾಲದಲ್ಲಿ ಶಿವಪಂಚಾಕ್ಷರಿ ಮಂತ್ರ ಪಠಿಸುತ್ತಾ-ಆಲಿಸುತ್ತಾ ದೇಹಾಂತ್ಯಗೊಂಡಿದ್ದಾರೆ. ಇಂತಹ ಭಕ್ತಿ, ಶ್ರದ್ಧೆಗಳು ಮನುಷ್ಯನ ಆತ್ಮಕ್ಕೆ ಸದಾ ತೃಪ್ತಿಯನ್ನು ಗಳಿಸಿಕೊಡುತ್ತವೆ. ಹೀಗಾಗಿ ಮನುಷ್ಯ ಆಧ್ಯಾತ್ಮ ಚಿಂತನೆಗಳನ್ನು ರೂಢಿಸಿಕೊಳ್ಳಬೇಕೆಂದು ಹೇಳಿದರು.

ಕೊಮ್ಮರಹಳ್ಳಿಯ ಶ್ರೀ ಪುರುಷೋತ್ತಮಾನಂದ ಸ್ವಾಮಿಗಳು ಮೊದಲಾದ ಮಠಾಧೀಶರುಗಳು ಉಪಸ್ಥಿತರಿದ್ದರು. ಮಂಡ್ಯದ ಮೈಶುಗರ್ಸ್‌ನ ಮಾಜಿ ಅಧ್ಯಕ್ಷರಾದ ಶ್ರೀ ನಾಗರಾಜಪ್ಪನವರು ಸಮ್ಮೇಳನಾಧ್ಯಕ್ಷರಾಗಿದ್ದರು. ಶ್ರೀ ಹಲ್ಲೇಗೆರೆ ಶಂಕರ್‌ರವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

### ಯುವವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಬೇಕು

ಯುವವೈದ್ಯರು ಗ್ರಾಮೀಣ ಪ್ರದೇಶಗಳಲ್ಲಿ ಒಂದು ವರ್ಷವಾದರೂ ಸೇವೆ ಸಲ್ಲಿಸಬೇಕು ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್‌ರವರು ನವೆಂಬರ್ 11ರಂದು ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 11ನೇ ಘಟಿಕೋತ್ಸವದ ಭಾಷಣ ಮಾಡುತ್ತಾ ತಿಳಿಸಿದರು. ದೇಶದ ಶೇ. 70ರಷ್ಟು ಜನ ಹಳ್ಳಿಗಳಲ್ಲಿ ವಾಸಿಸುತ್ತಿದ್ದಾರೆ. ಆದರೆ, ಶೇ. 70ರಷ್ಟು ವೈದ್ಯರು ನಗರಗಳಲ್ಲಿ ನೆಲೆಸಲು ಬಯಸುತ್ತಾರೆ. ಹೀಗಾಗಿ, ವೈದ್ಯಕೀಯ ವಿದ್ಯಾರ್ಥಿಗಳು ವ್ಯಾಸಂಗ ಪೂರ್ಣಗೊಳಿಸಿದ ನಂತರ ಮಾನವೀಯತೆಯ ನೆಲೆಗಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಒಂದು ವರ್ಷವಾದರೂ ಸೇವೆ ಸಲ್ಲಿಸಬೇಕು. ಪರಮಪೂಜ್ಯರ ವಿಶೇಷ ಆಶೀರ್ವಾದ ಎಲ್ಲರಿಗೂ ಜೀವನದುದ್ದಕ್ಕೂ ರಕ್ಷಾಕವಚವಾಗಿದೆ. ಆರೋಗ್ಯ ಕ್ಷೇತ್ರದ ಸಂಶೋಧನೆಯಲ್ಲಿ ಜೆಎಸ್‌ಎಸ್ ಸಂಸ್ಥೆಯು ಕರ್ನಾಟಕಕ್ಕೆ ಜಾಗತಿಕ ಮಟ್ಟದಲ್ಲಿ ಹೆಸರು ತಂದುಕೊಟ್ಟಿದೆ. ಇದು ನಳಂದ, ತಕ್ಷಶಿಲಾ ಮಾದರಿಯಲ್ಲಿ ಬೆಳೆಯುವ ಸಾಮರ್ಥ್ಯ ಹೊಂದಿದೆ. ಕೋವಿಡ್ ವಿರುದ್ಧದ ಹೋರಾಟದಲ್ಲೂ ಜೆಎಸ್‌ಎಸ್ ಸಂಸ್ಥೆಯು ಸರ್ಕಾರದೊಂದಿಗೆ ಕೈ ಜೋಡಿಸಿದೆ

ಎಂದು ಶ್ಲಾಘಿಸಿದರು.

ಘಟಿಕೋತ್ಸವವು ಕುಲಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿತು.

ಘಟಿಕೋತ್ಸವದಲ್ಲಿ ಒಟ್ಟು 1,436 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 52 ವಿದ್ಯಾರ್ಥಿಗಳಿಗೆ ಒಟ್ಟು 72 ಪದಕ, 46 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಪದವಿ 5 ವಿದ್ಯಾರ್ಥಿಗಳಿಗೆ ವೈದ್ಯಕೀಯ ಸೂಪರ್ ಸ್ಪೆಷಾಲಿಟಿ ಪದವಿ ವಿತರಿಸಲಾಯಿತು. ವೈದ್ಯಕೀಯ ವಿಜ್ಞಾನದಲ್ಲಿ 102 ಮಂದಿ ಸ್ನಾತಕೋತ್ತರ ಪದವಿ, 28 ಮಂದಿ ಸ್ನಾತಕೋತ್ತರ ಡಿಪ್ಲೊಮಾ ಪದವಿ ಪಡೆದರು. ಜೀವವಿಜ್ಞಾನ ವಿಷಯದಲ್ಲಿ 155 ಮಂದಿ ಪದವಿ ಹಾಗೂ 135 ಮಂದಿ ಸ್ನಾತಕೋತ್ತರ ಪದವಿ, 209 ಮಂದಿ ಎಂ.ಬಿ.ಬಿ.ಎಸ್, 25 ಎಂಡಿಎಸ್, 94 ಬಿಡಿಎಸ್, 163 ಮಂದಿ ಎಂ.ಫಾರ್ಮಾ, 216 ಮಂದಿ ಬಿ.ಫಾರ್ಮಾ ಪದವಿ ಪಡೆದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ಸಚ್ಚಿದಾನಂದ, ಎನ್‌ಎಂಸಿಯ ನಿರ್ದೇಶಕರಾದ ಪ್ರೊ. ಬಿ.ಎನ್. ಗಂಗಾಧರ್, ಶ್ರೀ ಎಸ್. ಸತ್ಯಂ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಮಂಜುನಾಥ್, ಡಾ. ಬಿ. ಸುರೇಶ್, ಡಾ. ಸುರೀಂದರ್ ಸಿಂಗ್, ಡಾ. ಬಿ. ಮಂಜುನಾಥ್, ಡಾ. ಆರ್. ಸುಧೀಂದ್ರ ಭಟ್, ಪ್ರಾಂಶುಪಾಲರುಗಳು ಹಾಗೂ ಡೀನ್‌ಗಳು ಮೊದಲಾದವರು ಉಪಸ್ಥಿತರಿದ್ದರು.

**ಗೊರುಪ ಸಾಮಾಜಿಕ ಕಳಕಳಿ ಮೆಚ್ಚುವಂಥದ್ದು**

ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದ ಶ್ರೀ ಗೊ.ರು. ಪರಮೇಶ್ವರಪ್ಪನವರ ಸಾಮಾಜಿಕ ಕಳಕಳಿ ಮೆಚ್ಚುವಂಥದ್ದು ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 11ರಂದು ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಖಿಲ ಭಾರತ ವೀರಶೈವ ಮತ್ತು ಲಿಂಗಾಯತ ಮಹಾಸಭಾ, ಶರಣ ಸಾಹಿತ್ಯ ಪರಿಷತ್ತಿನ ಗ್ರಾಮಾಂತರ ಮತ್ತು ನಗರ ಘಟಕ, ಕದಳಿ ಮಹಿಳಾ ವೇದಿಕೆ, ಬಸವ ಬಳಗಗಳ ಒಕ್ಕೂಟ, ರೋಟರಿ ಮೈಸೂರು ಉತ್ತರ, ನಗುಮುಖ ಗೆಳೆಯರ ಬಳಗದ ವತಿಯಿಂದ ಆಯೋಜಿಸಲಾಗಿದ್ದ ಗೊರುಪ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು. ಅವರು ವೃತ್ತಿಯಲ್ಲಿ ಇಂಜಿನಿಯರ್ ಆಗಿದ್ದರು. ಪ್ರವೃತ್ತಿಯಲ್ಲಿ ಸಾಹಿತ್ಯ, ಸಂಗೀತ, ಕಲೆ, ಸಂಸ್ಕೃತಿ ಬಗೆಗೆ ಅಪಾರ ಆಸಕ್ತಿ ಹೊಂದಿದ್ದರು. ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಜೀವನ ಸಾರ್ಥಕವಾಗುವಂತೆ ಶ್ರಮಿಸಿದರು. ವಿವಿಧ ಸಂಘಟನೆಗಳನ್ನು ಒಟ್ಟುಗೂಡಿಸಿ ಒಂದೇ ಸೂರಿನಡಿ ಬಸವ ಜಯಂತಿ ಹಾಗೂ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಯಾದರು ಎಂದು ತಿಳಿಸಿದರು.

ಸಾಹಿತಿಗಳಾದ ಶ್ರೀ ಗೊ.ರು. ಚನ್ನಬಸಪ್ಪನವರು ನಾನು ಹುಟ್ಟಿನಲ್ಲಿ ಹಿರಿಯ.

ಪರಮೇಶ್ವರಪ್ಪ ಸಾವಿನಲ್ಲಿ ಹಿರಿಯನಾದ. ನಮ್ಮಿಬ್ಬರ ನಡುವೆ ದಾಯಾದಿ ಮತ್ಸರ ಇರಲಿಲ್ಲ. ಆತನನ್ನು ಬಿಟ್ಟು ಬದುಕುವುದು ಕಷ್ಟ ಎಂದು ಹೇಳಿದರು.

ಗಾವಡಗೆರೆ ಮಠದ ಶ್ರೀ ನಟರಾಜ ಸ್ವಾಮಿಗಳು, ಮಹಾಸಭಾದ ಜಿಲ್ಲಾಧ್ಯಕ್ಷರಾದ ಶ್ರೀ ಕಾನ್ಯ ಶಿವಮೂರ್ತಿ, ಪ್ರೊ. ಎಂ. ಕೃಷ್ಣೇಗೌಡ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷರಾದ ಶ್ರೀ ಎಂ. ಚಂದ್ರಶೇಖರ್, ಮಾಜಿ ವಿಧಾನಪರಿಷತ್ ಸದಸ್ಯರಾದ ಶ್ರೀ ತೋಂಟದಾರ್ಯ, ಮೈಸೂರು ವಿ.ವಿಯ ಸಂದರ್ಶಕ ಪ್ರಾಧ್ಯಾಪಕರಾದ ಡಾ. ಸಿ. ನಾಗಣ್ಣ, ಶ್ರೀ ಎಸ್.ಜಿ. ಶಿವಶಂಕರ್‌ರವರು ಅವರ ವ್ಯಕ್ತಿತ್ವದ ಕುರಿತು ಮಾತನಾಡಿದರು. ಶ್ರೀ ನಿತಿನ್ ರಾಜಾರಾಮಶಾಸ್ತ್ರಿ ಮತ್ತು ತಂಡದವರು ಗಾಯನ ನೀಡಿದರು. ಶ್ರೀ ಮ.ಗು. ಸದಾನಂದಯ್ಯ ಕಾರ್ಯಕ್ರಮ ನಿರೂಪಿಸಿದರು.

**ಉತ್ತಮ ಗುಣಮಟ್ಟದ ಔಷಧಿಗಳು ಕೈಗೆಟುಕುವ ದರದಲ್ಲಿ ದೊರಕಬೇಕು**

ಉತ್ತಮ ಗುಣಮಟ್ಟದ ಔಷಧಿಗಳು ಕೈಗೆಟುಕುವ ದರದಲ್ಲಿ ಜನರಿಗೆ ದೊರಕಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 19ರಂದು ಮೈಸೂರು ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಆಯುರ್ವೇದ ಔಷಧಗಳ ಉತ್ಪಾದನಾ ಘಟಕ ಹಾಗೂ ಫಾರ್ಮಸಿಯನ್ನು ಉದ್ಘಾಟಿಸಿ ಚಿಕಿತ್ಸೆ ಪಡೆಯುವವರ ಸಂಖ್ಯೆ ಹೆಚ್ಚುತ್ತಿರುವುದನ್ನು ಮನಗಂಡು 28 ವರ್ಷಗಳ ಹಿಂದೆ ಈ ಆಸ್ಪತ್ರೆ ಆರಂಭವಾಯಿತು. ರೋಗಿಗಳಿಗೆ ಬೇಕಾದ ಔಷಧ ಇಲ್ಲಿಯೇ ತಯಾರಿಸಬೇಕು ಎಂಬ ಯೋಚನೆ ಬಹಳ ಸಮಯದಿಂದ ಇತ್ತು. ಈ ಹಿಂದೆ ಸಣ್ಣ ಪ್ರಮಾಣದಲ್ಲಿ ಔಷಧ ತಯಾರಿಸಲಾಗುತ್ತಿತ್ತು. ಈಗ ಇನ್ನಷ್ಟು ಔಷಧ ತಯಾರಿಸಲು ಅನುಮತಿ ಲಭಿಸಿರುವುದರಿಂದ ಘಟಕ ಆರಂಭಿಸಲಾಗಿದೆ. ಗುಣಮಟ್ಟದಿಂದ ಕೂಡಿರುವ ಈ ಔಷಧಿಯನ್ನು ಜನರಿಗೆ ಕಡಿಮೆ ದರದಲ್ಲಿ ಒದಗಿಸುವ ಉದ್ದೇಶ ಹೊಂದಲಾಗಿದೆ. ಈ ಘಟಕದಲ್ಲಿ ತಯಾರಿಸಲಾಗುವ ಔಷಧಿಗಳನ್ನು ಸದ್ಯಕ್ಕೆ ಇಲ್ಲಿಗೆ ಬರುವ ರೋಗಿಗಳಿಗೆ ಮಾತ್ರ ನೀಡಲಾಗುತ್ತದೆ. ಮುಂದಿನ ದಿನಗಳಲ್ಲಿ ಮಾರುಕಟ್ಟೆಗೆ ಬಿಡುಗಡೆಗೊಳಿಸುವ ಚಿಂತನೆಯೂ ಇದೆ ಎಂದು ತಿಳಿಸಿದರು.

ಡಾ. ಸಿ.ಜಿ. ಬೆಟಸೂರಮಠ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಆರ್. ಮಹೇಶ್, ಶ್ರೀ ಮಠ ಮಲ್ಲಿಕಾರ್ಜುನ, ಶ್ರೀ ಎಸ್. ಶಿವಶಂಕರಪ್ಪ, ಶ್ರೀ ಎಂ. ಸಿರಿಯಪ್ಪ, ಡಾ. ಸರ್ಬೇಶ್ವರ್‌ಕರ್, ಕಾಲೇಜಿನ ಬೋಧಕ ಮತ್ತು ಬೋಧಕೇತರರೆಲ್ಲ ಉಪಸ್ಥಿತರಿದ್ದರು.

**ಸುತ್ತೂರು ಶ್ರೀಕ್ಷೇತ್ರದಲ್ಲಿ ಮುಖ್ಯಮಂತ್ರಿಗಳಿಂದ ಅತಿಥಿಗೃಹ ಹಾಗೂ ಇತರ ಕಾಮಗಾರಿಗಳಿಗೆ ಶಿಲಾನ್ಯಾಸ**

ನವೆಂಬರ್ 25ರಂದು ಸುತ್ತೂರು ಶ್ರೀಕ್ಷೇತ್ರದಲ್ಲಿ ಶ್ರೀಮಠದ ಅತಿಥಿಗೃಹ ಮತ್ತು ಶ್ರೀಕ್ಷೇತ್ರದ ಇತರ ಕಾಮಗಾರಿಗಳಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ

ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಶಿಲಾನ್ಯಾಸ ನೆರವೇರಿಸಿದರು.

ಶ್ರೀಕ್ಷೇತ್ರದಲ್ಲಿ ಕರ್ತೃಗದ್ದುಗೆ ಮತ್ತು ಶ್ರೀಮಠಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಪೂಜ್ಯರ ದರ್ಶನಾಶೀರ್ವಾದ ಪಡೆದರು. ನಂತರ ಗ್ರಾಮದೇವತೆ ಶ್ರೀ ದೊಡ್ಡಮ್ಮತಾಯಿ ದೇವಸ್ಥಾನದಲ್ಲಿ ಮೂರ್ತಿ ಉದ್ಘಾಟನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳ, ಗೃಹಸಚಿವರಾದ ಶ್ರೀ ಬಸವರಾಜ ಬೊಮ್ಮಾಯಿ, ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಶಾಸಕರುಗಳಾದ ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಅಡಗೂರು ಹೆಚ್. ವಿಶ್ವನಾಥ್, ಶ್ರೀ ಬಿ. ಹರ್ಷವರ್ಧನ್, ಶ್ರೀ ಸಿ.ಎಸ್. ನಿರಂಜನ ಕುಮಾರ್, ಶ್ರೀ ಎಂ. ಅಶ್ವಿನ್‌ಕುಮಾರ್, ಸಂಸದರಾದ ಶ್ರೀ ವಿ. ಶ್ರೀನಿವಾಸ್ ಪ್ರಸಾದ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಎಸ್. ಶಿವಕುಮಾರಸ್ವಾಮಿ, ಡಾ. ಸಿ.ಜಿ. ಬೆಟಸೂರಮಠ, ರಾಜಕೀಯ ಮುಖಂಡರು, ಅಧಿಕಾರಿಗಳು ಮೊದಲಾದವರು ಉಪಸ್ಥಿತರಿದ್ದರು.

**ದೇವರು ಕೊಟ್ಟಿದ್ದು ದೇವರಿಗೆ ಅರ್ಪಣೆ**

ದೇವಸ್ಥಾನಗಳ ಅಭಿವೃದ್ಧಿಗೆ ಹಣದ ಕೊರತೆಯಿಲ್ಲ. ದೇವರು ಕೊಟ್ಟಿದ್ದನ್ನು ದೇಗುಲಗಳ ಅಭಿವೃದ್ಧಿಗೇ ನೀಡಲಾಗುವುದು ಎಂದು ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ನವೆಂಬರ್ 25ರಂದು ಮುಡುಕುತೊರೆಯ ಶ್ರೀ ಭ್ರಮರಾಂಬಾ ಸಮೇತ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನ ಸಂಕೀರ್ಣದ ಪುನರ್ ನಿರ್ಮಾಣದ ಶಂಕುಸ್ಥಾಪನೆ ನೆರವೇರಿಸಿ ಮಾತನಾಡುತ್ತಾ ದೇಗುಲದ ಪುನರ್ ನಿರ್ಮಾಣಕ್ಕಾಗಿ ಅಗತ್ಯವಾದ ಅನುದಾನ ಬಿಡುಗಡೆ ಮಾಡಲಾಗುವುದು. ಗುತ್ತಿಗೆದಾರರು ತಮಗೆ ಎಷ್ಟು ಬರುತ್ತದೆ ಎಂದು ಯೋಚನೆ ಮಾಡದೆ ಎರಡು ವರ್ಷಗಳಲ್ಲಿ ಈ ದೇಗುಲ ನಿರ್ಮಿಸಬೇಕು. ಸಂಪನ್ಮೂಲದ ಕೊರತೆ ಉಂಟಾಗದಂತೆ ನೋಡಿಕೊಳ್ಳಲಾಗುತ್ತದೆ. ಕೆಲ ದಿನಗಳ ಹಿಂದೆ 136 ದೇಗುಲಗಳ ಅಭಿವೃದ್ಧಿಗೆ ತಲಾ 1 ಕೋಟಿಯಂತೆ 136 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರುಗಳು ದೇಗುಲ ಪುನರ್ ನಿರ್ಮಾಣದ ಶಂಕುಸ್ಥಾಪನೆಯು ಐತಿಹಾಸಿಕ ಕ್ಷಣ. ಮುಖ್ಯಮಂತ್ರಿಗಳು ಆಸಕ್ತಿ ವಹಿಸಿ ದೇಗುಲಕ್ಕೆ ಅನುದಾನ ನೀಡಿದ್ದಾರೆ. ಈ ಭಾಗದಲ್ಲಿ ಇದೊಂದು ಅದ್ಭುತವಾದ ಕಾರ್ಯವಾಗಲಿದೆ. ಪುಣ್ಯ ಕೆಲಸಗಳನ್ನು ಮಾಡುತ್ತಾ ಹೋದರೆ ಪುಣ್ಯ ತಾನಾಗಿಯೇ ಒದಗಿಬರುತ್ತದೆ. ಈ ಬಾರಿ ಪಂಚಲಿಂಗ ದರ್ಶನ ಮಹೋತ್ಸವವನ್ನು ಸಾಂಪ್ರದಾಯಿಕವಾಗಿ, ಶಾಸ್ತ್ರೋಕ್ತವಾಗಿ ನಡೆಸಲಾಗುತ್ತಿದೆ. ಹೆಚ್ಚು ಜನಸಂದಣಿ ಸೇರಬಾರದು. ಇದಕ್ಕೆ ಭಕ್ತರು

ಸಹಕರಿಸಬೇಕು ಎಂದು ಹೇಳಿದರು.

ಉಪ ಮುಖ್ಯಮಂತ್ರಿಗಳಾದ ಗೋವಿಂದ ಕಾರಜೋಳರವರು ತಲಕಾಡು ಪಂಚಲಿಂಗ ದರ್ಶನ ಮಹೋತ್ಸವ ಪ್ರಯುಕ್ತ ಅಭಿವೃದ್ಧಿ ಕಾಮಗಾರಿಗಳಿಗೆ 17 ಕೋಟಿ ನೀಡಲು ಮುಖ್ಯಮಂತ್ರಿಗಳು ಸೂಚನೆ ನೀಡಿದ್ದಾರೆ. ಆರ್ಥಿಕ ಸಂಕಷ್ಟದಲ್ಲೂ ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ನಿಂತಿಲ್ಲ. ಮುಖ್ಯಮಂತ್ರಿಗಳು ಒಂಟಿ ಸಲಗದಂತೆ ಓಡಾಡಿ ಕೆಲಸ ಮಾಡಿದ್ದಾರೆ. ದೇಗುಲ, ಮಠಗಳಿಗೆ ನೂರಾರು ಕೋಟಿ ಅನುದಾನವನ್ನು ಬಿಡುಗಡೆ ಮಾಡಿದ್ದಾರೆ ಎಂದು ಹೇಳಿದರು.

ಮುಜರಾಯಿ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ, ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಶ್ರೀ ಎಂ. ಅಶ್ವಿನ್ ಕುಮಾರ್, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಪರಿಮಳಾ ಶ್ಯಾಂ, ಉಪಾಧ್ಯಕ್ಷರಾದ ಶ್ರೀಮತಿ ಗೌರಮ್ಮ ಸೋಮಶೇಖರ್, ಜಿಲ್ಲಾಧಿಕಾರಿಗಳಾದ ಶ್ರೀಮತಿ ರೋಹಿಣಿ ಸಿಂಧೂರಿ, ಜಿಲ್ಲಾ ಪಂಚಾಯಿತಿ ಸಿಇಒ ಶ್ರೀಮತಿ ಡಿ. ಭಾರತಿ, ದೇಗುಲ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್.ಪಿ. ಮಂಜುನಾಥ್, ಪ್ರಧಾನ ಕಾರ್ಯದರ್ಶಿಗಳಾದ ಡಾ. ನಂದೀಶ್ ಹಂಚೆ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಚ್.ಬಿ. ನಟೇಶ್ ಮೊದಲಾದವರು ಉಪಸ್ಥಿತರಿದ್ದರು.

## ಮಹದೇಶ್ವರರು ಕೋಟ್ಯಾಂತರ ಭಕ್ತರ ಆರಾಧ್ಯ ದೈವ

ಮಹದೇಶ್ವರರು ಜಾತಿ ವ್ಯವಸ್ಥೆಯನ್ನು ಮೀರಿದ ಕೋಟ್ಯಾಂತರ ಭಕ್ತರ ಆರಾಧ್ಯ ದೈವವಾಗಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳು ನವೆಂಬರ್ 26ರಂದು ಹನೂರು ತಾಲ್ಲೂಕು ಶ್ರೀ ಮಲೈ ಮಹದೇಶ್ವರಸ್ವಾಮಿ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡುತ್ತಾ ತಿಳಿಸಿದರು. ಅಚಲವಾದ ಶ್ರದ್ಧೆ ನಿಷ್ಠೆಯಿಂದ ಪ್ರತಿಯೊಬ್ಬರೂ ಮಹದೇಶ್ವರರನ್ನು ಆರಾಧಿಸುತ್ತಾರೆ. ಬೆಟ್ಟಗುಡ್ಡ ಪ್ರದೇಶದಲ್ಲಿ ಈ ಕ್ಷೇತ್ರ ಇರುವುದರಿಂದ ಇಲ್ಲಿ ಮೂಲ ಸೌಕರ್ಯಗಳನ್ನು ಕಲ್ಪಿಸುವುದು ಅತ್ಯಂತ ಅವಶ್ಯಕ. ಈಗಾಗಲೇ ಹಲವು ಕೆಲಸಗಳು ನಡೆದಿವೆ, ಇನ್ನಷ್ಟು ಆಗಬೇಕಿದೆ. ಕಾಲ್ನಡಿಗೆಯಲ್ಲಿ ಬರುವ ಲಕ್ಷಾಂತರ ಭಕ್ತರ ಅನುಕೂಲಕ್ಕಾಗಿ ಸುಸಜ್ಜಿತ ಮೆಟ್ಟಿಲುಗಳನ್ನು ನಿರ್ಮಿಸುವ ಯೋಜನೆ ಈಗ ಅನುಷ್ಠಾನಕ್ಕೆ ಬರುತ್ತಿದೆ. ಅದೇ ರೀತಿ ನಾಗಮಲೆಗೂ ಸಹಸ್ರಾರು ಭಕ್ತರು ತೆರಳುತ್ತಾರೆ. ಅಲ್ಲಿಗೂ ಭಕ್ತರಿಗೆ ಸುಲಭವಾಗಿ ಹೋಗಿ ಬರಲು ಅನುಕೂಲ ಮಾಡಬೇಕು ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ಸುಂದರ ಹಾಗೂ

ಭಕ್ತಿಪೂರ್ವಕ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಗುರಿಯನ್ನು ರಾಜ್ಯ ಸರ್ಕಾರ ಹಾಗೂ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಹೊಂದಿದೆ. ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಸರ್ಕಾರ ಕೆಲಸ ಮಾಡುತ್ತದೆ. ಈಗಾಗಲೇ ಹಲವು ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಇನ್ನೂ ಹಲವು ಪ್ರಮುಖ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. ಈಗ ಕೈಗೆತ್ತಿಕೊಳ್ಳಲಾಗಿರುವ ಯೋಜನೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲಾಗುವುದು. ಅಮಾವಾಸ್ಯೆ, ಜಾತ್ರೆಗಳ ಸಂದರ್ಭದಲ್ಲಿ ಲಕ್ಷಾಂತರ ಭಕ್ತರು ಭೇಟಿ ನೀಡುವ ಈ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕಾದ ಅಗತ್ಯವಿದೆ. ಭಕ್ತರಿಗೆ ಎಲ್ಲ ಸೌಕರ್ಯಗಳನ್ನು ಕಲ್ಪಿಸಿ ಪವಿತ್ರ ಯಾತ್ರಾಸ್ಥಳವನ್ನಾಗಿ ಮಾಡುವ ಉದ್ದೇಶ ನಮ್ಮದು. ಕ್ಷೇತ್ರವು ಪ್ರಾಕೃತಿಕ ಸೊಬಗಿನಿಂದ ಕೂಡಿದ್ದು, ಈ ಸುಂದರ ಪರಿಸರವನ್ನು ಕಾಪಾಡುವುದು ನಮ್ಮ ಕರ್ತವ್ಯ. ಸುತ್ತಮುತ್ತಲಿನ ಪರಿಸರವನ್ನು ಪ್ಲಾಸ್ಟಿಕ್ ಮುಕ್ತಗೊಳಿಸಬೇಕು ಎಂದು ಹೇಳಿದರು.

ಉಪಮುಖ್ಯಮಂತ್ರಿಗಳಾದ ಶ್ರೀ ಗೋವಿಂದ ಕಾರಜೋಳರವರು ಈಗ ಶಂಕುಸ್ಥಾಪನೆ ಮಾಡಿರುವ ಯೋಜನೆಗಳೂ ಸೇರಿದಂತೆ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯ ವಿವಿಧ ಯೋಜನೆಗಳಿಗೆ 380 ಕೋಟಿ ರೂ. ಅನುದಾನ ನೀಡಲಾಗಿದೆ. ನಿಗದಿತ ಅವಧಿಯೊಳಗೆ ಉತ್ತಮ ಗುಣಮಟ್ಟದ ಕಾಮಗಾರಿ ನಡೆಸಲಾಗುವುದು ಎಂದು ತಿಳಿಸಿದರು. ಶಾಸಕರಾದ ಶ್ರೀ ಆರ್. ನರೇಂದ್ರರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಾಲೂರು ಮಠದ ಶ್ರೀ ಗುರುಸ್ವಾಮಿಗಳು ಹಾಗೂ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಮುಜರಾಯಿ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಎಸ್. ಸುರೇಶ್‌ಕುಮಾರ್, ಶಾಸಕರುಗಳಾದ ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎನ್.ಮಹೇಶ್, ಶ್ರೀ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಎಂ.ಅಶ್ವಿನಿ, ಜಿಲ್ಲಾಧಿಕಾರಿಗಳಾದ ಡಾ. ಎಂ.ಆರ್. ರವಿ, ಪ್ರಾಧಿಕಾರದ ಕಾರ್ಯದರ್ಶಿಗಳಾದ ಶ್ರೀ ಜಯವಿಭವಸ್ವಾಮಿ, ಐಜಿಪಿ ಶ್ರೀ ವಿಫುಲ್ ಕುಮಾರ್, ಎಸ್‌ಪಿ ಶ್ರೀಮತಿ ದಿವ್ಯ ಸಾರಾ ಥಾಮಸ್ ಮೊದಲಾದವರು ಉಪಸ್ಥಿತರಿದ್ದರು.

□

## ಪ್ರಸಾದ



### ಕೃತಿ-ಸ್ವೀಕೃತಿ

**ಯುವಜನತೆಗೆ ಸ್ಫೂರ್ತಿ**
ಲೇ.: ಬಾಲಚಂದ್ರ ಎಂ.
ಪ್ರ: ಶ್ರೀ ಸಿದ್ಧಲಿಂಗ ಸ್ವಾಮಿಗಳು
ಅಧ್ಯಕ್ಷರು, ಪವಡ ಶ್ರೀ ಶ್ರೀ ಬಸವಣ್ಣ
ದೇವರ ಮಠ, ನೆಲಮಂಗಲ
ಬೆಂಗಳೂರು ಜಿಲ್ಲೆ
ಪು. 168, ಬೆಲೆ: 150/-

**ಸತ್ಸಂಗ 108**
ಲೇ.: ಮೃತ್ಯುಂಜಯ ಸ್ವಾಮೀಜಿ
ಹಿರೇಮಠ
ಪ್ರ.: ರಾಜಗುರು ಪ್ರಕಾಶನ
ಗಂದಿಗವಾಡ
ಖಾನಾಪುರ ತಾಲ್ಲೂಕು
ಬೆಳಗಾವಿ ಜಿಲ್ಲೆ
ಪು. 316, ಬೆಲೆ: 350/-

**ಹೊನ್ನಾಳಿಯ ಹೊನ್ನು**
**ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರಿಗೆ ಶ್ರದ್ಧಾಂಜಲಿ**
ಸಂ.: ಡಾ. ಎಚ್.ಟಿ. ಶೈಲಜ
ಸರಸ್ವತಿಪುರಂ, ಮೈಸೂರು
ಪ್ರ.: ಪ್ರಭುದೇವ ಪ್ರಕಾಶನ
ಸರಸ್ವತಿಪುರಂ, ಮೈಸೂರು
ಪು. 376, ಬೆಲೆ: 300/-

**ಶರಣ ರತ್ನ**
ಸಂ.: ಡಾ. ಎಚ್.ಟಿ. ಶೈಲಜ
ಸರಸ್ವತಿಪುರಂ, ಮೈಸೂರು
ಪ್ರ.: ಪ್ರಭುದೇವ ಪ್ರಕಾಶನ
ಸರಸ್ವತಿಪುರಂ, ಮೈಸೂರು
ಪು. 956, ಬೆಲೆ: 750/-

**ಬಿಲ್ವಶ್ರೀ ತ್ರಿದಳ (ವಚನ ಸಂಪದ)**
ಲೇ.: ಲೀಲಾ ಬಿಲ್ವಂಕೊಂಡಿ ಹಿರೇಮಠ
ಪ್ರ.: ಶಿವಚರಣ ಪ್ರಕಾಶನ, ರಾಯಚೂರು
ಜಿ.ಪಿ. ನಗರ, ಬೆಂಗಳೂರು
ಪು. 132, ಬೆಲೆ: 100/-

**ಮಾತೃಶ್ರೀ ತ್ರಿದಳ (ವಚನ ಸಂಪದ)**
ಲೇ.: ಲೀಲಾ ಚಿಲ್ವಂಕೊಂಡಿ ಹಿರೇಮಠ
ಪ್ರ.: ಶಿವಶರಣ ಪ್ರಕಾಶನ, ರಾಯಚೂರು
ಜಿ.ಪಿ. ನಗರ, ಬೆಂಗಳೂರು
ಪು. 128, ಬೆಲೆ: 100/-

**ನಮ್ಮವರು (ಬಳಗದವರ ನೆನಪಿನ ಬುತ್ತಿ)**
ಲೇ.: ಲೀಲಾ ಬಿಲ್ವಂಕೊಂಡಿ ಹಿರೇಮಠ
ಪ್ರ.: ಶಿವಶರಣ ಪ್ರಕಾಶನ, ರಾಯಚೂರು
ಜಿ.ಪಿ. ನಗರ, ಬೆಂಗಳೂರು
ಪು. 132, ಬೆಲೆ: 100/-

**ರೈತರ ಆತ್ಮಹತ್ಯೆ**
**(ಸಾವಯವ ಕೃಷಿಯೊಂದೇ ಪರಿಹಾರ)**
ಲೇ.: ಬಿ.ಆರ್. ರಮೇಶ್
ಪ್ರ.: ಶಿವಶರಣ ಪ್ರಕಾಶನ, ರಾಯಚೂರು
ಜಿ.ಪಿ. ನಗರ, ಬೆಂಗಳೂರು
ಬೆಲೆ: 80/-

**ಜನಪ್ರಿಯ ವಚನ ನಿಘಂಟು**
ಲೇ.: ಡಾ. ಸಂಗಮೇಶ ಸವದತ್ತಿಮಠ
ಪ್ರ.: ರೂಪರಶ್ಮಿ ಪ್ರಕಾಶನ
ಬೆಳಗಾವಿ ರಸ್ತೆ, ಧಾರವಾಡ
ಪು. 362, ಬೆಲೆ: 250/-

**ಹುಲಿಯೂರುದುರ್ಗದ ಸಿದ್ಧಗಂಗಾ ಮಠದ ಇತಿಹಾಸ**
ಲೇ.: ಸಿದ್ಧಶ್ರೀ
ಪ್ರ. ಸಿದ್ಧಶ್ರೀ ಪ್ರಕಾಶನ
ಶ್ರೀ ಸಿದ್ಧಗಂಗಾ ಮಠ
ಹುಲಿಯೂರುದುರ್ಗ
ಪು. 16, ಬೆಲೆ: 15/-

**ಶತಮಾನದ ಸಂತ**
ಲೇ.: ನೇ.ಭ. ರಾಮಲಿಂಗಶೆಟ್ಟಿ
ಪ್ರ.: ಸ್ನೇಹ ಬುಕ್‌ಹೌಸ್
ಶ್ರೀನಗರ, ಬೆಂಗಳೂರು
ಪು. 208, ಬೆಲೆ: 160/-

## ಲೇಖಕರ ವಿಳಾಸ

**ಡಾ. ಡಿ.ಎ. ಶಂಕರ್**
#995, ದೊಡ್ಡೇರಿ ಮನೆ
ಅಗ್ನಿಹಂಸ ರಸ್ತೆ, ಕುವೆಂಪು ನಗರ
ಮೈಸೂರು 570023
ಮೊ: 7259757198

**ಡಾ. ಕಾ. ವೆಂ. ಶ್ರೀನಿವಾಸಮೂರ್ತಿ**
#965, 'ಅಕ್ಷರ', 1ನೆಯ ಮುಖ್ಯ ರಸ್ತೆ
ಚಿನ್ನಣ್ಣ ಬಡಾವಣೆ, ಕಾವಲು ಭೈರಸಂದ್ರ
ಬೆಂಗಳೂರು 560032
ಮೊ: 9343878368


**ಡಾ. ಎಸ್.ಪಿ. ಉಮಾದೇವಿ**
#ಟಿ1, 3ನೆಯ ಮಹಡಿ
ದುರ್ಗ ಅಪಾರ್ಟ್‌ಮೆಂಟ್
ನಂಜುಮಳಿಗೆ
ಮೈಸೂರು 570004
ಮೊ: 9886091525

**ಡಾ. ಸಿ. ಶಿವಕುಮಾರಸ್ವಾಮಿ**
ನಂ. 6, 1ನೇ ಅಡ್ಡರಸ್ತೆ
ಪಿ.ಎಫ್ ಬಡಾವಣೆ, ವಿಜಯನಗರ
ಬೆಂಗಳೂರು 560040
ಮೊ: 9886791256

**ಡಾ. ಪಿ.ಕೆ. ರಾಜಶೇಖರ**
ವಿಶ್ರಾಂತ ಪ್ರಾಧ್ಯಾಪಕರು
#38, 8ನೇ ಮುಖ್ಯರಸ್ತೆ, 23ನೇ ಕ್ರಾಸ್
3ನೇ ಹಂತ, 'ಇ' ಬ್ಲಾಕ್, ವಿಜಯನಗರ
ಮೈಸೂರು – 570030
ಮೊ: 9448938563




ಮೈಸೂರಿನ ಮಾನಸಗಂಗೋತ್ರಿಯಲ್ಲಿ ಆಯೋಜಿಸಿದ್ದ ಕೃಷಿವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರರವರ 'ಕೃಷಿ ಲೋಕದೊಳಗೆ' ಹಾಗೂ 'ಪ್ಲಾಂಟ್ ಡಾಕ್ಟರ್' ಕೃತಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಬಿಡುಗಡೆಗೊಳಿಸಲಾಯಿತು. ಚಿತ್ರದಲ್ಲಿ ಡಾ. ವೈ.ಡಿ. ರಾಜಣ್ಣ, ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್, ಶ್ರೀ ಭರತ್‌ಗೌಡ, ಡಾ. ಸಿ.ಎಲ್. ಲಕ್ಷ್ಮೀಪತಿಗೌಡ, ಶ್ರೀ ವಾಸು, ಪ್ರೊ. ಕೆ.ಎಸ್. ರಂಗಪ್ಪ, ಡಾ. ವಸಂತಕುಮಾರ್ ತಿಮಕಾಪುರರವರುಗಳಿದ್ದಾರೆ (2.11.2020)



ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಏರ್ಪಡಿಸಿದ್ದ 'ಸಂಸ್ಕೃತ–ಸಂಸ್ಕೃತಿ' ವಿಶೇಷ ಉಪನ್ಯಾಸ ಕಾರ್ಯಕ್ರಮದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳು ಕುಲಪತಿಗಳಾದ ಪ್ರೊ. ಕೆ.ಇ. ದೇವನಾಥನ್‌ರವರನ್ನು ಸನ್ಮಾನಿಸುತ್ತಿರುವುದು. ಡಾ. ಪದ್ಮಾ ಶೇಖರ್, ಪ್ರೊ. ಕೆ. ಅನಂತರಾಮು, ಶ್ರೀ ಟಿ.ಎನ್. ಪ್ರಭಾಕರ್, ಶ್ರೀ ಎಚ್.ವಿ. ನಾಗರಾಜರಾವ್, ಡಾ. ಪ್ರಕಾಶ್ ಆರ್. ಪಾಗೋಜಿ, ಶ್ರೀ ವೆಂಕಟೇಶ್ ಹಾಗೂ ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳವರು (6.11.2020)



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಶ್ರೀ ಎಸ್. ಷಡಕ್ಷರಿಯವರ 'ಕ್ಷಣಹೊತ್ತು ಆಣಿಮುತ್ತು' ಕೃತಿಯ 8ನೇ ಭಾಗವನ್ನು ಪರಮಪೂಜ್ಯ ಜಗದ್ಗುರುಗಳು ಬಿಡುಗಡೆಗೊಳಿಸಿದರು. ಚಿತ್ರದಲ್ಲಿ ಶ್ರೀ ವೀರೇಂದ್ರ, ಡಾ. ಮನು ಬಳಿಗಾರ್, ಶ್ರೀ ಎಸ್. ಷಡಕ್ಷರಿ, ಶ್ರೀ ವಿಶ್ವೇಶ್ವರ ಭಟ್, ಡಾ. ಸಿ. ಸೋಮಶೇಖರ್, ಚಿ. ಸುದಿಷ್ಣ, ಶ್ರೀಮತಿ ಅರುಣಾ ಸತೀಶ್, ಚಿ. ಆದೀಶ್ (7.11.2020)



ಮಂಡ್ಯ ಜಿಲ್ಲೆಯ ಹಲ್ಲೇಗೆರೆಯಲ್ಲಿ ಶಿವಶರಣೆ ಅಮ್ಮಯ್ಯಮ್ಮ ದುರ್ಗೇಗೌಡ ಪ್ರತಿಷ್ಠಾನವು ಏರ್ಪಡಿಸಿದ್ದ ಕರ್ನಾಟಕ ರಾಜ್ಯ ಶರಣ ಸಮ್ಮೇಳನದ ಪ್ರಥಮ ಧಾರ್ಮಿಕ ಸಮಾವೇಶವನ್ನು ಉದ್ಘಾಟಿಸುತ್ತಿರುವುದು. ಪರಮಪೂಜ್ಯ ಜಗದ್ಗುರುಗಳು, ಮಠಾಧೀಶರುಗಳು, ಶ್ರೀ ಹಲ್ಲೇಗೆರೆ ಶಂಕರ್, ಶ್ರೀ ನಾಗರಾಜಪ್ಪ ಮೊದಲಾದವರಿದ್ದಾರೆ (7.11.2020)





ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ನಡೆದ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯ 11ನೇ ಘಟಿಕೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಸಚಿವರಾದ ಡಾ. ಕೆ. ಸುಧಾಕರ್‌ರವರು ಚಿನ್ನದ ಪದಕಗಳನ್ನು ವಿತರಿಸುತ್ತಿರುವುದು. ಡಾ. ಸಿ.ಜಿ. ಬೆಟಸೂರಮಠ, ಡಾ. ಸುರೀಂದರ್ ಸಿಂಗ್, ಡಾ. ಬಿ. ಮಂಜುನಾಥ್, ಡಾ. ಬಿ. ಸುರೇಶ್‌ರವರುಗಳಿದ್ದಾರೆ.(11.11.2020)



ಮೈಸೂರು ಜೆಎಸ್ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಆಯುರ್ವೇದ ಔಷಧಗಳ ಉತ್ಪಾದನಾ ಘಟಕ ಹಾಗೂ ಫಾರ್ಮಸಿಗೆ ಪರಮಪೂಜ್ಯ ಜಗದ್ಗುರುಗಳು ಚಾಲನೆ ನೀಡಿದರು. ಡಾ. ಶಿವಪ್ರಸಾದ್ ಹುಡೇದ್, ಶ್ರೀ ಎಸ್.ಪಿ. ಮಂಜುನಾಥ್, ಡಾ. ಸಿ.ಜಿ. ಬೆಟಸೂರಮಠ, ಡಾ. ಜಗದೀಶ್ ಮಿತ್ತಿಯವರಿದ್ದಾರೆ (19.11.2020)



ಸುತ್ತೂರು ಶ್ರೀಕ್ಷೇತ್ರಕ್ಕೆ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾದ ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಶ್ರೀಮತಿ ಬಿ.ವೈ. ಅರುಣಾದೇವಿಯವರು ಭೇಟಿನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು (24.11.2020)



ಸುತ್ತೂರು ಶ್ರೀ ಕ್ಷೇತ್ರಕ್ಕೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಾದ ಶ್ರೀ ಪ್ರವೀಣ್ ಸೂದ್‌ರವರು ತಮ್ಮ ಧರ್ಮಪತ್ನಿ ಶ್ರೀಮತಿ ವಿನೀತಾ ಸೂದ್ ಸಮೇತ ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರ ಆಶೀರ್ವಾದ ಪಡೆದರು. ಚಿತ್ರದಲ್ಲಿ ಶ್ರೀ ಎಸ್.ಪಿ. ಮಂಜುನಾಥ್‌ರವರಿದ್ದಾರೆ (24.11.2020)



ಸುತ್ತೂರು ಶ್ರೀಕ್ಷೇತ್ರಕ್ಕೆ ಆಗಮಿಸಿದ್ದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಕರ್ತೃಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸಿದರು (25.11.2020)




ಸುತ್ತೂರು ಶ್ರೀಕ್ಷೇತ್ರದಲ್ಲಿ ಅತಿಥಿಗೃಹ ಮತ್ತು ಶ್ರೀಕ್ಷೇತ್ರದ ಇತರ ಕಾಮಗಾರಿಗಳಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಶಿಲಾನ್ಯಾಸ ನೆರವೇರಿಸಿದರು. ಡಾ. ಯತೀಂದ್ರ ಸಿದ್ದರಾಮಯ್ಯ, ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಗೋವಿಂದ ಕಾರಜೋಳ, ಶ್ರೀ ಎಸ್.ಟಿ. ಸೋಮಶೇಖರ್‌ರವರುಗಳಿದ್ದಾರೆ (25.11.2020)

Registered with the Registrar of Newspapers in India Under No. 50622/86
'Prasada' Bi-Monthly, Vol. 35 Issue No. 6, November-December 2020




ಮೈಸೂರು ಶ್ರೀ ಸುತ್ತೂರು ಶಾಖಾಮಠದಲ್ಲಿ ಗದಗಿನ ಜಗದ್ಗುರು ಶ್ರೀ ಶಿವಾನಂದ ಬೃಹನ್ಮಠದ ನೂತನ ಜಗದ್ಗುರು ಶ್ರೀ ಸದಾಶಿವಾನಂದ ಸ್ವಾಮಿಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಅಭಿನಂದಿಸಲಾಯಿತು. ಕುಂದೂರು ಮಠ, ದೇಗುಲ ಮಠ ವಾಟಾಳು ಮಠದ ಶ್ರೀಗಳವರು, ಪ್ರೊ. ಕೆ. ಅನಂತರಾಮು, ಪ್ರೊ. ನೀಲಗಿರಿ ಎಂ. ತಳವಾರ್, ಕುಲಪತಿಗಳಾದ ಪ್ರೊ. ಜಿ. ಹೇಮಂತ್‌ಕುಮಾರ್ ಪ್ರೊ. ಮಲೆಯೂರು ಗುರುಸ್ವಾಮಿಯವರುಗಳಿದ್ದಾರೆ (2.11.2020)